
ಜನಶಕ್ತಿ

ಕನ್ನಡ ವಾರಪತ್ರಿಕೆ
Blog :janashakthi.wordpress.com e-mail : js_weekly@yahoo.com
ಸಂಪುಟ 7, ಸಂಚಿಕೆ 12
ಮಾರ್ಚ್ 24, 2013
ಪುಟ 16 ರೂ. 10/-







ಕಾಂಗ್ರೆಸ್ಸಿಗೆ ಅನಾಯಾಸ ಲಾಭ ತಂದ ಬಿಜೆಪಿ ವೈಫಲ್ಯ



ಇಟಲಿ ನಾವಿಕರಿಂದ ಮೀನುಗಾರರ ಹತ್ಯೆ:
ರಾಜಕೀಯ ಸಾರ್ವಭೌಮತೆಗೆ ಸಂಚಕಾರ



“ಹೆಣ್ಣೆಂಬ ಜನುಮ ಹೊರಬ್ಯಾಡ”



ಭಾರತದಲ್ಲಿ ಸೂಪರ್ ಶ್ರೀಮಂತರು!! ಎಷ್ಟು ಜನ?

ಸಂವಿಧಾನ ವಿರೋಧಿ ಈ ಆಧ್ಯಾತ್ಮಿಕ ವಿ.ವಿ

ಕರಾವಳಿ ಕರ್ನಾಟಕ ಮತ್ತೆ ಎದ್ದಿರುವ ಕೋಮುವಾದಿ ಚಟುವಟಿಕೆಗಳು

ತ್ರಿಪುರಾ : ಎಡರಂಗದ ನಿರ್ಣಾಯಕ ಹೋರಾಟ ಕಾಂಗ್ರೆಸ್‌ನ ಪ್ರತಿಗಾಮಿ ಕೂಟಕ್ಕೆ ಕಾದಿತ್ತು ಭಾರೀ ಪರಾಭವ

–ಎಸ್.ವೈ.ಗುರುಶಾಂತ್

ನಮ್ಮಲ್ಲಿ ಐದು ವರುಷಗಳಲ್ಲಿ ಮೂವರು ಮುಖ್ಯಮಂತ್ರಿಗಳು, ಹತ್ತಾರು ಭ್ರಷ್ಟಾಚಾರದ ಭಾರೀ ಹಗರಣಗಳು!

ಆದರೆ ಇಂತಹುಗಳ ಎಳೆಯುಷ್ಟೂ ನೆರಳಿಲ್ಲದೇ ಮತ್ತೇ ಮತ್ತೆ ಎಡರಂಗ ಅಧಿಕಾರಕ್ಕೆ ಹೇಗೆ ಬರುತ್ತಿದೆ? ಅದರಲ್ಲೂ ಸತತವಾಗಿ ಐದನೆಯ ಬಾರಿ, ಒಟ್ಟು ಏಳು ಬಾರಿ ಅಧಿಕಾರಕ್ಕೆ ಬಂದ ಬಗೆಯಾದರೂ ಎಂತಹುದು ? ಅದೆಂತಹ ಮುಖ್ಯಮಂತ್ರಿ, ಅದೆಂತಹ ಸರಕಾರವಿದ್ದೀತು ಎಂದು ಕೇಳುವವರಿಗೆ ಮತ್ತೇ ಮೂಗಿನ ಮೇಲೆ ಬೆರಳಿಟ್ಟು ಹಾ! ಎನ್ನುವಂತೆ ಮಾಡಿದ ಫಲಿತಾಂಶ ಸಾಧ್ಯವಾದುದು ಹೇಗೆ?

2013 ರ ಈ ಚುನಾವಣಾ ಹೋರಾಟ ಎಡರಂಗದ ಪಾಲಿಗೆ ಅತ್ಯಂತ ನಿರ್ಣಾಯವಾಗಿತ್ತು. ಪಶ್ಚಿಮ ಬಂಗಾಳ, ಕೇರಳ, ಚುನಾವಣೆಗಳಲ್ಲಿ ಎಡ ನೇತೃತ್ವದ ರಂಗಗಳು ಸೋತ ಬಳಿಕ ಇಲ್ಲೇನಾಗುವುದು ಎಂಬ ಆತಂಕ, ಕುತೂಹಲ ಎಲ್ಲೆಡೆ ಮನೆ ಮಾಡಿತ್ತು. ಈ ಬಾರಿ ಎಡರಂಗವನ್ನು ಹೇಗಾದರೂ ಸೋಲಿಸಲೇಬೇಕೆಂದು ಕಾಂಗ್ರೆಸ್ ನೇತೃತ್ವದಲ್ಲಿ ಎಲ್ಲಾ ಪ್ರತಿಗಾಮಿಗಳೂ ಅಣಿ ನೆರೆದಿದ್ದರು. 'ಏನೊಂದೂ ಅಭಿವೃದ್ಧಿ ಮಾಡದ ಎಡರಂಗವನ್ನು ಕಿತ್ತೊಗೆಯಿರಿ' ಎಂಬ ಆಕ್ರಮಣಕಾರಿ ಪ್ರಚಾರವನ್ನು ಕಾಂಗ್ರೆಸ್ ಆರಂಭದಿಂದಲೇ ನಡೆಸಿತು. 'ಕೇಂದ್ರದಿಂದ ನೀಡಿದ ಎಲ್ಲಾ ಹಣವನ್ನು ಇವರು ನುಂಗಿ ಬಿಟ್ಟಿದ್ದಾರೆ'ಂದೂ ಅಪಪ್ರಚಾರವನ್ನು ನಡೆಸಿ 'ಕಾಂಗ್ರೆಸ್ ಗೆಲ್ಲಿಸಿದರೆ ಸಂಪದ್ಭರಿತ, ಸಮೃದ್ಧ ರಾಜ್ಯವನ್ನಾಗಿಸುವುದಾಗಿ'ಯೂ ಹೇಳಿತು. ಮಾತ್ರವಲ್ಲ, ಅದರ 'ಅಲ್ಲಾವುದ್ದೀನ್ ಅಧ್ಬುತ ದೀಪ'ದಂತಹ ಚುನಾವಣಾ ಪ್ರಣಾಳಿಕೆಯನ್ನೂ ಬಿಡುಗಡೆ ಮಾಡಿತು.

ಇಲ್ಲ ಎಂಬುದೇನಿಲ್ಲ!

ಕುಟುಂಬಕ್ಕೆ ಒಬ್ಬರಿಗೆ ಕೆಲಸ ನೀಡುವ ಗ್ಯಾರಂಟಿ, ಸರ್ಕಾರಿ ನೌಕರರಿಗೆ ಕೇಂದ್ರ ಸರಕಾರೀ ನೌಕರರ ವೇತನಕ್ಕೆ ಸಮಾನವಾಗಿ ಸಂಬಳ ಹೆಚ್ಚಳ, ನಿವೃತ್ತಿ ವಯಸ್ಸಿನ ಏರಿಕೆ, ಸಾಮಾಜಿಕ ಪೆನ್‌ಷನ್ ಏರಿಕೆ, ಕಡು ಬಡವರಿಗೆ 7 ಕೆ.ಜಿ. ಅಕ್ಕಿ ಉಚಿತ, ಬಿಪಿಎಲ್ ಕಾರ್ಡ್‌ನವರಿಗೆ ಕೆ.ಜಿ.ಗೆ ಒಂದು ರೂಪಾಯಿಯಂತೆ ತಿಂಗಳಿಗೆ 35ಕೆಜಿ. ಅಕ್ಕಿ ನೀಡಿಕೆ (ಅಕ್ಕಿ ಪೂರೈಕೆಯಲ್ಲಿ ಕಡಿತ ಮಾಡಿದ ಕೇಂದ್ರ ಕಾಂಗ್ರೆಸ್ ನಿಂದ. .?) ಪ್ರಥಮ ವಿಭಾಗದ ಅಂಕ ಗಳಿಸಿದ ಎಲ್ಲಾ 10+2 ವಿಧ್ಯಾರ್ಥಿಗಳಿಗೆ ಉಚಿತ ಲ್ಯಾಪ್ ಟಾಪ್, ನಿರುದ್ಯೋಗ ಭತ್ಯೆ (ಎಷ್ಟು ಅಂತಾ ಇಲ್ಲ), ಒಟ್ಟು 321 ಭರವಸೆಗಳನ್ನೂ ಮೂರೇ ತಿಂಗಳಿನಲ್ಲಿ ಈಡೇರಿಸುವ ವಾಗ್ದಾನವನ್ನು ಕಾಂಗ್ರೆಸ್ ನೀಡಿತು.

ಆ ಪ್ರಣಾಳಿಕೆಯಲ್ಲಿ ಇಲ್ಲ ಎಂಬುದೇ ಏನೂ ಇಲ್ಲ. ಮೇಲಾಗಿ ಸ್ವತಃ ಹಣಕಾಸು ಮಂತ್ರಿ ಚಿದಂಬರಂ, ಯೋಜನಾ ಆಯೋಗದ ಉಪಾದ್ಯಕ್ಷ, ಕಾಂಗ್ರೆಸ್ ನಾಯಕ ಫೆಲಿರೋ ಪ್ರಚಾರಕ್ಕೆ ಬಂದರು. ಕಾಂಗ್ರೆಸ್‌ನ ಈ ಪ್ರಣಾಳಿಕೆಯು ಯೋಜನಾ ಆಯೋಗ ಮತ್ತು ಹಣಕಾಸು ಸಚಿವಾಲಯದಿಂದ ಅನುಮೋದನೆಗೊಂಡಿದೆ ಎಂದೂ ಆದರ ಜಾರಿಯ ಹೊಣೆ ತಮ್ಮದೆಂದೂ ಚಿದಂಬರಮ್ ಆದಿಯಾಗಿ ಬಹಿರಂಗ ಸಭೆಗಳಲ್ಲಿ ಹೇಳಿದರು! ಮೇಲಾಗಿ ಕಾಂಗ್ರೆಸ್ ನ 'ಯುವರಾಜ'ನೆಂದೂ, ಆ ಪಕ್ಷದ ಮುಂದಿನ ನಾಯಕನೆಂದೇ ಬಣ್ಣಿಸಲಾಗುತ್ತಿರುವ ರಾಹುಲ ಗಾಂಧಿ ಪ್ರಚಾರಕ್ಕೆ ಬಂದು ತ್ರಿಪುರಾದ ಜನರನ್ನು ಮರಳು ಮಾಡುವ ಮಾತುಗಳನ್ನಾಡಿ 'ಈ ಬಾರಿ ಎಡರಂಗವನ್ನು ಅಧಿಕಾರದಿಂದ ಹೊರಗೆ 'ತಳ್ಳಿ' ಹಾಕಿ. ಎಂದು ಕರೆ ನೀಡಿದ! ಇದರೊಂದಿಗೆ ಚುನಾವಣೆಯಲ್ಲಿ ಕಾಂಗ್ರೆಸ್ ಪಕ್ಷವು ಹಣದ ಹೊಳೆ (30 ರಿಂದ 32 ಸಾವಿರ ಮತದಾರರಿರುವ ಕ್ಷೇತ್ರಗಳಲ್ಲಿ ರೂ.50 ಲಕ್ಷದವರೆಗೂ ಹಂಚಿದರು, ಕರ್ನಾಟಕದಲ್ಲಿ



ಇದೇನು ಜುಜುಬಿ ಎನ್ನುವಿರೋ!) ಹರಿಸಿತು. ತನ್ನ ರಾಜಕೀಯ ತಂತ್ರವಾಗಿ ಭ್ರಷ್ಟರು, ವಿಛಿದ್ರಕಾರಿಗಳು, ಉಗ್ರಗಾಮಿಗಳು, ಕ್ರಿಮಿನಲ್‌ಗಳು, ಸ್ಥಾಪಿತ ಹಿತಾಸಕ್ತಿಗಳನ್ನು ಅಣಿ ನೆರೆಸಿಕೊಂಡು ಎಡರಂಗದ ವಿರುದ್ಧ ಧಾಳಿ ನಡೆಸಿದರು. ಬುಡಕಟ್ಟು, ಬುಡಕಟ್ಟೇತರರನ್ನು, ಬಂಗಾಲಿ– ಬಂಗಾಲಿಯೇತರರನ್ನು ಎತ್ತಿ ಕಟ್ಟಲು ಹವಣಿಸಿದರು.

ಉನ್ನತ ರಾಜಕೀಯ ಪ್ರಜ್ಞೆ

ಆದರೆ ಇವರ ಯಾವ ಮಾತಿಗೂ, ಆಮಿಷಗಳಿಗೂ ತ್ರಿಪುರಾದ ಜನತೆ ಬಲಿಯಾಗಲಿಲ್ಲ. ನಡೆಸಿದ ಯಾವ ಧಾಳಿಗಳಿಗೂ ಜನ ಸೊಪ್ಪು ಹಾಕಲಿಲ್ಲ. ಕಾಂಗ್ರೆಸ್‌ನ ಈ ಎಲ್ಲಾ ವರಸೆಗಳ ಮರ್ಮ ಏನೆಂದು ಸರಿಯಾಗಿಯೇ ಅವರು ಅರಿತರು. ಆದ್ದರಿಂದ ಅವರು ಕಾಂಗ್ರೆಸ್‌ನ ಪ್ರತಿಗಾಮಿಗಳ ಕೂಟವನ್ನು ತಿರಸ್ಕರಿಸಿ ದಯನೀಯವಾಗಿ ಸೋಲಿಸಿದರು. ಎಡರಂಗವನ್ನು ಪ್ರಚಂಡ ಬಹುಮತದಿಂದ ಆರಿಸಿದರು. ಇಲ್ಲಿ ತ್ರಿಪುರಾದ ಮತದಾರರ ಉನ್ನತ ರಾಜಕೀಯ ಪ್ರಜ್ಞೆ ನಿಜಕ್ಕೂ ಶ್ಲಾಘನೀಯ.

ಹೀಗೆ ತ್ರಿಪುರಾದ ಜನತೆಯು ಎಡರಂಗವನ್ನು ಸಕಾರಾತ್ಮಕ ಮತ ನೀಡಿಯೇ ಆರಿಸಿದರು. ಇದು ಎಡ ನೀತಿಗಳಿಗೆ, ಅದರ ರಾಜಕೀಯಕ್ಕೆ , ಭ್ರಷ್ಟಾಚಾರವೇ ಇಲ್ಲದ, ದಕ್ಷ ಉತ್ತಮ ಆಡಳಿತಕ್ಕೆ ನೀಡಿದ ಅಂಗೀಕಾರವಾಗಿದೆ. ಈ ಮನೋಭಾವವನ್ನು ರಾಜ್ಯದಲ್ಲಿ ಜನತೆ ಫಲಿತಾಂಶ ಪ್ರಕಟವಾಗುತ್ತಿದ್ದಂತೆ ತೋರಿದ ಸಂಭ್ರಮದ ಪ್ರತಿಕ್ರಿಯೆಗಳಲ್ಲಿ, ಬಳಿಕ ಮತದಾರರಿಗೆ ಧನ್ಯವಾದಗಳನ್ನು ಅರ್ಪಿಸಿದ ಸಭೆಗಳಲ್ಲಿ, ವಿಜಯೋತ್ಸವದ ರ್‍ಯಾಲಿ ಸಂದರ್ಭದಲ್ಲಿ ಸ್ಪಷ್ಟವಾಗಿ ಅಭಿವ್ಯಕ್ತಿಸಿದ್ದಾರೆ. ತ್ರಿಪುರಾದಲ್ಲಿ ಮತದಾನದ ಪ್ರಮಾಣವೂ ಒಂದು ಅಧ್ಭುತವೇ! ರಾಜ್ಯದಲ್ಲಿ ಸರಾಸರಿ ಮತದಾನ ಶೇ.94ರಷ್ಟಾದರೆ ಹಲವಾರು ಮತಗಟ್ಟೆಗಳಲ್ಲಿ ಶೇ.96, 98 ರವರೆಗೂ ಮತದಾನವಾಗಿದೆ. ಮತದಾನದ ಕೇಂದ್ರ ಬೆಳಿಗ್ಗೆ 7ಕ್ಕೆ ಆರಂಭವಾದರೆ ಜನ 6 ಗಂಟೆಗೇ ಅಲ್ಲಿ ಸೇರಿ ಕಾಯುವ ದೃಶ್ಯ ಸಾಮಾನ್ಯ. ಅವರಿಗೆ ತಮಗೆ ಬೇಕಾದ ಸರಕಾರವನ್ನು ಆರಿಸಿಕೊಳ್ಳಬೇಕು, ಹಾಗಾಗಿ ತಮ್ಮ ಒಂದೊಂದು ಮತದ ನಿಜವಾದ ಮೌಲ್ಯ ಏನೆಂಬುದನ್ನು ಅನುಭವದಿಂದಲೇ ತಿಳಿದಿದ್ದಾರೆ.

ಇಲ್ಲಿಯ ಚುನಾವಣಾ ಪ್ರಚಾರಕ್ಕೆ ಅನೇಕ ಪಕ್ಷಗಳ ಹಿರಿಯ ನಾಯಕರು ಬಂದು ಹೋಗಿದ್ದಾರೆ. ಸಿಪಿಐ(ಎಂ) ನ ನಾಯಕರಾದ ಪ್ರಕಾಶ್ ಕಾರಾಟ್, ಸೀತಾರಾಮ್ ಯೆಚೂರಿ, ಬೃಂದಾ ಕಾರಾಟ್, ಸೂರ್ಯಕಾಂತ್ ಮಿಶ್ರಾ, ಮಹ್ಮದ್ ಸಲೀಂ ಜನರನ್ನುದ್ದೆಶಿಸಿ ಮಾತನಾಡಿದ್ದಾರೆ. ಬಿಜೆಪಿ ರಾಷ್ಟ್ರಾಧ್ಯಕ್ಷ ರಾಜನಾಥ್ ಸಿಂಗ್ ರಾಜ್ಯದ ತುಂಬಾ ಪ್ರಚಾರಿಸಿದರೂ ಜನ ಕಿವಿಗೊಡಲಿಲ್ಲ. ಕಾಂಗ್ರೆಸ್ ಎಷ್ಟೆಲ್ಲಾ ಭರವಸೆಗಳು, ವಿವಿಧ ಸ್ವರೂಪದ ಆಕ್ರಮಣಗಳು, ಅಪಪ್ರಚಾರ ನಡೆಸಿದರೂ, ಜನ ಕಾಂಗ್ರೆಸ್ ಕೂಟವನ್ನು ಒಪ್ಪಲಿಲ್ಲ. ಅವರು ಒಪ್ಪಿದ್ದು, ನೆಚ್ಚಿದ್ದು ಎಡರಂಗವನ್ನು ಮಾತ್ರ.

ಸಂಘಟನಾ ಸಿದ್ಧತೆ, ರಾಜಕೀಯ ಪ್ರಚಾರ

ಎಡರಂಗವು ಸವಾಲಿನ ಈ ಸನ್ನಿವೇಶವನ್ನು ರಾಜಕೀಯವಾಗಿ, ಸಂಘಟನಾತ್ಮಕವಾಗಿ ಅತ್ಯಂತ ಪರಿಣಾಮಕಾರಿಯಾಗಿ ಎದುರಿಸಿತು. ಸುಮಾರು ಆರು ತಿಂಗಳ ಹಿಂದಿನಿಂದಲೇ ಚುನಾವಣಾ ಪ್ರಚಾರ, ಸಿದ್ದತೆಗಳು ಪೂರ್ಣ ಪ್ರಮಾಣದಲ್ಲಿ ಆರಂಭಗೊಂಡವು. ಪ್ರತಿ ಜಿಲ್ಲೆಗಳಲ್ಲಿ ಚುನಾವಣಾ ಕೆಲಸಗಳಿಗೆಂದೇ ವಿಶೇಷವಾಗಿ 'ಸಂಘಟನಾ ಯಂತ್ರ'ವನ್ನು ರಚಿಸಲಾಯಿತು. ಅದರಲ್ಲಿ 230 ವಿಭಾಗೀಯ ಸಮಿತಿಗಳು, 3041 ಬೂತ್ ಮಟ್ಟದ ಸಮಿತಿಗಳು (ಇದರಲ್ಲಿ ಲಕ್ಷಕ್ಕೂ ಮೀರಿದ ಕಾರ್ಯಕರ್ತರು), 14 ಸಾವಿರ 'ಪಾರಾ ಸಮಿತಿ'ಗಳು ರಚನೆಯಾದವು. ನೆರೆ ಹೊರೆಯವರುಳ್ಳ ಈ ಪಾರಾ ಸಮಿತಿಗಳು ಪಕ್ಷದ ಸದಸ್ಯರಲ್ಲದೇ ಹಿತೈಷಿಗಳನ್ನು ಹೊಂದಿದ್ದು ಮತದಾರರನ್ನು ಮನವೊಲಿಸುವಲ್ಲಿ ಅಧ್ಬುತವೆನಿಸುವಂತೆ ಕಾರ್ಯವೆಸಗಿವೆ. ಅಲ್ಲದೇ ಸಿಪಿಐ(ಎಂ) ಪಕ್ಷದ ಜಿಲ್ಲಾ ಸಮಿತಿಯು ಇಡೀ ಚುನಾವಣೆಯ ಕಾರ್ಯ ಪರಿಶೀಲನೆ ಮತ್ತು ಯೋಜನೆ, ಮಾರ್ಗದರ್ಶನವನ್ನು ನಡೆಸಿದೆ.

ಇಂತಹ ಸಂಘಟನಾ ವ್ಯವಸ್ಥೆಯನ್ನು ಈ ಮೊದಲು ಸಬ್ರೂಂ ಜಿಲ್ಲೆಯಲ್ಲಿ ಮೊದಲು

ಪುಟ 4 ಕ್ಕೆ

ವಿಜಯೋತ್ಸವ :

ಎಡರಂಗದ ಈ ಅಭೂತಪೂರ್ವ ವಿಜಯೋತ್ಸವವನ್ನು ತ್ರಿಪುರಾದ ರಾಜಧಾನಿ, ಅಗರ್ತಲಾದಲ್ಲಿ ಅತ್ಯಂತ ಸಂಭ್ರಮದಿಂದ ಆಚರಿಸಲಾಯಿತು. 2013 ರ ಮಾರ್ಚ್ 7 ರಂದು ರಾಜ್ಯದ ಆಯ್ದ ವಿವಿಧ ಪ್ರದೇಶಗಳಿಂದ ಬಂದ ಸುಮಾರು 50 ಸಾವಿರ ವಿದ್ದ ಜನತೆ ನಗರದ ವಿವಿಧ ಹಾದಿಗಳಿಂದ ಹಾಡುತ್ತಾ, ವಾದ್ಯ ನುಡಿಸುತ್ತಾ, ನೃತ್ಯ ಮಾಡುತ್ತಾ ಸಾವಿರಾರು ಪ್ಲೆಕಾರ್ಡ್ ಭಾವುಟ, ಬ್ಯಾನರ್ ಹಿಡಿದು ಘೋಷಣೆ ಕೂಗುತ್ತಾ ಮೈದಾನದತ್ತ ಹರಿದು ಬಂದರು. ಈ ಬೃಹತ್ ಸಮಾರಂಭಕ್ಕೆ ಸಿಪಿಐ(ಎಂ) ಪ್ರಧಾನ ಕಾರ್ಯಾದರ್ಶಿ ಕಾಂ ಪ್ರಕಾಶ್ ಕಾರಾಟ್‌ರವರು ಆಗಮಿಸಿದ್ದಲ್ಲದೇ ಜನತೆಯನ್ನು ಉದ್ದೇಶಿಸಿ ಮಾತನಾಡಿದರು. ಅಲ್ಲದೇ ಸಿಪಿಐ(ಎಂ) ನ ರಾಜ್ಯ ಕಾರ್ಯದರ್ಶಿ ಕಾಂ. ಬಿಜೋನ್ ಧರ್, ಮುಖ್ಯಮಂತ್ರಿ ಮಾಣಿಕ್ ಸರ್ಕಾರ್, ಹಾಗೂ ಸಿಪಿಐ ನಾಯಕರು ಮಾತನಾಡಿದರು. ಅಲ್ಲಿದ್ದವರಲ್ಲಿ ಉಕ್ಕಿ ಹರಿಯುತ್ತಿದ್ದ ಉತ್ಸಾಹ ಸದಾ ನೆನಪಿನಲ್ಲಿ ಉಳಿಯುವಂತಹುದು.

ಇಂತಹ ಹಲವಾರು ವಿಜಯದ ಮೆರವಣಿಗೆ ಸಮಾರಂಭ ರಾಜ್ಯದಾದ್ಯಂತ ನಡೆದಿವೆ.

ಜನಶಕ್ತಿ
ಕನ್ನಡ ವಾರಪತ್ರಿಕೆ

ಸಂಪಾದಕೀಯ

ಸಂವಿಧಾನದ ಆಶಯಗಳಿಗೆ ವಿರುದ್ಧವಾದ ಆಧ್ಯಾತ್ಮಿಕ ವಿಶ್ವವಿದ್ಯಾಲಯ ಸ್ಥಾಪನೆ

ರಾಜ್ಯ ಬಿಜೆಪಿ ಸರ್ಕಾರ ಅವಸಾನದ ಅಂಚಿನಲ್ಲಿದ್ದರೂ ಹಿಂದುತ್ವ ಅಜೆಂಡವನ್ನು ಜಾರಿಮಾಡುವ ಕಸರತ್ತನ್ನು ಮಾತ್ರ ಅದು ಕೈಬಿಟ್ಟಿಲ್ಲ. ಕೋಮು ದಂಗೆಗಳಿಗೆ ಕುಮ್ಮಕ್ಕು ನೀಡುವ ಅದರ ಪ್ರವೃತ್ತಿಯನ್ನು ಅದು ಕೈಬಿಟ್ಟಿಲ್ಲ. ಹಿಂದೂ ಮಠಗಳಿಗೆ ಸಾರ್ವಜನಿಕ ಹಣವನ್ನು ದಾನಮಾಡುವ ಪ್ರಶ್ನಾರ್ಹ ಪದ್ಧತಿಯನ್ನು ಮುಂದುವರೆಸಲಾಗುತ್ತಿದೆ. ಶಿಕ್ಷಣದ ಕೇಸರೀಕರಣ ವ್ಯವಸ್ಥಿತವಾಗಿ ನಡೆಸಲಾಗುತ್ತಿದೆ. ಇನ್ನೊಂದು ಅವಧಿಗೆ ರಾಜ್ಯದಲ್ಲಿ ಅಧಿಕಾರಕ್ಕೆ ಬರುವುದು ಸಾಧ್ಯವಾಗದು ಎಂದು ಮನವರಿಕೆ ಮಾಡಿಕೊಂಡಿರುವ ಬಿಜೆಪಿ, ಆರೆಸ್ಸೆಸ್ ಅಣತಿಯಂತೆ ಅಧಿಕಾರದಲ್ಲಿ ಇರುವಷ್ಟು ದಿನ ಹಿಂದುತ್ವ ಅಜೆಂಡಾ ಜಾರಿಗೊಳಿಸಲು ಕಾರ್ಯೋನ್ಮುಖವಾಗಿದೆ.


ಶಿಕ್ಷಣದ ವ್ಯಾಪಾರೀಕರಣಕ್ಕೆ ಅತಿ ಹೆಚ್ಚು ಪ್ರೋತ್ಸಾಹ ಕೊಡುತ್ತಾ ಬಂದಿರುವ ಬಿಜೆಪಿ, ರಾಜ್ಯದಲ್ಲಿ ಶಿಕ್ಷಣವನ್ನು ಹಣ ಮಾಡುವ ದಂಧೆಯನ್ನಾಗಿಸಿಕೊಂಡಿರುವ ಖಾಸಗಿ ಸಂಸ್ಥೆಗಳಿಗೆ ವಿಶ್ವವಿದ್ಯಾಲಯದ ಸ್ಥಾನಮಾನ ನೀಡಲು ಹೊರಟಿದೆ. ಖಾಸಗಿ ವಿಶ್ವವಿದ್ಯಾಲಯಗಳ ಸ್ಥಾಪನೆಗೆ ಸದನದಲ್ಲಿ ಮತ್ತು ಹೊರಗಡೆ ವ್ಯಾಪಕವಾದ ವಿರೋಧ ವ್ಯಕ್ತವಾಗಿದ್ದರೂ, ಸರ್ಕಾರ ಏಕಪಕ್ಷೀಯವಾಗಿ 22 ಖಾಸಗಿ ವಿಶ್ವ ವಿದ್ಯಾಲಯಗಳ ಸ್ಥಾಪನೆಗೆ ಅನುಮೋದನೆ ನೀಡಿದೆ. ಆ ಮೂಲಕ ಸರ್ಕಾರ ಸಮಾಜದಲ್ಲಿ ಕೆಳಜಾತಿ ಕೆಳವರ್ಗಗಳಿಗೆ ಶಿಕ್ಷಣದ ಹಕ್ಕನ್ನು ನಿರಾಕರಿಸುತ್ತಾ ಬರಲಾದ ಅನಿಷ್ಠ ಪರಂಪರೆಯನ್ನು ಜೀವಂತವಾಗಿ ಉಳಿಸಿಕೊಳ್ಳಲು ಮುಂದಾಗಿದೆ. ಗಮನಿಸಬೇಕಾದ ಇನ್ನೊಂದು ಆಘಾತಕಾರಿ ಬೆಳವಣಿಗೆ ಏನೆಂದರೆ, ಜನರಿಂದ ತಿರಸ್ಕರಿಸಲ್ಪಟ್ಟಿರುವ ಬಿಜೆಪಿ ಸರ್ಕಾರ 'ಅಮೃತ ಸಿಂಚನ ಆಧ್ಯಾತ್ಮಿಕ ವಿಶ್ವವಿದ್ಯಾಲಯ' ಎಂಬ ಹೆಸರಿನ ಖಾಸಗಿ ವಿಶ್ವವಿದ್ಯಾಲಯ ಸ್ಥಾಪನೆಗೆ ಹಸಿರು ನಿಶಾನೆ ತೋರಿಸಿದೆ. ವಿಧಾನಸಭೆಯಲ್ಲಿ ಇತ್ತೀಚೆಗೆ ಯಾವುದೇ ಚರ್ಚೆ ಇಲ್ಲದೆ ಅಂಗೀಕರಿಸಲಾದ 17 ಮಸೂದೆಗಳಲ್ಲಿ ಈ ಆಧ್ಯಾತ್ಮಿಕ ವಿಶ್ವವಿದ್ಯಾಲಯ ಮಸೂದೆಯೂ ಸೇರಿದೆ. ರಾಜ್ಯಪಾಲರು ಅದಕ್ಕೆ ತಮ್ಮ ಅಂಕಿತ ಹಾಕಿದ್ದು ಅನೇಕ ಸಂದೇಹಗಳಿಗೆ ಎಡೆಮಾಡಿಕೊಟ್ಟಿದೆ. ಈ ಆಧ್ಯಾತ್ಮಿಕ ವಿಶ್ವ ವಿದ್ಯಾಲಯವು ಆಧ್ಯಾತ್ಮಿಕ ವಿಷಯಗಳಲ್ಲಿ ಪದವಿ ಪ್ರಧಾನ ಮಾಡಲಿದೆ.

ಉನ್ನತ ಶಿಕ್ಷಣ ಮಂತ್ರಿ ಸಿ.ಟಿ. ರವಿ ಸರ್ಕಾರದ ಕ್ರಮವನ್ನು ಸಮರ್ಥಿಸಿದ್ದಾರೆ. ಭಾರತದ ಪ್ರಾಚೀನ ಪರಂಪರೆಯ ವಿಷಯಗಳಲ್ಲಿ ಸಂಶೋಧನೆ ನಡೆಸುವುದರಲ್ಲಿ ತಪ್ಪೇನಿದೆ ಎಂದು ಪ್ರಶ್ನಿಸಿದ್ದಾರೆ. ಸಿ.ಟಿ. ರವಿ ಪ್ರತಿಪಾದಿಸುವ ಭಾರತದ ಪ್ರಾಚೀನ ಪರಂಪರೆ ಅಂದರೆ ಅದು ಪ್ರಾಚೀನ ವೈದಿಕ ಪರಂಪರೆ ಎನ್ನುವುದರಲ್ಲಿ ಅನುಮಾನ ಇಲ್ಲ. ಬಿಜೆಪಿ ಸರ್ಕಾರದ ಈ ಕ್ರಮ ನಮ್ಮ ದೇಶದ ಸಂವಿಧಾನ ಸಾರುತ್ತಿರುವ ಸೆಕ್ಯುಲರ್ ಮೌಲ್ಯಗಳಿಗೆ ವಿರುದ್ಧವಾಗಿದೆ. ವೈದಿಕ ಪರಂಪರೆಯನ್ನಾಗಲಿ ಇನ್ನ್ಯಾವುದೇ ಆಧ್ಯಾತ್ಮಿಕ ವಿಷಯಗಳನ್ನಾಗಲಿ ಖಾಸಗಿಯಾಗಿ ಅಧ್ಯಯನ ಮಾಡಲು ಯಾರ ಅಭ್ಯಂತರ ಇರುವುದಿಲ್ಲ. ಆದರೆ ಅಂತಹ ಅಧ್ಯಯನಗಳಿಗೆ ವಿಶ್ವವಿದ್ಯಾಲಯ ಮಟ್ಟದ ಮಾನ್ಯತೆ ನೀಡುವುದು ಆಕ್ಷೇಪಾರ್ಹವಾಗಿದೆ. ಆಧ್ಯಾತ್ಮಿಕ ವಿಶ್ವವಿದ್ಯಾಲಯವು ವೈಜ್ಞಾನಿಕವಲ್ಲದ ಮೂಢ ನಂಬಿಕೆ ಆಧಾರಿತ ವಿಷಯಗಳಿಗೆ ಮಾನ್ಯತೆ ನೀಡುವುದೆಂದರೆ ಅದು ನಮ್ಮ ಸಂವಿಧಾನ ಪ್ರತಿಪಾದಿಸುವ ವೈಜ್ಞಾನಿಕ ವಿಶ್ವ ಕನ್ನೋಟಕ್ಕೆ ವಿರುದ್ಧವಾಗಿದೆ. ಅಂತಹ ವಿಶ್ವವಿದ್ಯಾಲಯಗಳಿಂದ ಕೋಮು ವೈಷಮ್ಯವನ್ನು ಬಿತ್ತಿ ಬೆಳೆಸಲು ಸರ್ಕಾರವೇ ಪ್ರೋತ್ಸಾಹ ಕೊಟ್ಟಂತಾಗುತ್ತದೆ. ಜನತೆಯ ಐಕ್ಯತೆಗೆ ದೇಶದ ಸಮಗ್ರತೆಗೆ ಧಕ್ಕೆ ಉಂಟಾಗುತ್ತದೆ. ಕೋಮು ಆಧಾರಿತ ಭಯೋತ್ಪಾದನೆಯ ಬೆಂಕಿಗೆ ಪೆಟ್ರೋಲ್ ಸುರಿದಂತಾಗುತ್ತದೆ. ಶಿಕ್ಷಣದ ಮೂಲ ಉದ್ದೇಶಕ್ಕೆ ಅಪಚಾರವಾಗುತ್ತದೆ.

ಆಧ್ಯಾತ್ಮಿಕ ವಿಶ್ವವಿದ್ಯಾಲಯ ಸ್ಥಾಪನೆಗೆ ಅವಕಾಶ ಮಾಡಿಕೊಡುವ ರಾಜ್ಯ ಬಿಜೆಪಿ ಸರ್ಕಾರದ ಕ್ರಮವನ್ನು ತೀವ್ರವಾಗಿ ಖಂಡಿಸುವ ಜತೆಯಲ್ಲಿ ಸರ್ಕಾರದ ದುರುದ್ದೇಶವನ್ನು ಬಯಲಿಗೆಳೆಯಬೇಕು. ಬಿಜೆಪಿ ಪ್ರತಿಪಾದಿಸುವ ಹಿಂದುತ್ವ ರಾಜಕಾರಣ ಮತ್ತು ಕೋಮು ದ್ವೇಷದಿಂದ ಬೇಸತ್ತ ಜನ, ರಾಜ್ಯದಲ್ಲಿ ಮುಖ್ಯವಾಗಿ ಅದರ ಭದ್ರಕೋಟೆಯಂತಿದ್ದ ಕರಾವಳಿ ಜಿಲ್ಲೆಗಳಲ್ಲಿ ಇತ್ತೀಚಿನ ಸ್ಥಳೀಯ ಸಂಸ್ಥೆಗಳ ಚುನಾವಣೆಯಲ್ಲಿ ಅದನ್ನು ಸ್ಪಷ್ಟವಾಗಿ ತಿರಸ್ಕರಿಸಿದ್ದಾರೆ. ಮುಂಬರುವ ವಿಧಾನಸಭಾ ಚುನಾವಣೆಯಲ್ಲಿಯೂ ಇನ್ನೂ ತೀವ್ರವಾಗಿ ಬಿಜೆಪಿಗೆ ಪಾಠ ಕಲಿಸಲು ರಾಜ್ಯದ ಜನತೆ ಮುಂದಾಗಬೇಕಿದೆ.

ಗಾದಿಗೆ ಮರಳುವ ಕನವರಿಕೆಯಲ್ಲಿ ಕಾಂಗ್ರೆಸ್

ನಗರಸಭೆ, ಮಹಾ ನಗರ ಪಾಲಿಕೆ, ಪಟ್ಟಣ ಪಂಚಾಯತ್ ನಂತಹ ಸ್ಥಳೀಯ ಸಂಸ್ಥೆಗಳ ಚುನಾವಣೆಯಲ್ಲಿ ಅಧಿಕಾರದಲ್ಲಿರುವ ಬಿಜೆಪಿ ಪಕ್ಷವು ಸೋತು ನೆಲ ಕಚ್ಚಿದೆ. ಇದರ ಬಹು ಭಾಗ ಲಾಭವು ಅಷ್ಟಾಗಿ ಏನೂ ಕಷ್ಟ ಪಡದೇ ಅನಾಯಾಸವಾಗಿ ಕಾಂಗ್ರೆಸ್‌ನ ಪಾಲಾಗಿದೆ. ಇಡೀ ಈ ಐದು ವರುಷಗಳಲ್ಲಿ 'ಕಷ್ಟಕ್ಕೆ ಕರೆಯಬೇಡಿ ಊಟಕ್ಕೆ ಮರೆಯಬೇಡಿ' ಎಂಬಂತಹ ನೀತಿಯನ್ನೇ ಕಾಂಗ್ರೆಸ್ ಅನುಸರಿಸುತ್ತಾ ಬಂದಿದ್ದರೂ ದುರಾಡಳಿತ ನಡೆಸುತ್ತಿರುವ ಬಿಜೆಪಿಗೆ ಬೇರೊಂದು ಪರ್ಯಾಯ ಕಾಣದೇ ಜನತೆ ಅನಿವಾರ್ಯವಾಗಿ ಹಲವಾರು ಕಡೆ ಅದನ್ನು ಸೋಲಿಸಲೆಂದೇ ಕಾಂಗ್ರೆಸ್ ಗೆ ಮತ ನೀಡಿ ಗೆಲ್ಲಿಸಿ ಬಿಟ್ಟಿದ್ದಾರೆ. ರಾಜ್ಯದಲ್ಲಿ ಅಧಿಕೃತ ವಿರೋಧ ಪಕ್ಷವಾಗಿದ್ದರೂ ಆಡಳಿತ ಪಕ್ಷದ ವೈಫಲ್ಯಗಳು, ಜನದ್ರೋಹಿ, ನೀತಿಗಳ ವಿರುದ್ಧ ಸಂಘರ್ಷಕ್ಕೆ ಇಳಿಯದೇ ಕಾಲಹರಣ ಮಾಡಿದ ಕಾಂಗ್ರೆಸ್ ಇದೀಗ ಈ ಫಲಿತಾಂಶ ತನ್ನ ಅಮೋಘ ಸಾಧನೆಯೆಂದು ಬೊಗಳೆ ಹೊಡೆಯುತ್ತಿರುವುದೇ ವಿಪರ್ಯಾಸ!



ಬೆಳೆದ ಭ್ರಮೆಗಳು

ನಿಜ, ಕಳೆದ ಬಾರಿಗೆ ಹೋಲಿಸಿದರೆ ಕಾಂಗ್ರೆಸ್‌ಗೆ 354 ಸ್ಥಾನಗಳು ಹೆಚ್ಚಿಗೆ ಬಂದಿವೆ. ಅದರರ್ಥ ಜನತೆ ಕಾಂಗ್ರೆಸ್ ನ ನೀತಿ, ಕಾರ್ಯಗಳನ್ನು ಮೆಚ್ಚಿ ಬೆಂಬಲಿಸಿದ್ದಾರೆಂದಲ್ಲ. ಆದರೆ ಆರಂಭದಲ್ಲಿ ಈ ಚುನಾವಣೆಯಲ್ಲಿ ಒಂದು ವೇಳೆ ಸೋತು ಮುಖಭಂಗ ಅನುಭವಿಸುವಂತಾದರೆ ಹೇಗೆಂದು ಚಿಂತಿತವಾಗಿದ್ದ ಕಾಂಗ್ರೆಸ್ ಪಕ್ಷವು ಸಕಾಲದಲ್ಲಿನ ಚುನಾವಣೆಯ ಪ್ರಜಾಸತ್ತಾತ್ಮಕ ಪ್ರಕ್ರಿಯೆಯನ್ನೇ ಇತರೆ ಪಕ್ಷಗಳ ಜೊತೆಯಲ್ಲಿ ನಿರಾಕರಿಸಿತ್ತು. ಆದರೀಗ ಈ ಪಕ್ಷವೇ ಇದು ಮುಂದೆ ಕೆಲವೇ ತಿಂಗಳಲ್ಲಿ ನಡೆಯಲಿರುವ ವಿಧಾನಸಭಾ ಚನಾವಣೆಯಲ್ಲಿ ಬರಲಿರುವ ಗೆಲುವಿನ ಸಂಕೇತವೆಂದೂ, ಆ ಗೆಲುವು ಕಟ್ಟಿಟ್ಟ ಬುತ್ತಿಯೆಂದು ಸಾರುತ್ತಿದೆ, ಅಧಿಕಾರ ತಮ್ಮದೆಂದೇ ಭ್ರಮಿಸುತ್ತಿದೆ!

ಸಾಮಾನ್ಯವಾಗಿ ನೋಡಿದರೆ ಕಾಂಗ್ರೆಸ್‌ನ ಬೆಂಬಲ ಈ ಚುನಾವಣೆಯಲ್ಲಿ ಸ್ವಲ್ಪ ಚೇತರಿಸಿಕೊಂಡಿದೆಯೆಂದು ಕಾಣುತ್ತದೆ. ಆದರೆ ಅದಕ್ಕೆ ಅಧಿಕಾರ ಹಿಡಿಯುವುದು ಅಂದುಕೊಂಡಷ್ಟು ಸುಲಭವಲ್ಲ. ಅದು ಹಲವಾರು ಎದುರಾಳಿಗಳನ್ನು ಎದುರಿಸಿಯೇ ಮುಂದೆ ಹೆಜ್ಜೆ ಇಡಬೇಕಿದೆ. ಸ್ಥಳೀಯ ಸಂಸ್ಥೆಗಳ ಚುನಾವಣೆಯಲ್ಲಿ ಅಭ್ಯರ್ಥಿಗಳ ಸಾಮರ್ಥ್ಯ ಒಳಗೊಂಡು ಇತರೆ ಸ್ಥಳೀಯ ಅಂಶಗಳು ಪ್ರಧಾನ ಪಾತ್ರ ವಹಿಸುವುದನ್ನು ಮರೆಯಲಾಗುವುದಿಲ್ಲ. ಆದರೆ ವಿಧಾನಸಭೆಯಲ್ಲಿ ಅಂಶಗಳು ಭಿನ್ನವಿರುತ್ತವೆ. ಒಂದೆಡೆ ತನ್ನ ರಾಜಕೀಯ ಎದುರಾಳಿಗಳನ್ನು ಎದುರಿಸಿ ಮುಂದೆ ಸಾಗಬೇಕಾಗುತ್ತದೆ. ಇದಕ್ಕೆ ಹಣಬಲವಲ್ಲದೇ ಮುಖ್ಯವಾಗಿ ಅದರ ಸಂಘಟನಾ ಸನ್ನದ್ಧತೆ ಅತ್ಯಗತ್ಯ. ಆದರಿಲ್ಲಿ ಆ ಯಂತ್ರ ಸುಸಜ್ಜಿತವೇನಲ್ಲ, ಹೋಗಲಿ ಮುರಿದು ಹೋಗಿರುವುದು ರಿಪೇರಿಯೂ ಆಗಿಲ್ಲ. ಇವೆಲ್ಲಕ್ಕೂ ಮುಕುಟ ಪ್ರಾಯದಂತೆ ಅದು ಮಹಾ ನಾಯಕರ ಅತೀ ಮಹತ್ವಾಕಾಂಕ್ಷೆಗಳ ಭಾರದಲ್ಲಿ ತತ್ತರಿಸುತ್ತಿದೆ. ಅದರ ಮುಖದಲ್ಲಿ ಅಧಿಕಾರದ ಕುರ್ಚಿ ಹಿಡಿಯುವ ಕಸರತ್ತಿನಲ್ಲಿ ನಡೆಸ(ಸುತ್ತ)ಲಿರುವ ಮುಷ್ಟಿಯುದ್ಧಗಳ ಪ್ರಹಾರ!

ಭಿನ್ನಮತ, ಅಧಿಕಾರ ಲಾಲಸೆಗಳ ಭಾರ

ಇಂತಹ ಅದರ ದುರಾಸೆಯ ಮನೋಭಾವ, ಅಧಿಕಾರ ಲಾಲಸೆ ಆ ಪಕ್ಷದೊಳಗೆ ಈಗಾಗಲೇ ಬೀಡು ಬಿಟ್ಟಿರುವ ತೀವ್ರತರವಾದ ಗುಂಪುಗಾರಿಕೆ, ಕಿತ್ತಾಟಗಳಿಗೆ ಕಹಳೆ ಊದಿದೆ. ಮೊನ್ನೆ ಚುನಾವಣಾ ಫಲಿತಾಂಶಗಳ ಬಗ್ಗೆ ಟಿ.ವಿ.ಯಲ್ಲಿ ನಡೆಯುತ್ತಿದ್ದ ಚರ್ಚೆಯಲ್ಲಿ ಒಂದು ಕಾಲದ ಕಾಂಗ್ರೆಸ್ ವಕ್ತಾರರೂ, ಮಾಜಿ ಉಪಸಭಾಪತಿಗಳೂ ಆಗಿದ್ದ ನಾಯಕರು 'ಈ ಫಲಿತಾಂಶ ಎಲ್ಲಾ ಪಕ್ಷಗಳ(ತಮ್ಮದೂ ಸೇರಿ) ಅಧ್ಯಕ್ಷರುಗಳ ವೈಫಲ್ಯಕ್ಕೆ ಹಿಡಿದ ಕನ್ನಡಿಯೆಂದೂ, 'ಆಯಾರಾಂ-ಗಯಾರಾಂ' ರಾಜಕೀಯಕ್ಕೆ ನೀಡಿದ ಏಟೆಂದೂ ವಿಶ್ಲೇಷಿಸುತ್ತಿದ್ದರು. ಇಲ್ಲೊಂದು ಭಿನ್ನವಾದ

ಪುಟ 4 ಕ್ಕೆ

ಕಾರ್ಟೂನ್ ಕಾರ್ನರ್




ಕೃಪೆ : ಪ್ರಜಾವಾಣಿ

ಕಾಂಗ್ರೆಸ್‌ನ ಕೂಟಕ್ಕೆ ಕಾದಿತ್ತು ಪರಾಭವ.....

ಪುಟ 2 ರಿಂದ

ರೂಪಿಸಿ ಜಾರಿಗೆ ತಂದ ಬಗ್ಗೆ, ನಂತರ ಈ ಚುನಾವಣೆಯಲ್ಲಿ ಎಲ್ಲಾ ಕಡೆ ಅಳವಡಿಸಿಕೊಂಡ ಬಗ್ಗೆ ಅಲ್ಲಿನ ಕಾರ್ಯದರ್ಶಿಯವರು ನನಗೆ ವಿವರಿಸಿದರು.

ಇಲ್ಲಿ ಪಕ್ಷದ ಹಿರಿಯ ನಾಯಕರಾದ ಕಾಂ. ಬಿಜೊನ್ ಧರ್ ಮತ್ತು ಕಾಂ. ಮಾಣಿಕ್ ಸರ್ಕಾರ್‌ರವರು ಹಾಗೂ ನಾನು ಭೇಟಿ ನೀಡಿದ ಸಬ್ರೂಂ ಜಿಲ್ಲಾ ಕಾರ್ಯದರ್ಶಿ, ಮತ್ತು ಸಚಿವ ಜಿತೇಂದ್ರ ಚೌಧುರಿಯವರೂ ಪ್ರಸ್ತಾಪಿಸಿದ ಒಂದು ಸಾಮಾನ್ಯ ಅಂಶವೆಂದರೆ ಈ ಚುನಾವಣೆಯ ಕಾರ್ಯಗಳಲ್ಲಿ ಯುವಜನ ಮತ್ತು ಮಹಿಳೆಯರು ಹಾಗೂ ಅವರ ಸಾಮೂಹಿಕ ಸಂಘಟನೆಗಳು ವಹಿಸಿದ ಅತ್ಯಂತ ಪರಿಣಾಮಕಾರೀ ಕೆಲಸ. ಇದನ್ನು ಅವರೆಲ್ಲಾ ಹೆಮ್ಮೆಯಿಂದ ಗುರುತಿಸುತ್ತಾರೆ. ಬೂತ್ ಮಟ್ಟದ ಕಾರ್ಯಗಳ ನಿರ್ವಹಣೆಯಲ್ಲೂ, ಜನತೆಯನ್ನು ಮನವೊಲಿಸುವಲ್ಲಿಯೂ ಯುವಜನ ಮತ್ತು ಮಹಿಳಾ ಕಾರ್ಯಕರ್ತರು ಪರಿಣಾಮಕಾರಿಯಾಗಿ ಶ್ರಮಿಸಿದ್ದಾರೆ. ಉಗ್ರಗಾಮಿಗಳ ಧಾಳಿ, ಉಪಟಳವನ್ನು ದಮನಿಸಿ ಸೋಲಿಸುವಲ್ಲಿ, ತ್ರಿಪುರಾದಲ್ಲಿ ಶಾಂತಿ ನೆಲೆಸುವಂತಾಗಿಸಲು ಶ್ರಮಿಸಿದವರಲ್ಲಿ ಮಹಿಳೆಯರ ಪಾತ್ರವು ಅಮೋಘ, ಶ್ಲಾಘನೀಯ ಮತ್ತು ಅತ್ಯಂತ ಗಮನಾರ್ಹವಾಗಿದೆ. ಈ ಚುನಾವಣಾ



ಪ್ರಚಾರದಲ್ಲಿಯೂ ಮಹಿಳೆಯರದ್ದೇ ವಿಶೇಷ ರ್‍ಯಾಲಿಗಳು ನಡೆದಿರುವುದನ್ನು, ಅದರಲ್ಲಿ ಅಪಾರ ಸಂಖ್ಯೆಯಲ್ಲಿ ಮಹಿಳೆಯರು ಸೇರಿದ್ದನ್ನು ಸಚಿತ್ರವಾಗಿ ಸಂಗಾತಿಗಳು ತೋರಿಸಿದರು.

ಎಡರಂಗವು ಕೇಂದ್ರದ ಕಾಂಗ್ರೆಸ್‌ನ ಜನ ವಿರೋಧಿ ನೀತಿಗಳನ್ನು, ರಾಜ್ಯದ ಬಗ್ಗೆ ತೋರಿದ ತಾರತಮ್ಯವನ್ನು ಜನರೆದುರು ರಾಜಕೀಯ ಸಭೆ, ಸಮಾವೇಶಗಳಲ್ಲಿ ಬಿಚ್ಚಿಟ್ಟಿತು. ಬೆಲೆಏರಿಕೆ, ನಿರುದ್ಯೋಗ, ಅನಕ್ಷರತೆ, ಭಾರೀ ಭ್ರಷ್ಟಾಚಾರ, ಹಗರಣಗಳ ಘೋರ ಪರಿಣಾಮ ತಂದಿಟ್ಟಿರುವ ಕೇಂದ್ರದ ಕಾಂಗ್ರೆಸ್ ರಾಜ್ಯದಲ್ಲಿಯೂ ಅಧಿಕಾರಕ್ಕೆ ಬಂದರೆ ಅಂತಹುದೇ ಅನಾಹುತ ಕಟ್ಟಿಟ್ಟಿದ್ದು ಎಂಬುದನ್ನು ಮನವರಿಕೆ ಮಾಡಿತು. ಎಡರಂಗ ಸರಕಾರಕ್ಕಿರುವ ಆರ್ಥಿಕ, ರಾಜಕೀಯ, ಆಡಳಿತಾತ್ಮಕ ಮಿತಿಗಳನ್ನು ವಿವರಿಸಿತು. ರಾಜ್ಯದಲ್ಲಿ ಕಾಂಗ್ರೆಸ್ ಮತ್ತದರ ಕೂಟ ನಡೆಸುತ್ತಿರುವ ಧಾಳಿ, ದುಷ್ಕೃತ್ಯಗಳನ್ನು ಜನರು ನಿತ್ಯವೂ ಕಂಡಿದ್ದಾರೆ. ಅದೇ ಹೊತ್ತಿನಲ್ಲಿ ಎಡರಂಗದ ದಕ್ಷ, ಪ್ರಾಮಾಣಿಕ, ಪಾರದರ್ಶಕತೆಯ, ಬಿಡಿಕಾಸು ಹಾಳು ಮಾಡದೇ ಅಭಿವೃದ್ಧಿ ಸಾಧಿಸುತ್ತಿರುವುದನ್ನೂ, ಅಲ್ಲಿ ನಡೆದ ಹಿಂಸೆ, ಉಗ್ರಗಾಮಿ ಧಾಳಿಗಳನ್ನು ಅನುಭವಿಸಿ, ಶಾಂತಿ–ಪ್ರಗತಿಗಾಗಿ ಸರಕಾರ ಶ್ರಮಿಸುತ್ತಿರುವು ದನ್ನು ಕಂಡಿದ್ದಾರೆ. ಹೀಗಾಗಿ ಎಡರಂಗದ ಮೇಲೆ ಅಪಾರ ವಿಶ್ವಾಸ ತೋರಿ, ಮತನೀಡಿ ಬಲ ತುಂಬಿದ್ದಾರೆ. ಈ ಮೂಲಕ ಎಡ ಪರ್ಯಾಯವನ್ನು ಅನುಮೋದಿಸಿದ್ದಾರೆ. ವಿಶೇಷವೆಂದರೆ ಇವೆಲ್ಲವುಗಳ ಪರಿಣಾಮವಾಗಿ ಹಲವಾರು ಕಾಂಗ್ರೆಸ್ ಬೆಂಬಲಿಗರು ಈ ಬಾರಿ ಎಡರಂಗದತ್ತ ಹೊರಳಿದ್ದಾರೆ.

ಇದನ್ನೇ ಕಾಂ ಬಿಜೊನ್ ಧರ್ ಹಾಗೂ ಕಾಂ.ಮಾಣಿಕ್ ಸರ್ಕಾರ್ ಹೇಳಿದ್ದು 'ನಾವು ಅಸಾಧ್ಯವಾದ ಏನನ್ನೂ ಹೇಳಲಿಲ್ಲ, ಜನತೆಗೆ ನಮ್ಮ ಬದ್ಧತೆ ಏನೆಂದು ಹೇಳಿದೆವು. ನಮ್ಮ ಸಾಮರ್ಥ್ಯ, ನಮ್ಮ ಮಿತಿಗಳನ್ನೂ ಜನ ಅರ್ಥ ಮಾಡಿಕೊಂಡರು. ಜಾರಿಯ ಗಂಭೀರತೆಯನ್ನು ಅರಿತರು. ನಮ್ಮ ಸರಕಾರ ಅಸಂಖ್ಯಾತ ಯೋಜನೆಗಳನ್ನು ಉತ್ಸಾಹದಿಂದ ಅನುಷ್ಠಾನಗೊಳಿಸುವುದನ್ನು ಕಂಡರು. ನಮ್ಮ ಗಮನಾರ್ಹ ಸಾಧನೆಗಾಗಿ ಕೇಂದ್ರವೇ ನಮಗೆ 21 ಪ್ರಶಸ್ತಿಗಳನ್ನು ನೀಡಿದ ಮೇಲೆ ಕಾಂಗ್ರೆಸ್‌ನವರ ಆರೋಪಗಳಿಗೆ ಸ್ಪಷ್ಟನೆ ಇದಕ್ಕಿಂತ ಇನ್ನೇನು ಬೇಕು?'

ದೃಡ ನಿಶ್ಚಯ

ಈ ಅವಧಿಯಲ್ಲಿ ಎಡರಂಗ ಸರಕಾರ ಉಗ್ರಗಾಮಿಗಳ ಧಾಳಿ, ಉಪಟಳಗಳನ್ನು ಹಿಮ್ಮೆಟ್ಟಿಸುವಲ್ಲಿಯೂ ಗಮನಾರ್ಹ ಪ್ರಗತಿಯನ್ನು ಸಾಧಿಸಿದೆ. ಜನತೆಯ ಬೆಂಬಲ–ಬಲದಿಂದ, ಅಭಿವೃದ್ಧಿ ಸಾಧನೆಯ ಕ್ರಮಗಳಿಂದ, ರಕ್ಷಣಾ ಪಡೆಗಳು ಹಾಗೂ ಆಡಳಿತದ ಸಾಮರ್ಥ್ಯದಿಂದ ಅದನ್ನು ಎದುರಿಸಿ ಶಾಂತಿ ಸ್ಥಾಪಿಸಿರುವುದನ್ನು ಅನುಭವದಿಂದ ಜನತೆ ಗ್ರಹಿಸಿದರು. ಇಂತಹ ಎಡರಂಗವೇ ರಾಜ್ಯವನ್ನು ಮುನ್ನಡೆಸಬೇಕು, ಈ ಸರಕಾರವೇ ಅಧಿಕಾರದಲ್ಲಿರಬೇಕು ಎಂಬ ದೃಢ ನಿಶ್ಚಯ ಮಾಡಿದ್ದೇ ಈ ಫಲಿತಾಂಶ ಹೊರ ಬರಲು ಪ್ರಮುಖ ಕಾರಣ.

ಈ ಅವಧಿಯಲ್ಲಿ ಸರಕಾರ ರೇಗಾಯೋಜನೆ ಜಾರಿ, ಗ್ರಾಮಿಣ ಅಭಿವೃದ್ಧಿ, ಬುಡಕಟ್ಟು ಜನರ ಕಲ್ಯಾಣ, ಸಮರ್ಪಕ ಸಾರ್ವತ್ರಿಕ ಪಡಿತರ ವ್ಯವಸ್ಥೆ, ಅಲ್ಲದೇ ಸುಮಾರು 2 ಲಕ್ಷ ಅಧಿಕ ಎಕರೆ ಅರಣ್ಯ ಭೂಮಿ ಸಾಗುವಳಿಗೆ ಪಟ್ಟಾ ನೀಡಿಕೆ, ಕೃಷಿ ರಂಗದಲ್ಲಿ ಹೊಸ ಪ್ರಯೋಗಗಳು, ಅಲ್ಲಿರುವ ಗ್ಯಾಸ್ ಆಧಾರಿತ ಕೈಗಾರಿಕೆ ವಿಸ್ತರಣೆ, ಗ್ಯಾಸ್ ಆಧಾರಿತ ವಿದ್ಯುತ್ ಉತ್ಪಾದನಾ ಘಟಕ ಸ್ಥಾಪನೆ ಯೋಜನೆ ಜಾರಿ, ರಸ್ತೆಗಳ ನಿರ್ಮಾಣ ಸುಲಲಿತ ಸಂಪರ್ಕ, ಶುದ್ಧ ಕುಡಿಯುವ ನೀರು, ಪಂಚಾಯತ್ ವ್ಯವಸ್ಥೆ ಬಲ ಪಡಿಸುವಿಕೆಯಲ್ಲಿ ಶಿಕ್ಷಣದಲ್ಲಿ ಪ್ರಗತಿ ಇತ್ಯಾದಿಗಳು ಉಲ್ಲೇಖಾರ್ಹ.

ಹೌದು! ಜನತೆ ಎಡರಂಗವನ್ನು ಪ್ರಚಂಡ ಬಹುಮತದಿಂದ ಗೆಲ್ಲಿಸಿದ್ದಾರೆ. ಅದರ ಮೇಲೆ ಅಪಾರ ವಿಶ್ವಾಸವಿರಿಸಿದ್ದಾರೆ. ಅಲ್ಲಿ ಹಲವಾರು ಹೊಸ ಸವಾಲುಗಳಿವೆ ನಿಜ. ಈ ನಡುವೆಯೂ ಆ ಆಶಯಗಳನ್ನು ಈಡೇರಿಸುವುದರತ್ತ, ತ್ರಿಪುರಾದಲ್ಲೂ, ದೇಶದಲ್ಲಿಯೂ ಜನತಾ ಪ್ರಜಾಸತ್ತಾತ್ಮಕ ಕ್ರಾಂತಿಯತ್ತ ಆಂದೋಲನವನ್ನು ಬಲಪಡಿಸಬೇಕಾಗಿದೆ. ಸಾಗಬೇಕಿದೆ. ನಿಜ ತ್ರಿಪುರಾ ಮುಂದೆ, ಮುಂದೆ ಸಾಗುತ್ತಿರುವುದೂ ಅಷ್ಟೇ ದಿಟ.

ಬೆನ್ನು ತಿರುಗಿಸಿದರೇಕೆ ಈ ನಾಯಕರು?

ತ್ರಿಪುರಾ ಚುನಾವಣಾ ಪ್ರಚಾರಕ್ಕೆ ಕಾಂಗ್ರೆಸ್ ಪಕ್ಷ ವಿಶೇಷ ಗಮನ ನೀಡಿತ್ತು. ಸಚಿವ ಚಿದಂಬರಂ. ಗೊಗೋಯ್, ಪೆರೆರೋ ಅಲ್ಲದೇ ಕೇಂದ್ರದ ಅದ್ಯಕ್ಷೆ ಸೋನಿಯಾಗಾಂಧಿ, ಪ್ರಧಾನಿ ಮನಮೋಹನಸಿಂಗ್ ರಂತಹ ಮಹಾ ನಾಯಕರುಗಳ ಸಭೆಗಳನ್ನು ಯೋಜಿಸಲಾಗಿತ್ತು. ಇವರಲ್ಲಿ ಬಂದವರೆಂದರೆ ಕಾಂಗ್ರೆಸ್‌ನ ಉಪಾದ್ಯಕ್ಷ ರಾಹುಲಗಾಂಧಿ ಮಾತ್ರವೇ. ಉಳಿದಿಬ್ಬರೂ ನಿಗದಿತ ಕಾರ್ಯಕ್ರಮ ರದ್ದುಗೊಳಿಸಿದರು .ಯಾಕೆ? ಯಾಕೆಂದರೆ ಅವರಿಗೆ ಪೂರ್ವ ನಿಗದಿತ ಹಾಗೂ ನಿರಾಕರಿಸಲಾಗದ ಕಾರ್ಯಕ್ರಮಗಳ ಅನಿವಾರ್ಯತೆಯಿಂದ ಅಂತೆ!

ಆದರೆ ಕಾರಣಗಳನ್ನು ಇಷ್ಟೇಯೆಂದು ಒಪ್ಪುವುದು ಕಷ್ಟ. ಉದಾಹರಣೆಗೆ ಪ್ರಧಾನಮಂತ್ರಿ ಮ.ಮೋ.ಸಿಂಗ್ ಫೆಬ್ರವರಿಯಲ್ಲಿ ತ್ರಿಪುರಾಕ್ಕೆ ಬರಬೇಕಿತ್ತು. ಅವರು ಮುಖ್ಯವಾಗಿ ಮೊದಲು ಬಿಜೋಯ್ ಹ್ರಂಗವಾಲ್‌ನನ್ನು ಬೆಂಬಲಿಸಿ, ಮತ ನೀಡುವಂತೆ ಮನವಿ ಮಾಡಬೇಕಿತ್ತು. ಈ ಹ್ರಂಗವಾಲ್ ಐ.ಎನ್.ಪಿ.ಟಿ ಯ ಅಭ್ಯರ್ಥಿ. ಮಾತ್ರವಲ್ಲ ಉಗ್ರಗಾಮಿ ಸಂಘಟನೆಯಾದ 'ತ್ರಿಪುರಾ ನ್ಯಾಷನಲ್ ವಾಲೆಂಟಿಯರ್' (ಟಿ.ಎನ್.ವಿ.) ನ ನಾಯಕ. ಹಿಂದೆ 1988ರಲ್ಲಿ ಚುನಾವಣೆಯ ಸಂದರ್ಭದಲ್ಲಿ ಈ ಉಗ್ರಗಾಮಿಗಳು ಜನರ ಮೇಲೆ ಗುಂಡು ಹಾರಿಸಿ ಸುಮಾರು 90 ಅಮಾಯಕ ಜನರನ್ನು ಕೊಂದಿದ್ದರು. ಇದನ್ನೇ ಅನುಸರಿಸಿ ಕೇಂದ್ರದ ರಾಜೀವ್ ಗಾಂಧಿ ಸರ್ಕಾರ ಇಡೀ ತ್ರಿಪುರಾವನ್ನು ಗಲಭೆಪೀಡಿತ ಪ್ರದೇಶವೆಂದು ಸಾರಿತು ಮತ್ತು ಇಡೀ ಚುನಾವಣಾ ಪ್ರಕ್ರಿಯೆಯನ್ನು ಹಾಗೂ ಫಲಿತಾಂಶವನ್ನು ಮಿಲಿಟರಿ ಬಲವನ್ನೂ ಬಳಸಿ ಬುಡಮೇಲು ಮಾಡಿ ಕಾಂಗ್ರೆಸ್ ಅಧಿಕಾರ ಹಿಡಿಯಿತು. ನಂತರ ಐದು ವರುಷಗಳಲ್ಲಿ ಮಾರ್ಕ್ಸವಾದಿಗಳು ಹಾಗೂ ಎಡ ಶಕ್ತಿಗಳ ಮೇಲೆ ಅರೆ ಫ್ಯಾಶಿಸ್ಟ್ ದಬ್ಬಾಳಿಕೆ ಅವ್ಯಾಹತವಾಗಿ ನಡೆದಿರುವುದನ್ನು ಯಾರೂ ಮರೆತಿಲ್ಲ.

ಈಗ ಹಾಲಿಯಾಗಿ ಎಡರಂಗದ ಸರಕಾರದ ಕ್ರಮಗಳಿಂದ ಉಗ್ರಗಾಮಿಗಳನ್ನು ಸದೆ ಬಡಿದು ಶಾಂತಿ ನೆಲೆಸುತ್ತಿರುವಾಗ ಅಂತಹ ಉಗ್ರಗಾಮಿ ನಾಯಕನ ಪ್ರಚಾರಕ್ಕೆ ಸ್ವತಃ ಪ್ರಧಾನಿಯೇ ಬರುವುದು ರಾಜ್ಯದ ಜನರನ್ನು ಕೆರಳಿಸಿತು. ಇದರ ವಿರುದ್ಧ ವ್ಯಾಪಕ ಟೀಕೆಗಳು ಬಂದವು. ಇದರ ಪರಿಣಾಮವಾಗಿ ತಮಗೆ ಪ್ರತಿಕೂಲ ಪರಿಣಾಮ ಬೀರುವುದೆಂದು ಅವರ ಕಾರ್ಯಕ್ರಮವನ್ನೇ ರದ್ದುಗೊಳಿಸಿದರು. ಇನ್ನು ಸೋನಿಯಾ ಸಹ ಇಲ್ಲಿಗೆ ಬಂದು ಮಾತನಾಡುವುದೇನು? ಆಗಲೇ ರಾಹುಲಗಾಂಧಿ ಪ್ರಚಾರ ಸಭೆಯಲ್ಲಿ ಎಡರಂಗ ಕೇಂದ್ರದ ಹಣವನ್ನು ನುಂಗಿದೆ ಎಂದು ಹೇಳಿ ಮಂಗಳಾರತಿ ಎತ್ತಿಸಿಕೊಂಡು ಹೋಗಿದ್ದ. ಕೇಂದ್ರದ ಯೋಜನೆಗಳ ಯಶಸ್ವಿ ಜಾರಿಗಾಗಿ 21 ಪ್ರಶಸ್ತಿಗಳನ್ನು ಕೇಂದ್ರವೇ ನೀಡಿರುವಾಗ 'ಯುವರಾಜನ' ಟೀಕೆಗೆ ಅರ್ಥವೇನೆಂದು ಜನ ಜ್ಞಾನ–ಅಜ್ಞಾನವನ್ನು ಪ್ರಶ್ನಿಸಿದ್ದರು. ಇಷ್ಟಾದ ಮೇಲೆ ಮಹಾ ನಾಯಕರು ತ್ರಿಪುರಾದ ಕಡೆಗಾದರೂ ಮುಖ ಮಾಡಿಯಾರೇ?

ಕನವರಿಕೆಯಲ್ಲಿ ಕಾಂಗ್ರೆಸ್........

ಪುಟ 3 ರಿಂದ

ವಾಸ್ತವವನ್ನು ಗುರುತಿಸಬಹುದು.

ಈಗಾಗಲೇ ಬಿಜೆಪಿ ವಿರುದ್ಧ ಹೆಚ್ಚುತ್ತಿರುವ ಜನರ ಅತೃಪ್ತಿಯನ್ನು ಗಣಿಸಿ ಅದು ತಮಗೆ ಲಾಭವಾಗಲಿದೆಯೆಂದು ಭಾವಿಸಿದ ನಾಯಕರು ಮುಖ್ಯಮಂತ್ರಿಯಾಗಲು ಅಡ್ಡಿ ಬರಬಹುದಾದ ಸಂಭವನೀಯರನ್ನು ಮೂಲೆಗೆ ತಳ್ಳುವ, ಒಂದು ಪಕ್ಷಕ್ಕೇ ಬಹುಮತ ಬರದೇ ಅತಂತ್ರ ವಿಧಾನಸಭೆ ಆಯ್ಕೆಯಾದರೆ ಯಾರ ಬಾಲ ಹಿಡಿಯಬೇಕೆಂದೆಲ್ಲಾ ಪಕ್ಷಾತೀತರಾಗಿ ಲಾಭಿ ರಾಜಕಾರಣದಲ್ಲಿ ಮಗ್ನರಾಗಿದ್ದಾರೆ. ಹಾಗೆ ಬಿಜೆಪಿ ಮುಳುಗುವ ಹಡಗೆಂದು ಅಲ್ಲಿಂದ ಸುರಕ್ಷತಾ ವಲಯ ಹುಡುಕುತ್ತಿರುವ ಯೋಗೀಶ್ವರ್, ಸೋಮಣ್ಣ, ಆಸ್ನೋಟಿಕರ್ ಒಳಗೊಂಡು ಹಲವಾರು ಹಾಲೀ ಮಂತ್ರಿಗಳು, ಶಾಸಕರೂ ಕಾಂಗ್ರೆಸ್‌ಗೆ ವಲಸೆ ಬರಲು ಮಾತುಕತೆಗಳು, ಸಿದ್ಧತೆಗಳೂ ನಡೆದಿದ್ದವು, ಬರಲು ಹಲವರು ತುದಿಗಾಲ ಮೇಲೆ ನಿಂತಿದ್ದರು. ಇದು ಅಲ್ಲಿದ್ದವರನ್ನು ಕಂಗಾಲಾಗಿಸಲಾಯಿತಲ್ಲದೇ ಆಯಾರಾಂಗಳ ಅಧಿಕಾರ ಕಬಳಿಕೆ ಹಂಚಿಕೆ ವಿರುದ್ಧ ಕೂಗೆದ್ದವು. ಹೀಗಾಗಿಯೇ ಪ್ರತಿಕೂಲ ಪರಿಣಾಮ ಗಮನಿಸಿದ ಕೆಂದ್ರ ನಾಯಕರು ಆಯರಾಂಗಳೊಂದಿಗೆ ಮಾತುಕತೆಯನ್ನು ಮುಂದೂಡಿದರು. ಈಗ ಈ ಚುನಾವಣೆಗಳು ಮುಗಿದಿರುವ ಸಂದರ್ಭದಲ್ಲಿ ಈ ಕಿತ್ತಾಟ ಗರಿಗೆದರಿದರೆ ಆಶ್ಚರ್ಯವೇನಿಲ್ಲ.

ಜನಶಕ್ತಿ
ಕನ್ನಡ ವಾರಪತ್ರಿಕೆ

ನೀರಿಗೆ ಆಗ್ರಹಿಸಿ ಡಿಸಿಗೆ ಮುತ್ತಿಗೆ

ಕರ್ನಾಟಕ ಪ್ರಾಂತ ಕೃಷಿ ಕೂಲಿಕಾರರ ಸಂಘದಿಂದ ಪ್ರತಿಭಟನೆ

ಹರಪನಹಳ್ಳಿ, ತಾಲೂಕಿನ ಹಾರಕನಾಳು ಸಣ್ಣ ತಾಂಡದಲ್ಲಿ ಕುಡಿಯುವ ನೀರಿನ ವ್ಯವಸ್ಥೆ ಕಲ್ಪಿಸುಂತೆ ಆಗ್ರಹಿಸಿ ಕರ್ನಾಟಕ ಪ್ರಾಂತ ಕೃಷಿಕೂಲಿಕಾರರ ಸಂಘದ ನೇತೃತ್ವದಲ್ಲಿ ಜನತೆ ಇಲ್ಲಿಯ ಪ್ರವಾಸಿ ಮಂದಿರದಲ್ಲಿ ದಾವಣಗೆರೆ ಜಿಲ್ಲಾಧಿಕಾರಿಯವರಿಗೆ ಮುತ್ತಿಗೆ ಹಾಕಿ ಪ್ರತಿಭಟಿಸಿದರು. ತಾಲೂಕಿನ ಗಡಿ ಭಾಗದಲ್ಲಿರುವ ಹಾರಕನಾಳು ಗ್ರಾಮ ಪಂಚಾಯತ್ ವ್ಯಾಪ್ತಿಯಲ್ಲಿ ಬರುವ ಹಾರಕನಾಳು ಸಣ್ಣ ತಾಂಡದಲ್ಲಿ ಕುಡಿಯುವ ನೀರಿನ ಸಮಸ್ಯೆ ತೀವ್ರಗೋಂಡಿದೆ. ಈ ಹಿಂದೆ ಇದೇ ತರಹದ ಸಮಸ್ಯೆ ತಲೆದೋರಿದಾಗ ಸರ್ಕಾರದ ಅಂದಿನ ಕಾರ್ಯದರ್ಶಿ ಅಶೋಕ ಕುಮಾರ ಮನೋಳ್ಳಿ ಸ್ಥಳಕ್ಕೆ ಭೇಟಿ ನೀಡಿ, ಸ್ವಲ್ಪ ಮಟ್ಟಿನ ಪರಿಹಾರ ನೀಡಿದರು. ಇದೀಗ ಮತ್ತೆ ನೀರಿನ ಸಮಸ್ಯೆ ಉಲ್ಬಣವಾಗಿದೆ.



ನಾಲ್ಕೈದು ಕಿ.ಮೀ.: ನೀರಿಗಾಗಿ 4–5 ಕಿಲೋ ಮೀಟರ್ ಹೋಗಬೇಕಾಗಿದೆ, ನೀರಿನ ಸಮಸ್ಯೆ ಜೊತೆ ಬಸ್ ಸೌಲಭ್ಯ, ಬಸ್ ತಂಗುದಾಣ, ಹೀಗೆ ಮೂಲ ಸೌಕರ್ಯ ಇಲ್ಲವಾಗಿದೆ ಎಂದು ಅವರು ಆರೋಪಿಸಿದ್ದಾರೆ. ಕೊಡಲೇ ನೀರಿನ ಸೌಲಭ್ಯ ಒದಗಿಸಬೇಕು, ಓವರ್ ಹೆಡ್ ಟ್ಯಾಂಕ್ ನಿರ್ಮಿಸಬೇಕು ಪಟ್ಟಾ ಜಾಗದಲ್ಲಿ ನಿರ್ಮಿಸಿರುವ ಮನೆಗಳನ್ನು ಕೆಡವಲಾಗುತ್ತದೆ, ಕೆಡವಿದ ಮನೆಗಳನ್ನು ನಿರ್ಮಿಸಿಕೊಡಬೇಕು. ನಮ್ಮ ಬೇಡಿಕೆ ಈಡೇರದಿದ್ದರೆ ಜಿಪಂ ಎಂಜಿನಿಯರಿಂಗ್ ಕಚೇರಿಗೆ ಬೀಗ ಜಡಿದು ಪ್ರತಿಭಟನೆ ಮಾಡಬೇಕಾಗುತ್ತದೆ ಎಂದು ಅವರು ಎಚ್ಚರಿಸಿದ್ದಾರೆ. ಕೃಷಿ ಕೂಲಿಕಾರ ತಾಲೂಕು ಸಮಿತಿ ಅಧ್ಯಕ್ಷ ಎಲ್.ಬಿ. ಹಾಲೇಶ ನಾಯ್ಕ, ಕಾರ್ಯದರ್ಶಿ ಸೇವ್ಯಾ ನಾಯ್ಕ, ತಾ.ಪಂ ಮಾಜಿ ಸದಸ್ಯ ಮಾನ್ಯಾ ನಾಯ್ಕ, ವೆಂಕಟೇಶ ಬೆ ವಿನಹಳ್ಳಿ, ಲಕ್ಷ್ಮಣನಾಯ್ಕ, ನೀಲ ನಾಯ್ಕ ರೇಖಾನಾಯ್ಕ, ರೂಪ್ಲನಾಯ್ಕ, ಯಂಕಬಾಯಿ, ಸೋನಾಬಾಯಿ, ಲಲಿತಬಾಯಿ ಹಾಗೂ ಶಾಲಾ ಮಕ್ಕಳು ಪ್ರತಿಭಟನೆಯಲ್ಲಿ ಪಾಲ್ಗೊಂಡಿದ್ದರು.

ವರದಿ : ಹಾಲೇಶ್ ನಾಯ್ಕ

ಹೆಚ್ಚುತ್ತಿದೆ ಮಕ್ಕಳ ಕಣ್ಮರೆ ಪ್ರಕರಣ

ಕಾಣೆಯಾದ ಗಂಡು ಮಕ್ಕಳ ವಿವರ				ನಾಪತೆಯಾದ ಹೆಣ್ಣು ಮಕ್ಕಳು			
ವರ್ಷ	ಕಣ್ಮರೆ	ಪತ್ತೆ	ಪತ್ತೆಯಾಗದವರು	ವರ್ಷ	ಕಣ್ಮರೆ	ಪತ್ತೆ	ಪತ್ತೆಯಾಗದವರು
2008	1081	444	637	2008	56	10	46
2009	2602	827	1775	2009	868	25	843
2010	4524	2770	1754	2010	2013	866	1147
2011	3115	1723	1392	2011	1434	466	968
2012	2815	1623	1192	2012	1216	491	725
ಒಟ್ಟು	14137	7387	6750	ಒಟ್ಟು	5587	1858	3729

ಕೃಪೆ : ವಿಜಯಕರ್ನಾಟಕ

➡

ಕಳೆದ ಬಾರಿಯಲ್ಲಿ ಪರಸ್ಪರರನ್ನು ಸೋಲಿಸಲು ನಡೆದ ಮಸಲತ್ತಿನಲ್ಲಿ ಕಾಂಗ್ರೆಸ್ ಸುಮಾರು 20 ಶಾಸಕ ಸ್ಥಾನಗಳನ್ನು ಕಳೆದುಕೊಂಡಿತ್ತಲ್ಲವೇ? ಅದು ಪುನರಾವರ್ತನೆ ಯಾಗದಂತೆ ಕಾಂಗ್ರೆಸ್ ಈಗ ಎಚ್ಚರ ವಹಿಸೀತೆ? ಹಾಗೆಂದು ಭಾವಿಸುವುದೂ ಕಷ್ಟ. ಸದ್ಯಕ್ಕೇನೋ ಶತಾಯ ಗತಾಯ ಅಧಿಕಾರ ಗಿಟ್ಟಿಸಿಕೊಳ್ಳಬೇಕೆಂಬ ಅದರ ಹಪಾಹಪಿಯಿದ್ದರೂ ಕಾಲೆಳೆಯುವ ಸಂಸ್ಕೃತಿಯು ಹಲವು ಆವಾಂತರಗಳಿಗೆ ಕಾರಣವಾಗದೇ ಇರದು.

ಬಹು ಮುಖ್ಯವಾಗಿ ಕೇಂದ್ರದಲ್ಲಿನ ಕಾಂಗ್ರೆಸ್ ನೇತೃತ್ವದ ಯು.ಪಿ.ಎ–2 ಸರಕಾರದ ಆವಾಂತರಗಳು, ಅದರ ಭ್ರಷ್ಟಾಚಾರದ ಹತ್ತಾರು ಭಾರೀ ಹಗರಣಗಳು, ಅಸಹನೀಯ ಬೆಲೆ ಏರಿಕೆ, ಹೆಚ್ಚುತ್ತಲೇ ಇರುವ ನಿರುದ್ಯೋಗ, ಮತ್ತಷ್ಟೂ ಆಳಗೊಳ್ಳುತ್ತಿರುವ ಕಾರ್ಷಿಕ ಬಿಕ್ಕಟ್ಟು, ದಿವಾಳಿತನದ ಧೋರಣೆಗಳನ್ನು ಕರ್ನಾಟಕದ ಜನತೆ ಅಷ್ಟು ಸುಲಭದಲ್ಲಿ ಮರೆತು ಬಿಡುತ್ತಾರೆಂದು ಕಾಂಗ್ರೆಸ್ ಹೈಕಮಾಂಡ್ ಅಂದುಕೊಂಡಿದ್ದರೆ ಅದು ಅವರ ಭ್ರಮೆಯೆಂದೇ ಹೇಳಬೇಕಾಗುತ್ತದೆ.

ನಿಜ ಪರ್ಯಾಯ ಮನಗಾಣಬೇಕು

ಅದೇ ಹೊತ್ತಿನಲ್ಲಿ ಬಿಜೆಪಿಯೂ ಸಹ ಈ ಚುನಾವಣೆಯ ಸೋಲಿನಿಂದ ಅಘಾತಕ್ಕೆ ಒಳಗಾಗಿರುವುದು ನಿಜ, ಯಡಿಯೂರಪ್ಪನ ಬೆದರಿಕೆಯೂ ಕಡಿಮೆಯೇನಲ್ಲ. ಅದರ ಸೋಲು ಅನೀರೀಕ್ಷಿತವೇನಲ್ಲ. ಅದರ ಅಧ್ಯಕ್ಷ ಕೆ.ಎಸ್.ಈಶ್ವರಪ್ಪ ರಾಜೀನಾಮೆ ನೀಡಿಯಾಗಿದೆ. ಈ ಹಿನ್ನೆಲೆಯಲ್ಲಿ ಅದರೊಳಗಿನ ಗುಂಪುಗಾರಿಕೆ, ಕಿತ್ತಾಟಗಳೂ, ಪಕ್ಷದ ಅಧಿಕಾರ ವಶದ ಸಂಚುಗಳೂ ಗರಿಗೆದರುತ್ತಿವೆ. ಹೀಗಿರುವಾಗಲೂ ಅದು ಅಧಿಕಾರ ಮರುಗಳಿಕೆಯ ಪ್ರಯತ್ನವನ್ನು ಅಷ್ಟು ಸುಲಭವಾಗಿ ಬಿಡುವುದೂ ಇಲ್ಲ. ಇದಕ್ಕೆ ಆರೆಸ್ಸೆಸ್ ನ ಹಸ್ತವಿದೆ. ಇಂತಹ ಸಂದರ್ಭದಲ್ಲಿ ಜನರಿಗೆ ನಿಜವಾದ ಪರ್ಯಾಯ ಕಟ್ಟುವ ಅಗತ್ಯವನ್ನು ಮನಗಾಣಿಸಬೇಕಿದೆ, ಜನತೆಯೂ ತೆರೆದ ಮನಸ್ಸಿನಿಂದ ನೀತಿಗಳ ಆಧಾರದಲ್ಲಿ ಆಳ ಅಗಲಗಳನ್ನು ಪರಿಶೀಲಿಸಿ ಒಂದು ನಿರ್ಧಾರಕ್ಕೆ ಬರಬೇಕಿದೆ.

STATEMENT OF THE OWNERSHIP ETC

The Weekly Newspaper "JANASHAKTHI KANNADA VARA PATRIKE"

Form IV

(See Rule 8)

1.	Place of Publication	:	EMS Bhavana, No.37/A, 8th Cross, Mahalakshmi Layout, Bangalore-560086 (Karnataka)
2.	Periodicity of Publication	:	weekly
3.	Printer's Name	:	G.V.Sriramareddy
	(Whether Citizen of India? If Foreigner, State the Country of Origin)	:	Indian
4.	Address	:	EMS Bhavana, No.37/A, 8th Cross, Mahalakshmi Layout, Bangalore-560086 (Karnataka)
5.	Editor`s Name	:	Nithyanandaswami
	(Whether Citizen of India? If Foreigner, State the Country of Origin)	:	Indian
	Address	:	EMS Bhavana, No.37/A, 8th Cross, Mahalakshmi Layout, Bangalore-560086 (Karnataka)
6.	Name and address of Individuals Communist Party of India(Marxist) Who own the News paper and Karnataka State Committee partners or Shareholders holding more then one percent of the Total capital	:	EMS Bhavana, No.37/A, 8th Cross, Mahalakshmi Layout, Bangalore-560086 (Karnataka)

I G.V. Srirama reddy, here by declare that the particulars given above are true to the best of my knowledge and belief.

Sd/-
G.V. Sriramareddy
Publisher

Date : March 17, 2013
Bangalore

ಮಹಿಳೆಯರ ಮೇಲಿನ ದೌರ್ಜನ್ಯಗಳ ವಿರುದ್ಧ ಮಂಗಳೂರಿನಲ್ಲಿ ಮೊಳಗಿದ

ವಿಶ್ವ ಮಹಿಳಾ ದಿನದ ಕಹಳೆ

ಕಳೆದ ಡಿಸೆಂಬರ್ 12 ರಂದು ದೆಹಲಿಯಲ್ಲಿ ಚಲಿಸುತ್ತಿದ್ದ ಬಸ್‌ನಲ್ಲಿ 23 ವರ್ಷದ ಯುವತಿಯ ಮೇಲೆ ನಡೆದ ಸಾಮೂಹಿಕ ಅತ್ಯಾಚಾರ ಮತ್ತು ಅದರ ಪರಿಣಾಮವಾಗಿ ಆಕೆಯ ಸಾವು ಕರ್ನಾಟಕದ ಮಹಿಳೆಯರೂ ಇದಕ್ಕೆ ಹಾಗೂ ನಿರಂತರವಾಗಿ ನಡೆಯುತ್ತಿರುವ ಮಹಿಳೆಯ ಮೇಲಿನ ದೌರ್ಜನ್ಯಕ್ಕೆ ತಡೆಯೊಡ್ಡಲು ಏನಾದರೊಂದು ಪ್ರತಿರೋಧ ಮಾಡಲೇಬೇಕೆಂಬ ತೊಡಲು ಕಾರಣವಾಯಿತು. ಹೀಗಾಗಿ ಈ ವರ್ಷದ ವಿಶ್ವ ಮಹಿಳಾ ದಿನದ ವೇಳೆಗೆ ವಿಶಿಷ್ಟ ಕಾರ್ಯಕ್ರಮ ಆಯೋಜಿಸಲ್ಪಟ್ಟಿತು.

ಕಳೆದೊಂದು ವರ್ಷದಲ್ಲಿ ಎದ್ದು ಕಾಣುವ ಹಲವಾರು ಮಹಿಳೆಯರ ಮೇಲಿನ ದೌರ್ಜನ್ಯದ ಘಟನೆಗಳು ಮಂಗಳೂರಿನಲ್ಲಿ ನಡೆದಿವೆ. ಮಾರ್ನಿಂಗ್ ಮಿಸ್ಟ್ ಹೋಂ ಸ್ಟೇಯಲ್ಲಿ ಯುವತಿಯರ ಮೇಲೆ ಹಿಂದೂ ಯುವಸೇನೆಯ ದಾಳಿಯಿಂದ ಅದು ಮೊದಲಾಗಿರಬೇಕು. ಅದಕ್ಕೂ ಮೊದಲೇ ಮೋಹನ್ ಕುಮಾರ್ ಎಂಬ ವಿಕೃತ ಕಾಮಿಯೊಬ್ಬ ದ.ಕ., ಉಡುಪಿ, ಕಾಸರಗೋಡು ಜಿಲ್ಲೆಗಳ 18 ಮಂದಿ ಯುವತಿಯರನ್ನು ಸುಲಿಗೆ ಮಾಡಿ ಅತ್ಯಾಚಾರ ಗೈದು ಕೊಂದು ಹಾಕಿದ್ದ. ಮಂಗಳೂರಿನ ಸಾರ್ವಜನಿಕ ಸ್ಥಳಗಳಲ್ಲಿ ಸಂಸ್ಕೃತಿಯ ಹೆಸರಿನಲ್ಲಿ ಪರಿಚಯದ ಪುರುಷರೊಡನೆ ಒಡನಾಟದಲ್ಲಿದ್ದ ಮಹಿಳೆಯರ ಮೇಲೆ ನಡೆದ ದಾಳಿಗಳು, ಸೌಜನ್ಯ ಹಾಗೂ ಮಾಲತಿಯಂತಹ ಅಮಾಯಕ ಹೆಣ್ಣು ಮಕ್ಕಳ ಮೇಲೆ ನಡೆದ ಅತ್ಯಾಚಾರ ಮತ್ತು ಕೊಲೆ ಪ್ರಕರಣಗಳು ಮಂಗಳೂರಿನಲ್ಲಿ ಮಹಿಳಾ ದೌರ್ಜನ್ಯ ವಿರೋಧಿ ವೇದಿಕೆಯೊಂದರ ಉದಯಕ್ಕೆ ಕಾರಣವಾಯಿತು. ಈ ವೇದಿಕೆಯು ರಾಜ್ಯ ಮಟ್ಟದ ಮಹಿಳಾ ಸಂಘಗಳ ಜಾಲದ ಜತೆಗೂಡಿ, ದೆಹಲಿ ಅತ್ಯಾಚಾರ ಪ್ರಸಂಗದ ಬಳಿಕ, ತಾವೊಂದು ರಾಜ್ಯ ಮಟ್ಟದ ಬೃಹತ್ ಪ್ರತಿಭಟನೆಯನ್ನು ಮಂಗಳೂರಿನಲ್ಲೇ ವಿಶ್ವ ಮಹಿಳಾ ದಿನದ ಸಂದರ್ಭದಲ್ಲೇ ಹಮ್ಮಿಕೊಳ್ಳಬೇಕೆಂದು ತೀರ್ಮಾನಿಸಿದವು.

ಲೇಖಕಿಯರಾದ ದು.ಸರಸ್ವತಿ, ಡಾ.ಎಚ್.ಎಸ್.ಅನುಪಮ, ಕೆ.ನೀಲಾ, ಸಬಿಹಾ ಭೂಮಿಗೌಡ, ಗುಲಾಬಿ ಬಿಳಿಮಲೆ, ಚಂದ್ರಕಲಾ ನಂದಾವರ, ಬಿ.ಎಂ. ರೋಹಿಣಿ ಮೊದಲಾದವರು ಮತ್ತು ಮಂಗಳೂರಿನ ಮಹಿಳಾ ಸಂಘಟಕರಾದ ಮರ್ಲಿನ್ ಮಾರ್ಟಿಸ್, ವಿದ್ಯಾ ದಿನಕರ್, ಪ್ರೊರೀಟಾ ನೊರೊನ್ಹಾ, ಮಲ್ಲಿಕಾ ಎಂ. ಮೊದಲಾದವರು ನೇತೃತ್ವ ವಹಿಸಿ ರಾಜ್ಯದ ಹಲವು ನೆಲೆಯ ಮಹಿಳಾ ಸಂಘಟನೆಗಳನ್ನು ಒಂದು ವೇದಿಕೆಯಲ್ಲಿ ತಂದು ಮಾರ್ಚ್ 6 ರಿಂದ 8ರ ವರೆಗೆ 3 ದಿನಗಳ ಕಾಲ ಮಂಗಳೂರಿನಲ್ಲಿ ಹಾಕಿಕೊಂಡಿದ್ದ ಕಾರ್ಯಕ್ರಮದ ಬಗ್ಗೆ ಮೆಚ್ಚುಗೆ ಸೂಚಿಸಲೇಬೇಕು.

ಕಾರ್ಯಕ್ರಮಗಳು :

ಮಾರ್ಚ್ 6 ರಂದು ಮದ್ಯಾಹ್ನ ಗಂಟೆ 2 ರಿಂದ 4.30ರ ವರೆಗೂ ಮಂಗಳೂರು ವಿಶ್ವ ವಿದ್ಯಾಲಯ ಕೊಣಾಜೆಯಲ್ಲಿ ಮಹಿಳಾ ಕೇಂದ್ರಿತ ಚಲನಚಿತ್ರಗಳ ಹಾಗೂ ಸಾಕ್ಷ್ಯ ಚಿತ್ರಗಳ ಪ್ರದರ್ಶನ ಮತ್ತು ಸಂವಾದ ನಡೆಯಿತು. ಅದೇ ದಿನ ಸಂಜೆ ಗಂಟೆ 4.30 ರಿಂದ 6.30 ತನಕ ಮಂಗಳೂರಿನ ಹಂಪನಕಟ್ಟೆಯ



ಸಿಗ್ನಲ್ ವೃತ್ತದಿಂದ ಯುನಿವರ್ಸಿಟಿ ತನಕ ಫುಟ್‌ಪಾತ್‌ನಲ್ಲಿ ಮಹಿಳೆಯರು ಕಪ್ಪು ಬಟ್ಟೆಯನ್ನು ಉಟ್ಟುಕೊಂಡು ಮೇಣದ ಬತ್ತಿ ಹಚ್ಚಿ ಪ್ರತಿಭಟನೆ ನಡೆಸಿದರು.

ಕಪ್ಪು ಉಡುಗೆಯಲ್ಲಿ ಪ್ಯಾಲೆಸ್ತೀನ್ ಮತ್ತು ಇಸ್ರೇಲಿನ ಮಹಿಳೆಯರು ಯುದ್ಧ ಮತ್ತು



ಮೂಲಭೂತವಾದವನ್ನು ವಿರೋಧಿಸಿ ಮೇಣದ ಬತ್ತಿ ಹಚ್ಚಿ ಶಾಂತಿಯುತ ಪ್ರತಿಭಟನೆ ಮೂಲಕ ತಮಗೆ ಯುದ್ಧ ಬೇಡವೆಂದು ಸಾರಿದ್ದರು. ಬಾಬ್ರಿ ಮಸೀದಿ ಧ್ವಂಸದ ಬಳಿಕವೂ ದೇಶದ ಕೆಲವೆಡೆ ಕಪ್ಪು ವಸ್ತ್ರ ಧರಿಸಿ ಪ್ರತಿಭಟನೆ ನಡೆದಿತ್ತು. ಕರ್ನಾಟಕದ ಮಹಿಳೆಯರೂ ತಾವು ಶಾಂತಿಯ ಪರವಾಗಿದ್ದೇವೆ ಎಂದು ಇಲ್ಲೂ ಸಾರಿ ಹೇಳಿದರು.

ವಿಚಾರ ಸಂಕಿರಣ:

ಮಾರ್ಚ್ 7 ರಂದು ಮಂಗಳೂರು ವಿಶ್ವ ವಿದ್ಯಾಲಯದ ಮಹಿಳಾ ಅಧ್ಯಯನ ಕೇಂದ್ರದ ಆಶ್ರಯದಲ್ಲಿ ಮಹಿಳೆಯರ ಮೇಲಿನ ದೌರ್ಜನ್ಯಗಳ ವಿಭಿನ್ನ ಆಯಾಮಗಳ ಕುರಿತು ವಿಚಾರ ಸಂಕಿರಣ ನಡೆಯಿತು.

ವಿಚಾರ ಸಂಕಿರಣವನ್ನು ಉದ್ಘಾಟಿಸಿ ಮಾತನಾಡಿದ ಖ್ಯಾತ ಮರಾಠಿ ಲೇಖಕಿ ಹಾಗೂ ದಲಿತ ಸಂಘಟಕಿ ಊರ್ಮಿಳಾ ಪವಾರ್ ಮಾತನಾಡುತ್ತಾ, "ಮಹಿಳೆಯ ಮೇಲಿನ ದೌರ್ಜನ್ಯ ಇಂದಿನದಲ್ಲ. ಹಿಂದಿನ ಕಾಲದಿಂದಲೂ ಮಹಿಳೆಯರನ್ನು ಅಮಾನವೀಯವಾಗಿ ಚಿತ್ರಿಸಿ ಹಿಂಸಿಸಲಾಗಿದೆ. ಮಹಿಳೆ ಜತೆ ಸರಿ ಸಮಾನವಾಗಿ ಗುರುತಿಸಿಕೊಳ್ಳಲು ಪುರುಷನ ಅಹಂಕಾರ ಅಡ್ಡಗಾಲು ಹಾಕುತ್ತಿದೆ. ಆಧುನಿಕ ಕಾಲದಲ್ಲಂತೂ ಮಹಿಳೆಯ ಮೇಲಿನ ದೌರ್ಜನ್ಯ ಹೆಚ್ಚಿದೆ. ಅದಕ್ಕೆ ಪ್ರತಿರೋಧವೂ ಹೆಚ್ಚಿದೆ" ಎಂದು ಹೇಳಿದರು.

ಮಹಿಳೆಯನ್ನು ಆಸ್ತಿಯಂತೆ ಪರಿಗಣಿಸುವ, ಅವಳಿಂದ ಲಾಭ ನಷ್ಟಗಳನ್ನು ನಿರೀಕ್ಷಿಸುವ ಪುರುಷರಿದ್ದಾರೆ. ಆದರೆ ಮಹಿಳೆಯ ಮೇಲಿನ ಅತ್ಯಾಚಾರ ಇನ್ನಿತರ ಸಮಸ್ಯೆಗಳು ಬಗೆ ಹರಿಯಬೇಕೆಂದರೆ, ಮಹಿಳೆಗೆ ಜಾಗೃತಿಯೇ ಮುಖ್ಯ ಅಸ್ತ್ರ" ಎಂದು ಹಲವಾರು ಉದಾಹರಣೆಗಳಿಂದ ಅವರು ವಿವರಿಸಿದರು.

ಮಂಗಳೂರು ವಿ.ವಿ.ಉಪಕುಲಪತಿ ಪ್ರೊ.ಟಿ.ಸಿ.ಶಿವಶಂಕರ ಮೂರ್ತಿ, ಡಾ.ಕೆ. ಕಿಶೋರಿ ನಾಯಕ್, ಲೇಖಕಿಯರಾದ ಕೆ.ನೀಲಾ, ಡಾ.ಎಚ್.ಎಸ್.ಅನುಪಮಾ, ಮಧುಭೂಷಣ್, ಡಾ.ಅನಸೂಯ ಕಾಂಬ್ಳೆ, ಸಿ.ಜೆ.ಮಂಜುಳಾ, ಸುಚೇತನಾ ನಾಯ್ಕ್ ಇವರುಗಳು ಸಂಕಿರಣದಲ್ಲಿ ವಿಚಾರ ಮಂಡನೆ ಮಾಡಿದರು.

ಮಹಿಳಾ ದಿನ ತುಂಬಾ ಪ್ರತಿಭಟನೆಯ ಹಾಡುಗಳು:

ರಾಜ್ಯದ ಜಿಲ್ಲೆ ಜಿಲ್ಲೆಗಳನ್ನು ಪ್ರತಿನಿಧಿಸಿದ ಮಹಿಳಾ ಸಂಘಗಳ ಸದಸ್ಯರು ಮಾರ್ಚ್ 8ರ ಬೆಳಿಗ್ಗೆ 10 ಗಂಟೆಗೆ ಮೊದಲೇ ಮಂಗಳೂರಿನ ಬಂಟ್ಸ್ ಹಾಸ್ಟೇಲ್ ವೃತ್ತದಲ್ಲಿ ಗುಂಪುಗೂಡಿದ್ದರು. ವಿವಿಧ ಘೋಷಣೆಗಳು ಬರೆಯಲ್ಪಟ್ಟ ಭಿತ್ತಿ ಪತ್ರಗಳು ಅವರ ಕೈಯಲ್ಲಿ. ಪ್ರತಿ ಸಂಘಟನೆಯವರು ತಮ್ಮ ತಮ್ಮ ಬ್ಯಾನರ್ ತಂದಿದ್ದರೂ ಎಲ್ಲರಿಗೂ ಮುಂದೆ ಅಂದಿನ ಜಾಥಾ ಸಮಾವೇಶದ ಬ್ಯಾನರು. ಕರಾವಳಿ ಕೊರಗ ಸಂಘಟನೆಗಳ ಒಕ್ಕೂಟದ ಅಧ್ಯಕ್ಷೆ ಸುಶೀಲ ಕೊರಗ ನಾಡ ಅವರು ತಮ್ಮ ಮಾತುಗಳಿಂದ ಜಾಥಾ ಉದ್ಘಾಟಿಸಿದರು. ಕೆಲಸದ ಸ್ಥಳದಲ್ಲಿ ಮಹಿಳೆಯರ ರಕ್ಷಣೆ ಕುರಿತಾದ ವಿಶಾಖಾ ಗೈಡ್‌ಲೈನ್ಸ್‌ಗೆ ಕಾರಣಕರ್ತರಾದ ರಾಜಸ್ಥಾನದ ಬಾಂವ್ರಿದೇವಿ ಹಾಡೊಂದರ ಮೂಲಕ ಜಾಥಾ ಸಂಚಲನಕ್ಕೆ ಚಾಲನೆ ನೀಡಿದರು. ಅಂಕೋಲದ ವಿಶಿಷ್ಟ ಉಡುಪಿನ ಹಾಲಕ್ಕಿ ಬುಡಕಟ್ಟು ಮಹಿಳೆಯರಿಂದ ಶುರುವಾಗಿ ಬೆಂಗಳೂರಿನ ಗಾರ್ಮೆಂಟ್ಸ್ ಉದ್ಯೋಗಿಗಳು, ಲೈಂಗಿಕ ಕಾರ್ಯಕರ್ತೆಯರು, ಅಸಂಘಟಿತ ಮಂಗಳ ಮುಖಿಯರವರೆಗೆ ವಿವಿಧ ವೃತ್ತಿಗಳ ಮಹಿಳೆಯರು ಈ ಜಾಥಾದಲ್ಲಿ ಜೊತೆಗೂಡಿದರು. ನವ ಸಾಕ್ಷರ ಮಹಿಳೆಯರು, ಸ್ವಸಹಾಯ ಗುಂಪಿನವರು, ಅಂಗನವಾಡಿ ನೌಕರರು, ಬುರ್ಖಾಧಾರಿಣಿ ಮಹಿಳೆಯರೂ ತುಂಬಿಕೊಂಡಿದ್ದರು. ಬಂಟ್ಸ್ ಹಾಸ್ಟೇಲ್ ವೃತ್ತದಿಂದ ಸಾಗಿದಾಗ ಸಿಗುವ ಪಿವಿಎಸ್ ವೃತ್ತ, ಬೆಸೆಂಟ್ ಕಾಲೇಜು ವೃತ್ತ, ಲಾಲ್‌ಭಾಗ್ ವೃತ್ತಗಳಲ್ಲಿ ಜಾಥಾ ಅಲ್ಪ ನಿಲುಗಡೆ ಹೊಂದಿದಾಗೆಲ್ಲ, ಒಂದಲ್ಲ ಒಂದು ತಂಡವಾಗಿ ಸಿದ್ಧವಾಗಿ ದೌರ್ಜನ್ಯ ವಿರೋಧಿ ಹಾಡುಗಳನ್ನು ಹಾಡುತ್ತಿತ್ತು.

ಮಂಗಳೂರು ಕರಾವಳಿ ಉತ್ಸವ ಮೈದಾನದ ಪೆಂಡಾಲಿನಲ್ಲಿ ಹಾಕಿದ್ದ ನಾಲ್ಕು ಸಾವಿರ ಕುರ್ಚಿಗಳೂ ತುಂಬಿ ಹೋದವು. ಎಲ್ಲಾ ಭಾಷಣಕಾರರ ಮಾತಿನ ನಡುವೆ ಹಾಡೊಂದು ಇದ್ದೇ ಇರುತ್ತಿತ್ತು. ಪ್ರತಿಯೊಬ್ಬರ ಭಾಷಣಗಳೂ ಮೂರು ನಿಮಿಷಕ್ಕೆ ಸೀಮಿತಗೊಳಿಸಿದ್ದರಿಂದ,

ಪುಟ 15 ಕ್ಕೆ

ಜನಶಕ್ತಿ
ಕನ್ನಡ ವಾರಪತ್ರಿಕೆ

ರಾಜಕೀಯ ಸಾರ್ವಭೌಮತೆಗೆ ಸಂಚಕಾರ ತಂದಿರುವ ಇಟಾಲಿಯನ್ ನಾವಿಕರ ಪ್ರಶ್ನೆ

ಇಟಾಲಿಯನ್ ನಾವಿಕರು ಭಾರತೀಯ ಪ್ರದೇಶದಲ್ಲಿ ಭಾರತೀಯ ಕಾನೂನನ್ನು ಉಲ್ಲಂಘಿಸಿದ್ದಾರೆ, ಆದ್ದರಿಂದ ನಮ್ಮ ಕಾನೂನಿನ ಅಡಿಯಲ್ಲಿ ಶಿಕ್ಷಿಸಬೇಕಾಗಿದೆ. ಈ ಸಂದರ್ಭದಲ್ಲಾಗಿರುವಂತಹ ಲೋಪ ಅಥವ ಭಾರತದ ಸಾರ್ವಭೌಮತೆಗೆ ಸಂಚಕಾರ ತರುವಲ್ಲಿ ಶಾಮೀಲು ಅಪರೂಪದ ಸಂಗತಿಯೇನಲ್ಲ ಎಂಬುದು ಒಂದು ಹೆಚ್ಚು ಗಂಭೀರವಾದ ಆತಂಕದ ವಿಷಯ. ಆರ್ಥಿಕ ಸಾರ್ವಭೌಮತೆಯನ್ನು ನವ-ಉದಾರವಾದಿ ಸುಧಾರಣೆಗಳ ಹೆಸರಿನಲ್ಲಿ ಬಿಟ್ಟು ಕೊಡಲು ಸಿದ್ಧವಾದರೆ, ಅದು ಎಂದಿಗೂ ಅಲ್ಲಿಗೇ ನಿಲ್ಲುವುದಿಲ್ಲ, ಬದಲಿಗೆ ನಮ್ಮ ರಾಜಕೀಯ ಸಾರ್ವಭೌಮತೆಗೂ ಸಂಚಕಾರ ತರುತ್ತದೆ ಎಂಬ ನಮ್ಮ ನಿಲುವನ್ನು ಇದು ಸಾಬೀತು ಮಾಡುತ್ತದಷ್ಟೇ.


ಸೀತಾರಾಂ ಯೆಚುರಿ

ಒಂದು ವರ್ಷದ ಹಿಂದೆ, ಫೆಬ್ರುವರಿ 15, 2012 ರಂದು ಕೇರಳದಲ್ಲಿ ಭಾರತೀಯ ಮೀನುಗಾರರನ್ನು ಕೊಂದ ಆಪಾದನೆ ಎದುರಿಸುತ್ತಿರುವ ಇಬ್ಬರು ಇಟಾಲಿಯನ್ ನಾವಿಕರನ್ನು ಮರಳಿಸಲು ಇಟಾಲಿಯನ್ ಸರಕಾರ ನಿರಾಕರಿಸುತ್ತಿರುವುದು ಸಂಸತ್ತಿನ ಎರಡೂ ಸದನಗಳಲ್ಲಿ ಆಕ್ರೋಶಕ್ಕೆ ಕಾರಣವಾಗಿದೆ. ಸುಪ್ರಿಂ ಕೋರ್ಟ್ ಇವರನ್ನು ಅಲ್ಲಿಯ ಚುನಾವಣೆಗಳಲ್ಲಿ ಮತ ಚಲಾಯಿಸಲು ಹೋಗಲು ಅವಕಾಶ ನೀಡಿತ್ತು. ಮತದಾನ ಮುಗಿಸಿ ಅವರು ಬಂದು ವಿಚಾರಣೆಯ ಮುಂದುವರಿಕೆಗೆ ನ್ಯಾಯಾಂಗ ಬಂಧನಕ್ಕೆ ಹಿಂದಿರುಗ ಬೇಕಾಗಿತ್ತು. ಆದರೆ ಭಾರತದಲ್ಲಿ ಇಟೆಲಿಯ ರಾಯಭಾರಿ ಸುಪ್ರಿಂ ಕೋರ್ಟಿಗೆ ಅವರನ್ನು ಮರಳಿ ಕಳಿಸುವುದಾಗಿ ನೀಡಿದ ಗಂಭೀರ ಭರವಸೆಯನ್ನು ಇಟೆಲಿಯ ಸರಕಾರ ಪಾಲಿಸುತ್ತಿಲ್ಲ.

ಸಂಸತ್ತಿನಲ್ಲಿ ಗದ್ದಲಕ್ಕೆ ಕಾರಣವಾದ ಪ್ರಶ್ನೆಯಿದು: ಭಾರತ ಈ ಇಬ್ಬರು ಇಟಾಲಿಯನ್ ಬಂಧಿಗಳು ಸುಮಾರಾಗಿ ಪರಾರಿಯೇ ಆಗಲು ಅವಕಾಶ ನೀಡಿದ್ದು ಹೇಗೆ? ಪ್ರಧಾನ ಮಂತ್ರಿಗಳು ಎರಡೂ ಸದನಗಳಲ್ಲಿ ಹೇಳಿಕೆ ನೀಡಬೇಕಾಗಿ ಬಂತು. ಇಟೆಲಿಯ ಸರಕಾರದ ಕ್ರಮಗಳನ್ನು ಒಪ್ಪಲು ಸಾಧ್ಯವಿಲ್ಲ, ಅದು ತನ್ನ ಮಾತು ಉಳಿಸಿಕೊಳ್ಳದಿದ್ದರೆ ನಮ್ಮ ಸಂಬಂಧಗಳ ಮೇಲೆ ಪರಿಣಾಮವಾಗಬಹುದು ಎಂದು ಅವರು ಹೇಳಿದರು.


ಭಾರತದಲ್ಲಿ ವಿಚಾರಣಾಧೀನ ಕೈದಿಗಳು ಕಾನೂನಿನ ಪ್ರಕಾರ ಚುನಾವಣೆಗಳಲ್ಲಿ ಮತದಾನ ಮಾಡಲು ಅವಕಾಶವಿಲ್ಲ. ಹೀಗಿರುವಾಗ ಭಾರತೀಯ ಜಲಪ್ರದೇಶದಲ್ಲಿ(ಸಾರ್ವಭೌಮ ಪ್ರದೇಶದಲ್ಲಿ) ಕೊಲೆಯ ಆಪಾದನೆಗೆ ಒಳಗಾಗಿರುವ, ಭಾರತೀಯ ಕಾನೂನಿನ ಅಡಿಯಲ್ಲಿ ವಿಚಾರಣೆ ಎದುರಿಸುತ್ತಿರುವ ಈ ಇಟಾಲಿಯನ್ ನಾವಿಕರನ್ನು ಭಾರತೀಯ ವಿಚಾರಣಾಧೀನ ಕೈದಿಗಳಿಗಿಂತ ಭಿನ್ನವಾಗಿ ಕಾಣಲು ಹೇಗೆ ಸಾಧ್ಯ-ಇದೀಗ ಸಂಸತ್ತು ಬಿಂಬಿಸಿದ ಜನತೆಯ ನಡುವಿನ, ಅದರಲ್ಲೂ ಕೇರಳದಲ್ಲಿನ ಆಕ್ರೋಶಕ್ಕೆ ಕಾರಣ. ಈ ಮೊದಲೇ ಒಮ್ಮೆ ಈ ನಾವಿಕರನ್ನು ತಮ್ಮ ಕುಟುಂಬದವರೊಂದಿಗೆ ಕ್ರಿಸ್‌ಮಸ್ ಆಚರಿಸಲೆಂದು ಇಟಲಿಗೆ ಹೋಗಲು ಅವಕಾಶ ನೀಡಲಾಗಿತ್ತು. ಉದಾಹರಣೆಗೆ, ದಿಲ್ಲಿಯ ತಿಹಾರ್ ಜೈಲುವಾಸಿಗಳಿಗೆ ಮುಂಬರುವ ಹೋಳಿ ಹಬ್ಬವನ್ನು ಕುಟುಂಬದವರೊಂದಿಗೆ ಆಚರಿಸಲೆಂದು ಬಿಡುತ್ತಾರೆಯೇ? ಈ ಇಟಾಲಿಯನ್ನರ ವಿಷಯದಲ್ಲಿ ಭಿನ್ನ ನಿಯಮಗಳೇ ಇದ್ದಂತೆ ಸ್ಪಷ್ಟವಾಗಿ ಕಾಣಿಸುತ್ತಿದೆ.

ಇಲ್ಲಿ ಇನ್ನೂ ವಿಶಾಲ ಅರ್ಥದಲ್ಲಿ, ನಮ್ಮ ದೇಶದ ಸಾರ್ವಭೌಮತೆಯ, ಮತ್ತು ಅದರ ಪಾವಿತ್ರ್ಯವನ್ನು ಕಾಯ್ದುಕೊಳ್ಳುವ ಭಾರತೀಯ ಪ್ರಭುತ್ವದ ಸಾಮರ್ಥ್ಯದ ಪ್ರಶ್ನೆಯೂ ಇದೆ. ಈ ಇಟಾಲಿಯನ್ ನಾವಿಕರು ಭಾರತೀಯ ಪ್ರದೇಶದಲ್ಲಿ ಭಾರತೀಯ ಕಾನೂನನ್ನು ಉಲ್ಲಂಘಿಸಿದ್ದಾರೆ, ಆದ್ದರಿಂದ ನಮ್ಮ ಕಾನೂನಿನ ಅಡಿಯಲ್ಲಿ ಶಿಕ್ಷಿಸಬೇಕಾಗಿದೆ. ಈ ಸಂದರ್ಭದಲ್ಲಾಗಿರುವಂತಹ ಲೋಪ ಅಥವ ಭಾರತದ ಸಾರ್ವಭೌಮತೆಯನ್ನು ಬುಡಮೇಲು ಮಾಡುವಲ್ಲಿನ ಶಾಮೀಲು ಅಪರೂಪದ ಸಂಗತಿಯೇನಲ್ಲ ಎಂಬುದು ಒಂದು ಹೆಚ್ಚು ಗಂಭೀರವಾದ ಆತಂಕದ ವಿಷಯ.





ಡೇವಿಡ್ ಹೆಡ್ಲಿ



ಕೃಪೆ: ದಿ ಹಿಂದೂ

ಬಹಳ ಹಿಂದೆ 1984ರಲ್ಲಿ, ಭೋಪಾಲದ ಯೂನಿಯನ್ ಕಾರ್ಬೈಡ್ ಕಾರ್ಖಾನೆಯಲ್ಲಿ ವಿಷಾನಿಲ ಸೋರಿಕೆಯಾದಾಗ, ನಾಲ್ಕು ದಿನಗಳ ನಂತರ ಅಮೆರಿಕಾದಿಂದ ಭಾರತಕ್ಕೆ ಬಂದ ಅದರ ಅಧ್ಯಕ್ಷ ವಾರೆನ್ ಆಂಡರ್ಸನ್ ಬಂಧನವಾಯಿತು. ಆದರೆ ಕೆಲವೇ ಗಂಟೆಗಳಲ್ಲಿ ಆತ ರಾಜ್ಯ ಸರಕಾರದ ವಿಮಾನವನ್ನು ಬಳಸಿ ಪರಾರಿಯಾದ ಎಂಬ ಆಪಾದನೆಯಿದೆ. ಆತನನ್ನು ಭಾರತಕ್ಕೆ ಒಪ್ಪಿಸಿ ವಿಚಾರಣೆ ಎದುರಿಸುವಂತೆ, ಭಾರತದ ಕಾನೂನಿನ ಪ್ರಕಾರ ಶಿಕ್ಷೆ ಅನುಭವಿಸುವಂತೆ ಮಾಡುವ ಭಾರತೀಯ ಸರಕಾರದ ಪ್ರಯತ್ನಗಳು ಯಾವವೂ ಫಲಕಾರಿಯಾಗಲಿಲ್ಲ.

ಇನ್ನಷ್ಟು ಶಾಮೀಲುಗಳು

1995ರಲ್ಲಿ ಮದ್ದು-ಗುಂಡುಗಳ ಒಂದು ದೊಡ್ಡ ಮೂಟೆಯನ್ನು ಪಶ್ಚಿಮ ಬಂಗಾಲದ ಪುರುಲಿಯ ಜಿಲ್ಲೆಯಲ್ಲಿ ವಿಮಾನ ಮೂಲಕ ಇಳಿಸಲಾಯಿತು. ಇದರ ಮುಖ್ಯ ಆಪಾದಿತ, ಕಿಮ್ ಡೆವಿ, ಅಥವ ನೀಲ್ಸ್ ಹಾಲ್ಕ್ ಎಂಬ ನಿಜ ನಾಮಧೇಯದ ಡೆನ್ಮಾರ್ಕಿನ ನಾಗರಿಕ ಇದಕ್ಕೆ ಬಳಸಿದ ವಿಮಾನ ಮುಂಬೈ ವಿಮಾನ ನಿಲ್ದಾಣದಲ್ಲಿ ಇಳಿದಾಗ ಪರಾರಿಯಾಗಲು ಬಿಡಲಾಯಿತು. ಹಾಗೆ ಪರಾರಿಯಾಗಲು ಅನುಕೂಲ ಮಾಡಿಕೊಟ್ಟದ್ದು ಆಗ ಸಂಸತ್ ಸದಸ್ಯನಾಗಿದ್ದ ಪಪ್ಪು ಯಾದವ್ (ಈತ ಈಗ ಬಿಹಾರದ ಪೂರ್ಣಿಯಾದ ಸಿಪಿಐ(ಎಂ) ಶಾಸಕ ಅಜಿತ್ ಸರ್ಕಾರ್ ಕೊಲೆಯ ಆಪಾದನೆಯಲ್ಲಿ ಪ್ರಮುಖ ಆರೋಪಿಯಾಗಿ ವಿಚಾರಣೆ ಎದುರಿಸುತ್ತ ಬಂಧನದಲ್ಲಿದ್ದಾನೆ) ಎನ್ನಲಾಗಿದೆ. ಈ ಮದ್ದು-ಗುಂಡುಗಳು ಸಿಪಿಐ(ಎಂ) ನೇತೃತ್ವದ ಎಡರಂಗ ಸರಕಾರದ ವಿರುದ್ಧವಿರುವ ಶಕ್ತಿಗಳು ಹಿಂಸಾತ್ಮಕ ಅರಾಜಕತೆ ಮತ್ತು ಗದ್ದಲಗಳನ್ನು ಸೃಷ್ಟಿಸುವಲ್ಲಿ, ಅದನ್ನು ನೆಪ ಮಾಡಿಕೊಂಡು ಅಲ್ಲಿ ರಾಷ್ಟ್ರಪತಿ ಆಳ್ವಿಕೆಯನ್ನು ಹೇರುವಂತೆ ಮಾಡುವಲ್ಲಿ ಸಹಾಯ ಮಾಡುವುದಕ್ಕಾಗಿ ಕಳಿಸಿದವುಗಳು ಎಂದು ಪುರುಲಿಯ ಜೈಲಿನಲ್ಲಿ ಆತನ ಸಹಯೋಗಿ ಪಿಟರ್ ಬ್ಲೀಚ್ ತಪ್ಪೊಪ್ಪಿಗೆ ಮಾಡಿರುವದಾಗಿ ದೊಡ್ಡ ಸುದ್ದಿಯಾಯಿತು. ಈ ತಪ್ಪೊಪ್ಪಿಗೆಯ ಆಧಾರದಲ್ಲಿ ಆತನಿಗೆ ಬಿಜೆಪಿ ನೇತೃತ್ವದ ಎನ್‌ಡಿಎ ಆಳ್ವಿಕೆಯಲ್ಲಿ ಅಬ್ದುಲ್ ಕಲಾಂ ಜನವರಿ 30, 2004ರಂದು ರಾಷ್ಟ್ರಪತಿಗಳ ಕ್ಷಮಾದಾನ ನೀಡಿದರು. ನಂತರ ಆತ ಭಾರತ ಬಿಟ್ಟು ಹೋದ.

ಮುಂಬೈ ಮೇಲಿನ 26/11 ಭಯೋತ್ಪಾದಕ ದಾಳಿಗಳ ಗುರಿಗಳ ಸರ್ವೆ ನಡೆಸಿದ ಪ್ರಚಂಡ ಡೇವಿಡ್ ಹೆಡ್ಲಿ ಇದೇ ರೀತಿಯಲ್ಲಿ ಭಾರತೀಯ ಕಾನೂನಿನ ಅಡಿಯಲ್ಲಿ ವಿಚಾರಣೆ ಎದುರಿಸದೆ ತಪ್ಪಿಸಿಕೊಳ್ಳಲು ಅವಕಾಶ ನೀಡಲಾಯಿತು. ಆತ 2008ರ ಮುಂಬೈ ಭಯೋತ್ಪಾದಕ ದಾಳಿಗಳಲ್ಲಿ ಒಂದು ಪ್ರಮುಖ ಪಾತ್ರ ವಹಿಸಿದ್ದ ಎಂಬುದು ಸಾಬೀತಾಗಿರುವುದರಿಂದ ಭಾರತೀಯ ನ್ಯಾಯಾಲಯದಲ್ಲಿ ವಿಚಾರಣೆ ಎದುರಿಸಲೇ ಬೇಕು ಎಂದು ಆರಂಭದಲ್ಲಿ ಭಾರತ ಒತ್ತಾಯ ಮಾಡಿತ್ತು. ಭಾರತ ಮತ್ತು ಅಮೆರಿಕಾ ನಡುವೆ ಅಪರಾಧಿಗಳನ್ನು ವಿಚಾರಣೆ ಎದುರಿಸಲು ವಶಕ್ಕೆ ಒಪ್ಪಿಸುವ ಬಗ್ಗೆ ಒಂದು ಸಂಧಿಯಿದೆ. ಆದರೂ, ಮನಮೋಹನ ಸಿಂಗ್ ಸರಕಾರ ಅಮೆರಿಕಾದ




ಪುಟ 10ಕ್ಕೆ

ಕಾಂಗ್ರೆಸಿಗೆ ಅನಾಯಾಸವಾಗಿ ಲಾಭ ತಂದ ನಗರ ಸ್ಥಳೀಯ ಸಂಸ್ಥೆಗಳ ಚುನಾವಣೆ –2013

ನಿತ್ಯಾನಂದ ಸ್ವಾಮಿ

ನಿರೀಕ್ಷೆಯಂತೆ, ಇದೇ ಮಾರ್ಚ್ 7ರಂದು ನಡೆದ ನಗರ ಸ್ಥಳೀಯ ಸಂಸ್ಥೆಗಳ ಚುನಾವಣೆಯಲ್ಲಿ ಬಿಜೆಪಿ ಸರ್ಕಾರದ ದುರಾಡಳಿತದ ಲಾಭ ಅನಾಯಾಸವಾಗಿ ಕಾಂಗ್ರೆಸ್ ಪಾಲಾಗಿದೆ. ಕಳೆದ ಸಲಕ್ಕಿಂತ ಕಾಂಗ್ರೆಸಿಗೆ ಸುಮಾರು 350 ಸ್ಥಾನಗಳು ಹೆಚ್ಚಿಗೆ ಸಿಕ್ಕಿವೆ. ಇದನ್ನು ಕಾಂಗ್ರೆಸ್ ಪರವಾಗಿ ವ್ಯಕ್ತವಾದ ಜನಬೆಂಬಲ ಎಂದು ವ್ಯಾಖ್ಯಾನಿಸಲಾಗದು. ಬದಲಾಗಿ, ಬಿಜೆಪಿ ವಿರೋಧಿ ಮತಗಳು ಕಾಂಗ್ರೆಸಿಗೆ ಹರಿದು ಬಂದಿವೆ ಎಂಬುದಾಗಿ ಕಾಣಬೇಕಾಗಿದೆ. ರಾಜ್ಯದ ನಗರ ಪ್ರದೇಶಗಳ ಮತದಾರರು ಬಿಜೆಪಿಯನ್ನು ಅದರ ದುರಾಡಳಿತ, ಭ್ರಷ್ಟಾಚಾರ, ಕೋಮುವಾದ ಮೊದಲಾದವುಗಳಿಗಾಗಿ ತಿರಸ್ಕರಿಸಿದ್ದಾರೆ ಎಂಬುದು ಈ ಫಲಿತಾಂಶದಿಂದ ಸ್ಪಷ್ಟವಾಗಿದೆ. ಬಿಜೆಪಿಯ ಭದ್ರಕೋಟೆಯಂತಿದ್ದ ಕರಾವಳಿ ಜಿಲ್ಲೆಗಳಲ್ಲಿ ಜನ, ಅನೇಕ ವರ್ಷಗಳ ನಂತರ, ಬಿಜೆಪಿಯನ್ನು ತಿರಸ್ಕರಿಸಿ ಕಾಂಗ್ರೆಸಿಗೆ ಮಣೆ ಹಾಕಿರುವುದು ಇದನ್ನೇ ಸ್ಪಷ್ಟಪಡಿಸುತ್ತದೆ. ಕರಾವಳಿ ಜಿಲ್ಲೆಗಳಲ್ಲಿ ಬಿಜೆಪಿಯ ಹೀನಾಯ ಸೋಲಿಗೆ ನಾವು ಪಂಕ್ತಿಬೇಧ, ಮಡೆಸ್ನಾನದ ವಿರುದ್ಧ ನಡೆಸುತ್ತಾ ಬಂದ ಪ್ರಚಾರಪ್ರಕ್ಷೋಭೆ ತನ್ನದೇ ಆದ ಕಾಣಿಕೆಯನ್ನು ನೀಡಿದೆ.

ಸ್ಥಳೀಯ ಸಂಸ್ಥೆಗಳ ಚುನಾವಣಾ ಫಲಿತಾಂಶವನ್ನು, ಕಾಂಗ್ರೆಸ್ ಮುಂಬರುವ ವಿಧಾನಸಭಾ ಚುನಾವಣಾ ಫಲಿತಾಂಶದ ದಿಕ್ಸೂಚಿ ಎಂದು ಬಣ್ಣಿಸಲು ಆರಂಭಿಸಿದರೆ ಅಶ್ಚರ್ಯವಿಲ್ಲ. 371ನೇ ಕಲಂ ತಿದ್ದುಪಡಿ ಅಂಗೀಕಾರ ವಿಷಯವನ್ನು ಚುನಾವಣಾ ವಿಷಯವಾಗಿ ಮಾಡಿಕೊಂಡು ಅದರ ಸಂಪೂರ್ಣ ಲಾಭ ಪಡೆಯಲು ಕಾಂಗ್ರೆಸ್ ಸಿದ್ಧತೆ ನಡೆಸಿದೆ.

ಆದರೆ ವಲಸಿಗರ ಸೇರ್ಪಡೆ, ಟಿಕೆಟ್ ಹಂಚಿಕೆ ಇತ್ಯಾದಿ ಪ್ರಕ್ರಿಯೆಗಳು ಆರಂಭವಾಗುವಾಗ


ಪಕ್ಷಗಳ ಬಲಾಬಲ	2013	2007
ಒಟ್ಟು ವಾರ್ಡ್‌ಗಳು	4976	5004
ಘೋಷಿತ ಪಲಿತಾಂಶ	4952	5004
ಕಾಂಗ್ರೆಸ್	1960	1606
ಬಿಜೆಪಿ	905	1180
ಜೆಡಿಎಸ್	905	1502
ಕೆಜೆಪಿ	274	–
ಬಿಎಸ್‌ಆರ್	86	–
ಸಿಪಿಎಂ	**13**	**15**
ಸಿಪಿಐ	01	02
ಎನ್‌ಸಿಪಿ	01	00
ಪಕ್ಷೇತರರು	778	621
ಇತರರು	29	72

ಕಾಂಗ್ರೆಸ್ ನಾಯಕರ ಕಾಲೆಳೆಯುವ ಪ್ರವೃತ್ತಿ ಕಾಂಗ್ರೆಸ್ ಒಳಗಿನ ಗುಂಪುಗಾರಿಕೆಯನ್ನು ಬಡಿದೆಬ್ಬಿಸದೆ ಇರಲಾರದು. ಕೆಲವು ಅತಂತ್ರ ಪುರಸಭೆ/ನಗರಸಭೆಗಳನ್ನು ತನ್ನ ವಶಕ್ಕೆ ಪಡೆಯಲೂ ಕಾಂಗ್ರೆಸ್ ಪ್ರಯತ್ನ ಮಾಡಬಹುದು.

ಬಿಜೆಪಿಯಲ್ಲಿ, ಅಧ್ಯಕ್ಷರ ಆಯ್ಕೆಯ ವಿಷಯದಲ್ಲಿ ತಲೆದೋರಿರುವ ಬಿಕ್ಕಟ್ಟು ಸ್ಥಳೀಯ ಸಂಸ್ಥೆಗಳ ಚುನಾವಣೆಯಲ್ಲಿ ಉಂಟಾದ ಹಿನ್ನಡೆಯಿಂದಾಗಿ ಇನ್ನಷ್ಟು ತೀವ್ರಗೊಳ್ಳುವ ಸಾಧ್ಯತೆ ಇದೆ. ಮೀಸಲಾತಿಯನ್ನು ಬಳಸಿಕೊಂಡು ಅತಂತ್ರ ಪುರಸಭೆ/ನಗರಸಭೆಗಳನ್ನು ಬಿಜೆಪಿ ತನ್ನ ಬುಟ್ಟಿಗೆ ಹಾಕಿಕೊಳ್ಳಲು ಪ್ರಯತ್ನವಮಾಡಬಹುದು. ವಿಧಾನಸಭಾ ಚುನಾವಣೆಯಲ್ಲಿ ಮತಗಳನ್ನು ಸೆಳೆಯಲು ಕೆ.ಜಿ.ಗೆ. 2 ರೂ. ದರದಲ್ಲಿ ಬಿ.ಪಿ.ಎಲ್ ಕುಟುಂಬಗಳಿಗೆ ಅಕ್ಕಿ ವಿತರಣೆ ಮಾಡುವ ಯೋಜನೆಯನ್ನು ಸರ್ಕಾರ ಈಗಾಗಲೇ ಪ್ರಕಟಿಸಿದೆ. ಇಂತಹ ಇನ್ನೂ ಅನೇಕ ಜನಾಕರ್ಷಕ ಯೋಜನೆಗಳನ್ನು ಶೆಟ್ಟರ ಸರ್ಕಾರ ವಿಧಾನಸಭಾ ಚುನಾವಣಾ ನೀತಿ ಸಂಹಿತೆ ಪ್ರಕಟವಾಗುವ ವರೆಗೂ ಘೋಷಿಸುತ್ತಲೇ ಇರುವುದು. ಕೋಮು ಗಲಭೆಗಳನ್ನು ಉಂಟುಮಾಡಿ ಹಿಂದೂ ಮತ ಬ್ಯಾಂಕನ್ನು ಭದ್ರಗೊಳಿಸಲು ಅದು ಪ್ರಯತ್ನಿಸದೆ ಇರಲಾರದು.

ನಿಚ್ಚಳ ಬಹುಮತ : ಯಾವ ಪಕ್ಷಕ್ಕೆ ಎಷ್ಟು ?	ಒಟ್ಟು	ಕಾಂಗ್ರೆಸ್	ಬಿಜೆಪಿ	ಜೆಡಿಎಸ್	ಕೆಜೆಪಿ	ಅತಂತ್ರ
ಮಹಾನಗರ ಪಾಲಿಕೆಗಳು	07	03	–	–	–	04
ನಗರ ಸಭೆಗಳು	43	10	02	05	–	26
ಪುರಸಭೆಗಳು	92	37	10	09	03	33
ಪಟ್ಟಣ ಪಂಚಾಯಿತಿಗಳು	65	18	08	02	02	35

ಯಡಿಯೂರಪ್ಪನವರ ಕೆಜೆಪಿ ಸ್ಥಳೀಯ ಸಂಸ್ಥೆಗಳ ಚುನವಣೆಯಲ್ಲಿ ಭಾರೀ ಸಾಧನೆ ಮಾಡಲು ಸಾಧ್ಯವಾಗದಿದ್ದರೂ ಹಲವಾರು ಜಿಲ್ಲೆಗಳಲ್ಲಿ ಬಿಜೆಪಿಯನ್ನು ಸೋಲಿಸಲು ಕಾರಣವಾಗಿದೆ. ಆದರೆ ಅದೇ ಸಮಯದಲ್ಲಿ ತನ್ನ ನಂಬಿಗಸ್ತ ಶಾಸಕ ಅನುಯಾಯಿಗಳು ತನ್ನೊಂದಿಗೆ ಬರಲು ಹಿಂದೇಟು ಹಾಕುತ್ತಿರುವುದರಿಂದಾಗಿ ಯಡಿಯೂರಪ್ಪ ತುಂಬಾ ಮೆತ್ತಗಾಗಿದ್ದಾರೆ. ಒಂದು ಕಾಲದಲ್ಲಿ



ಜಾತಿ, ಹಣ, ಸೇಡಿನ ರಾಜಕಾರಣ, ಅಧಿಕಾರ ದುರ್ಬಳಕೆ ಮುಂತಾದವುಗಳಿಂದ ಮೆರೆದಿದ್ದ ಯಡಿಯೂರಪ್ಪನವರಿಗೆ ಈಗ ಅವೆಲ್ಲವೂ ತಿರುಗುಬಾಣವಾಗುತ್ತಿದೆ.

ಈ ಸಲದ ಸ್ಥಳೀಯ ಸಂಸ್ಥೆಗಳ ಚುನಾವಣೆಯಲ್ಲಿ ಜೆಡಿಎಸ್ ಹೊಸ ಪ್ರದೇಶಗಳಿಗೆ ವಿಸ್ತರಣೆಯಾಗುವಲ್ಲಿ ಯಶಸ್ವಿ ಆಗಿರುವುದು ಗಮನಾರ್ಹವಾಗಿದೆ. ಆದರೆ ಜೆಡಿಎಸ್ ಗಣನೀಯ ಸ್ಥಾನಗಳನ್ನು ಕಳೆದುಕೊಂಡಿದೆ, ಅದರ ಭದ್ರನೆಲೆಗಳಲ್ಲಿ ಒಂದಾಗಿದ್ದ ರಾಮನಗರ ಜಿಲ್ಲೆಯಲ್ಲಿ ಅದಕ್ಕೆ ಸೋಲಾಗಿದೆ.

ಬಿಎಸ್‌ಆರ್ ಕಾಂಗ್ರೆಸ್ ಪಕ್ಷ ತನ್ನ ತವರು ಜಿಲ್ಲೆ ಬಳ್ಳಾರಿಯಲ್ಲಿಯೇ

ದೋಳೀಪಟವಾಗಿದೆ. ಅಕ್ರಮ ಗಣಿಗಾರಿಕೆ ಕಪ್ಪುಹಣದ ರಾಜಕೀಯವನ್ನು ಜನರು ತಿರಸ್ಕರಿಸಿದ್ದಾರೆ. ಚುನಾವಣಾ ಅಕ್ರಮಗಳನ್ನು ತಡೆಗಟ್ಟುವಲ್ಲಿ ಬಳ್ಳಾರಿ ಜಿಲ್ಲಾಧಿಕಾರಿಗಳ ಬಿಗಿಯಾದ ನಿಲುಮೆಯು ಸಹ ಈ ಬೆಳವಣಿಗೆಗೆ ಒಂದು ಪ್ರಮುಖ ಕಾರಣವಾಗಿದೆ ಎನ್ನಲಾಗುತ್ತದೆ.







ಬೆಂಗಳೂರು, ತುಮಕೂರು ಮೊದಲಾದ ಒಂದೆರಡು ಜಿಲ್ಲೆಗಳಲ್ಲಿ ಸೋಷಿಯಲ್ ಡೆಮೊಕ್ರಾಟಿಕ್ ಪಾರ್ಟಿ ಆಫ್ ಇಂಡಿಯಾ ಎಂಬ ಮುಸ್ಲಿಂ ಮೂಲಭೂತವಾದಿ ಪಕ್ಷ (ಎಸ್‌ಡಿಪಿಐ) ಕೆಲವು ಕಡೆ ಖಾತೆಗಳನ್ನು ತೆರೆದಿರುವುದು ಆತಂಕದ ಸಂಗತಿಯಾಗಿದೆ.

ಸಿಪಿಐ(ಎಂ) ಸ್ಪರ್ಧೆ :

ನಗರ ಸ್ಥಳೀಯ ಸಂಸ್ಥೆಗಳ ಚುನಾವಣೆಯಲ್ಲಿ ಸಿಪಿಐ(ಎಂ) 143 ವಾರ್ಡುಗಳಲ್ಲಿ ಸ್ಪರ್ಧೆ ಮಾಡಿತ್ತು. 13 ವಾರ್ಡ್‌ಗಳಲ್ಲಿ ಅದು ಗೆದ್ದಿದೆ. 3 ಸ್ಥಾನಗಳಲ್ಲಿ ಸಿಪಿಐ(ಎಂ) ಬೆಂಬಲಿತ ಸ್ವತಂತ್ರ ಅಭ್ಯರ್ಥಿಗಳು ಗೆದ್ದಿದ್ದಾರೆ.

1. **ಬಾಗೇಪಲ್ಲಿ ಪುರಸಭೆ – 6,** (1) ವನಜಾ, (2) ಬಿ.ಬಿ. ಜ್ಯೋತಿ, (3) ಮಹಮ್ಮದ್ ಅಕ್ರಮ್, (4) ಒಬಲರಾಜು, (5) ಆರೀಫ್, (6) ಜಬಿಉಲ್ಲಾ.
2. **ಕುಂದಾಪುರ ಪುರಸಭೆ – 2,** (1) ಗುಣರತ್ನ, (2) ಕಲಾವತಿ ಯು.ಎಸ್.
3. **ಮಂಗಳೂರು ಮಹಾನಗರ ಪಾಲಿಕೆ – 1,** (1) ದಯಾನಂದ ಶೆಟ್ಟಿ
4. **ಮೂಡಬಿದ್ರೆ ಪುರಸಭೆ – 1,** (1) ರಮಣಿ.
5. **ಕೋಲಾರ ಪುರಸಭೆ – 1,** (1) ಗಾಂಧಿನಗರ ನಾರಾಯಣಸ್ವಾಮಿ
6. **ಕೆ.ಜಿ.ಎಫ್. ಪುರಸಭೆ – 1,** (1) ಜಯದೇವಿ ಜಿ.ಎಸ್. ಮಣಿ
7. **ಗಜೇಂದ್ರಗಡ ಪುರಸಭೆ – 1,** (1) ಎಂ.ಎಸ್. ಹಡಪದ

ಬಾಗೇಪಲ್ಲಿ ಪುರಸಭೆಯಲ್ಲಿ ಸ್ವತಂತ್ರವಾಗಿ ಸ್ಪರ್ಧಿಸಿದ್ದ ಸಿಪಿಐ(ಎಂ) ಪಕ್ಷದ ಹಿತೈಷಿಗಳಾದ ಇಬ್ಬರು ಅಭ್ಯರ್ಥಿಗಳು ಸಹ ಜಯಗಳಿಸಿದ್ದಾರೆ.

ಅತ್ಯಂತ ಕಡಿಮೆ ಸಮಯದಲ್ಲಿ ಹಣಕಾಸಿನ ಕೊರತೆಯನ್ನೂ ಅನುಭವಿಸಿ 143 ಸ್ಥಾನಗಳಿಗೆ ಸಿಪಿಐ(ಎಂ) ನಡೆಸಿದ ಪ್ರಯತ್ನ ಅಭಿನಂದನಾರ್ಹವಾಗಿದೆ.

ಕಾಂಗ್ರೆಸನ್ನೂ ಬಯಲಿಗೆಳೆಯಬೇಕು :

ರಾಜ್ಯ ಸರ್ಕಾರದ ದುರಾಡಳಿದಿಂದಾಗಿ ಜನರ ಆಕ್ರೋಶ ಸಹಜವಾಗಿ ಬಿಜೆಪಿ ಮೇಲೆ ಕೇಂದ್ರೀಕೃತವಾಗುತ್ತಿದೆ. ಹೀಗಾಗಿ ಜನ ಯಾಂತ್ರಿಕವಾಗಿ ಕಾಂಗ್ರೆಸನ್ನು ಬೆಂಬಲಿಸಲು ಹೊರಡುವ ಅಪಾಯ ಎದ್ದು ಕಾಣುತ್ತಿದೆ. ಆದರೆ ಇಂದು ಜನತೆ ಅನುಭವಿಸುತ್ತಿರುವ ಎಲ್ಲಾ ಸಮಸ್ಯೆಗಳಿಗೆ ಕೇಂದ್ರದ ಕಾಂಗ್ರೆಸ್ ನೇತೃತ್ವದ ಸರ್ಕಾರದ ದೋರಣೆಗಳೇ ಕಾರಣ ಎಂಬುದನ್ನು ಜನತೆ ಮನಗಾಣುವಂತೆ ಮಾಡುವುದು ನಮ್ಮ ದೊಡ್ಡ ಜವಾಬ್ದಾರಿಯಾಗಿದೆ.

ದೇಶದಲ್ಲಿ ಇಂದು ಆರ್ಥಿಕ ಬಿಕ್ಕಟ್ಟು ತೀವ್ರಗೊಳ್ಳುತ್ತಿರುವುದು, ಕೈಗಾರಿಕಾ ಬೆಳವಣಿಗೆ ಕುಸಿಯುತ್ತಿರುವುದು ಐಟಿ ಕ್ಷೇತ್ರವೂ ಒಳಗೊಂಡಂತೆ ನಿರುದ್ಯೋಗ ಸಮಸ್ಯೆ ಉಲ್ಬಣಗೊಳ್ಳುತ್ತಿರುವುದು ಕೇಂದ್ರ ಕಾಂಗ್ರೆಸ್ ಸರ್ಕಾರದ ದೋರಣೆಗಳ ಪರಿಣಾಮವಾಗಿದೆ.

ಪೆಟ್ರೋಲ್ – ಡಿಸೆಲ್ ಬೆಲೆಗಳನ್ನು ಆಗಾಗ ಏರಿಸಲು ಅವಕಾಶಮಾಡಿಕೊಡುವ ಮೂಲಕ ಕೇಂದ್ರ ಸರ್ಕಾರ ಅಗತ್ಯ ವಸ್ತುಗಳ ಬೆಲೆಯೇರಿಕೆಗೆ ಕಾರಣವಾಗುತ್ತಿದೆ. ಆಹಾರ ಧಾನ್ಯಗಳ ವ್ಯಾಪಾರದಲ್ಲಿ ಮುಂಗಡ ವ್ಯಾಪಾರಕ್ಕೆ ಅವಕಾಶ ಮಾಡಿಕೊಡುವ ಅದರ ನೀತಿಯ ಮುಂದುವರಿಕೆಯಿಂದಾಗಿ ಆಹಾರ ಪದಾರ್ಥಗಳ ತೀವ್ರ ಬೆಲೆಯೇರಿಕೆಗೆ ಕಾರಣವಾಗಿದೆ. ಈ ಸಲ ರೈಲ್ವೇ ಬಜೆಟ್ ಮಂಡಿಸುವ ಪೂರ್ವದಲ್ಲೇ ರೈಲು ಪ್ರಯಾಣ ದರಗಳನ್ನು ಏರಿಸಿ ಜನರ ಮೇಲೆ ಹೊರೆ ಹೇರಲಾಯಿತು. ರೈಲ್ವೇ ಬಜೆಟ್‌ನಲ್ಲಿ ಸಾಗಾಣಿಕೆ ದರಗಳನ್ನು ಹೆಚ್ಚಿಸುವ ಮೂಲಕ ಇನ್ನೊಂದು ಸುತ್ತಿನ ವ್ಯಾಪಕ ಬೆಲೆಯೇರಿಕೆಗೆ ದಾರಿಮಾಡಿ ಕೊಡಲಾಯಿತು.

ಭ್ರಷ್ಟಾಚಾರದ ಬೃಹತ್ ಹಗರಣಗಳಲ್ಲಿ ಯುಪಿಎ ಸರ್ಕಾರದ ಮಂತ್ರಿಗಳು, ಸಂಸದರು ಮಾತ್ರವಲ್ಲ ಕರ್ನಾಟಕದ ಕಾಂಗ್ರೆಸ್ ಮುಖಂಡರ ಪಾತ್ರವೂ ಇದೆ ಎಂಬುದನ್ನು ಜನರ ಗಮನಕ್ಕೆ ತರಬೇಕಾಗಿದೆ. ಅಕ್ರಮ ಗಣಿಗಾರಿಕೆಯಲ್ಲಿ ಡಿ.ಕೆ. ಶಿವಕುಮಾರ್ ಅವರ ಪಾತ್ರ ಬಯಲಿಗೆ ಬಂದಿದೆ. ಬೆಂಗಳೂರಿನ ಎಚ್‌ಎಂಟಿ ಭೂಮಿಯನ್ನು ಮಾರಾಟ ಮಾಡುವುದರಲ್ಲಿ ಸಾವಿರಾರು ಕೋಟಿ ರೂ.ಗಳ ಭ್ರಷ್ಟಚಾರ ನಡೆದಿದ್ದು ಎಸ್.ಎಂ. ಕೃಷ್ಣ, ಡಿ.ಕೆ. ಶಿವಕುಮಾರ್, ಮೋಟಮ್ಮ ಮೊದಲಾದವರು ಪಾಲುದಾರರಾಗಿದ್ದಾರೆ.


ಮುಂಬರುವ ಚುನಾವಣೆಯಲ್ಲಿ ಬಿಜೆಪಿಯನ್ನು ಹಾಗೂ ಕಾಂಗ್ರೆಸನ್ನು ತಿರಸ್ಕರಿಸುವಂತೆ ಜನರಿಗೆ ಮನವರಿಕೆ ಮಾಡುವುದು ಮುಖ್ಯ ಕರ್ತವ್ಯವಾಗಿದೆ. ಎರಡು ಪ್ರಮುಖ ಪಕ್ಷಗಳನ್ನು ತಿರಸ್ಕರಿಸಲು ಕರೆ ನೀಡುವಾಗ ಯಾರಿಗೆ ಮತ ನೀಡಬೇಕು ಎಂಬ ಪ್ರಶ್ನೆ ಎದುರಾಗುವುದು ಸಹಜ. ಎಡಪಕ್ಷಗಳು ಸ್ಪರ್ಧೆಮಾಡುವ ಕ್ಷೇತ್ರಗಳಲ್ಲಿ ಎಡಪಕ್ಷಗಳನ್ನು ಬೆಂಬಲಿಸುವಂತೆ ಪ್ರಚಾರ ಮಾಡಬೇಕು. ಇತರ ಕಡೆಗಳಲ್ಲಿ ಏನು ಮಾಡಬೇಕು ಎಂಬುದನ್ನು ಎಡಪಕ್ಷಗಳು ಸೂಕ್ತ ಸಮಯದಲ್ಲಿ ನಿರ್ಧರಿಸಿ ಆ ನಿರ್ಧಾರವನ್ನು ಜಾರಿಗೊಳಿಸಲು ಶ್ರಮಿಸುವಂತಾಗಬೇಕು.

ಮುಂಬರುವ ವಿಧಾನಸಭಾ ಚುನಾವಣೆಯಲ್ಲಿ ಎಡಪಕ್ಷಗಳ ಸ್ಪರ್ಧೆ :

ಪುಟ 12 ಕ್ಕೆ



ತ್ರಿಪುರ ತೋರಿದ ಪರ್ಯಾಯ



ರಾಜಕೀಯ ಸಾರ್ವಭೌಮತೆಗೆ...

ಪುಟ 7 ರಿಂದ

ಅಡಿಯಾಳಿನಂತೆಯೇ ಇದ್ದರೂ, ಅಮೆರಿಕ ಸರಕಾರ ಹೆಡ್ಲಿಯನ್ನು ಭಾರತದಲ್ಲಿ ವಿಚಾರಣೆ ಎದುರಿಸಲು ಕಳಿಸಲು ನಿರಾಕರಿಸಿತು.

ಈ ರೀತಿ ಭಾರತದ ಸಾರ್ವಭೌಮತೆಯನ್ನು ಬುಡಮೇಲು ಮಾಡುವ ಅತ್ಯಂತ ಪ್ರಖ್ಯಾತ ಘಟನೆಯೆಂದರೆ ಒಟ್ಟೇವಿಯೊ ಕ್ವಟ್ರೋಚಿಯದ್ದು. 1986ರಲ್ಲಿ 15 ಬಿಲಿಯ ಡಾಲರುಗಳ ಬೊಫೋರ್ಸ್ ಹಗರಣ ಬಯಲಾದಾಗ, ಬಂಧನದಿಂದ ತಪ್ಪಿಸಿಕೊಳ್ಳಲು ಕ್ವಟ್ರೋಚಿ ಭಾರತ ಬಿಟ್ಟು ಹೋದ. ಆತನ ಲಂಡನ್ ಬ್ಯಾಂಕ್ ಖಾತೆಯನ್ನು ಜಪ್ತಿ ಮಾಡಲಾಯಿತು. ಆದರೆ ನಂತರ ಅದನ್ನು ಹೇಗೆ ಮುಕ್ತಗೊಳಿಸಲಾಯಿತೆಂಬುದು ರಹಸ್ಯವಾಗುಳಿದಿದೆ. ಮುಂದೆ 2008ರಲ್ಲಿ ಆತನ ವಿರುದ್ಧ ಮೊಕದ್ದಮೆ ಜಾರಿಹೋಗಿದೆ ಎಂಬಂತಹ ಸಂಕೇತವನ್ನು ಭಾರತ ನೀಡಿತು. 2011ರಲ್ಲಿ, ಒಂದು ದಿಲ್ಲಿ ನ್ಯಾಯಾಲಯ ಕ್ವಟ್ರೋಚಿ ವಿರುದ್ಧ ಕ್ರಿಮಿನಲ್ ಮೊಕದ್ದಮೆಯನ್ನು ಮುಚ್ಚಲು ಸಿಬಿಐಗೆ ಅನುಮತಿ ನೀಡಿತು.

ತುಷ್ಟೀಕರಣದ ದುಷ್ಫಲ

ಹೀಗೆ ಇತ್ತೀಚಿನ ಇಟಾಲಿಯನ್ ನಾವಿಕರ ಈ ಮೊಕದ್ದಮೆ ಬಹಳ ಅಪರೂಪದ್ದೇನಲ್ಲ. ಇವನ್ನೆಲ್ಲ ಭಾರತೀಯ ಪ್ರಭುತ್ವದ ಲೋಪಗಳು ಅಥವ ಬರೀ ಅದಕ್ಷತೆಯೆಂದು ಭಾವಿಸಲು ಸಾಧ್ಯವಿಲ್ಲ. ಈ ಹೆಚ್ಚಿನ ಸಂದರ್ಭಗಳಲ್ಲಿ, ವಿವಿಧ ಮಟ್ಟಗಳ ಅಧಿಕಾರಸ್ಥರ ಶಾಮೀಲನ್ನು ಕಾಣಬಹುದು. ಅದಕ್ಕಿಂತಲೂ ಮುಖ್ಯವಾಗಿ, ಈ ರೀತಿಯಾಗಿ ಭಾರತದ ಸಾರ್ವಭೌಮತೆಯನ್ನು ಮತ್ತು ಕಾನೂನಿನ ಆಳ್ವಿಕೆಯನ್ನು ಬುಡಮೇಲು ಮಾಡುತ್ತಿರುವುದಕ್ಕೂ, ನಿರ್ದಿಷ್ಟವಾಗಿ, ವಿದೇಶಿ ನಾಗರಿಕರು ಭಾರತೀಯ ಕಾನೂನುಗಳನ್ನು ನಿರ್ಭಿಡೆಯಾಗಿ ಉಲ್ಲಂಘಿಸುತ್ತಿರುವುದಕ್ಕೂ, 1991ರಿಂದ ಭಾರತದಲ್ಲಿ ಅನುಸರಿಸಲು ಆರಂಭಿಸಿದ ಆರ್ಥಿಕ ಸುಧಾರಣೆಗಳ ನವ-ಉದಾರವಾದಿ ದಿಕ್ಕಿಗೂ ನೇರ ಸಂಬಂಧವಿದೆ. ಅಂತರ‍್ರಾಷ್ಟ್ರೀಯ ಹಣಕಾಸು ಬಂಡವಾಳದ ನಿರ್ದೇಶನಗಳಿಗೆ ತಲೆಬಾಗಿ ವಿದೇಶಿ ಹೂಡಿಕೆಗಳನ್ನು ಆಕರ್ಷಿಸುವ ಆಕಾಂಕ್ಷೆ ಮತ್ತು ಆತುರದಿಂದಾಗಿ, ಭಾರತ ನಮ್ಮ ರಾಜಕೀಯ ಸಾರ್ವಭೌಮತೆಯನ್ನು ಮತ್ತು ಕಾನೂನಿನ ಆಳ್ವಿಕೆಯನ್ನು ದೃಢವಾಗಿ ಎತ್ತಿ ಹಿಡಿಯಲು ಹಿಂದೆ-ಮುಂದೆ ನೋಡುವ ಒಂದು ಪ್ರಭುತ್ವವಾಗಿದೆ ಎಂದೇ ಹೆಚ್ಚೆಚ್ಚಾಗಿ ಕಾಣಲಾಗುತ್ತಿದೆ. ಹೀಗೆ ನಮ್ಮ ಸಾರ್ವಭೌಮತೆಯನ್ನು ಬಲಿಗೊಟ್ಟಾದರೂ ವಿದೇಶಿ ಬಂಡವಾಳದ ಈ ರೀತಿಯ ತುಷ್ಟೀಕರಣ ಭಾರತೀಯ ರಾಷ್ಟ್ರದ ಜೀವಾಳವನ್ನು, ಅದರ ಚಾರಿತ್ರ್ಯವನ್ನು ಬುಡಮೇಲು ಮಾಡುತ್ತದೆ. ಇದು, ಆರ್ಥಿಕ ಸಾರ್ವಭೌಮತೆಯನ್ನು ನವ-ಉದಾರವಾದಿ ಸುಧಾರಣೆಗಳ ಹೆಸರಿನಲ್ಲಿ ಬಿಟ್ಟು ಕೊಡಲು ಸಿದ್ಧವಾದರೆ, ಅದು ಎಂದಿಗೂ ಅಲ್ಲಿಗೇ ನಿಲ್ಲುವುದಿಲ್ಲ, ಬದಲಿಗೆ ನಮ್ಮ ರಾಜಕೀಯ ಸಾರ್ವಭೌಮತೆಗೂ ಸಂಚಕಾರ ತರುತ್ತದೆ ಎಂಬ ನಮ್ಮ ನಿಲುವನ್ನು ಸಾಬೀತು ಮಾಡುತ್ತದಷ್ಟೇ.

ಹೀಗಾಗುವಂತೆ ಬಿಡಲು ಸಾಧ್ಯವಿಲ್ಲ. ಹಿಂದಿನ ಎಲ್ಲ ಸಂದರ್ಭಗಳಲ್ಲಿ ಭಾರತ ತನ್ನ ಸಾರ್ವಭೌಮತೆಯನ್ನು ಬಿಟ್ಟುಕೊಟ್ಟಿದೆಯೆಂದೇ ಹೇಳಬಹುದಾದರೂ, ಪ್ರಧಾನ ಮಂತ್ರಿಗಳು, ಇಟಾಲಿಯನ್ ನಾವಿಕರ ಈ ನಿರ್ದಿಷ್ಟ ಪ್ರಶ್ನೆಯಲ್ಲಿ, ಸಂಸತ್ತಿಗೆ ಕೊಟ್ಟ ವಚನವನ್ನು ಅಕ್ಷರಶಃ ಎತ್ತಿ ಹಿಡಿಯುತ್ತಾರೆ, ಭಾರತೀಯ ಸಂವಿಧಾನ ಮತ್ತು ಸಾರ್ವಭೌಮತೆಯ ಅನುಲ್ಲಂಘನೀಯತೆಯನ್ನು ಎತ್ತಿ ಹಿಡಿಯುವ ಪ್ರತಿಜ್ಞೆಗೈದಿರುವ ಒಬ್ಬ ಪ್ರಧಾನ ಮಂತ್ರಿಯಿಂದ ನಿರೀಕ್ಷಿಸುವ ದೃಢತೆ ಮತ್ತು ಬದ್ಧತೆಯನ್ನು ಪ್ರದರ್ಶಿಸುತ್ತಾರೆ ಎಂದು ಆಶಿಸಬೇಕಷ್ಟೇ.

"ಪಶುಗಳಾಗಿದ್ದ ನಾವು ಮನುಷ್ಯರಾಗುತ್ತೇವೆ"

ಪುಟ 16 ರಿಂದ

ಸಂಘ ಸಂಸ್ಥೆಗಳಿಗೆ ವಾಣಿಜ್ಯ ಮಂಡಳಿಗೆ ಮತ್ತೆ ಒಂದು ಮನವಿಯನ್ನು ಮಾಡಲಾಯಿತು. ಆಗ ಸ್ವತಃ ವಾಣಿಜ್ಯ ಮಂಡಳಿ ಅಧ್ಯಕ್ಷರ ಮನೆಯಲ್ಲಿಯೇ ಸಂಧಾನದ ಮಾತುಕತೆಗಳು ನಡೆದುವು. ಗಣಿ ಕಂಪನಿಯ ಮುಖ್ಯಸ್ಥರನ್ನೇ ಮಾತುಕತೆಗೆ ಖುದ್ದು ಹಾಜರಾಗುವಂತೆ ಒತ್ತಾಯಿಸಲಾಯಿತು. ಅಲ್ಲಿಯ ಚರ್ಚ್ ಮುಖ್ಯಸ್ಥರೂ ಕೂಡ ಮಧ್ಯಸ್ಥಿಕೆಗೆ ಮುಂದಾದರು. ಅವರೆಲ್ಲರ ಮೇಲೂ ಕಾರ್ಮಿಕರ ಅಪೂರ್ವ ಶಿಸ್ತು ಹಾಗೂ ಮುಷ್ಕರದ ಸಂಪೂರ್ಣ ಯಶಸ್ಸು ಪ್ರಭಾವ ಬೀರಿತ್ತು. ಇವೆಲ್ಲ ಒತ್ತಡ ಹಾಗೂ ತಮ್ಮೆಲ್ಲ ಕ್ರೂರ ತಂತ್ರಗಳ ವಿಫಲತೆಗಳ ಹಿನ್ನೆಲೆಯಲ್ಲಿ ಗಣಿ ಕಂಪನಿಯ ಮಾಲೀಕ ವರ್ಗಕ್ಕೆ ಕಾರ್ಮಿಕರ ಬೇಡಿಕೆಗಳನ್ನು ಒಪ್ಪಲೇಬೇಕಾದ ಅನಿವಾರ್ಯತೆ ಉಂಟಾಯಿತು. ಕಾರ್ಮಿಕರ 13 ಬೇಡಿಕೆಗಳನ್ನು ಒಪ್ಪಿದರು. ಬಾಕಿ ಸಂಬಳ ಪಾವತಿ, ಶೇ 50 ರಷ್ಟು ಸಂಬಳದ ಏರಿಕೆ ಇತ್ಯಾದಿ ಸವಲತ್ತುಗಳ ನೀಡಿಕೆಯಿಂದ ಕೇವಲ 5 ದಿನಗಳಲ್ಲಿ ಮುಷ್ಕರ ಅತ್ಯಂತ ಯಶಸ್ವಿಯಾಗಿ ಮುಕ್ತಾಯವಾಯಿತು.

ಒಂದು ಬೃಹತ್ ಮೆರವಣಿಗೆಯ ಮೂಲಕ ಉ ಂದ ಕಾರ್ಮಿಕರು ವಿಜಯೋತ್ಸವವನ್ನು ಆಚರಿಸಿದರು, ಕೂಡಲೆ ಕೆಲಸಕ್ಕೆ ಹಾಜರಾದರು. ಮುಂದಿನ ದಿನಗಳಲ್ಲಿ ಗಣಿಯಲ್ಲಿ ಕೆಲಸದ ವಾತಾವರಣ ಬದಲಾಯಿತು. ಅಂದಿನ ಪಾಳೆಯಗಾರೀ ವಾತಾವರಣದಲ್ಲಿ ಮಾತು ಮಾತಿಗೆ ಗಣಿ ಅಧಿಕಾರಿಗಳ ಹೊಡೆತ ಬಡಿತಕ್ಕೆ ತುತ್ತಾಗುತ್ತಿದ್ದ ಕಾರ್ಮಿಕರು ಈಗ ಅದರಿಂದ ಮುಕ್ತರಾದರು. ಅವರಿಗೆ ನೀಡಲಾಗುತ್ತಿದ್ದ ಮುಗ್ಗಲು ಅಕ್ಕಿಯ, ಒಣಗಿದ ತರಕಾರಿಗಳ ಕಳಪೆ ಊಟ ತಪ್ಪಿತು. ಹೀಗೆ ಹೊರೆ ಹೊರುವ ಪ್ರಾಣಿಗಳಂತೆ ಪರಿಗಣಿತವಾಗಿದ್ದ ಕಾರ್ಮಿಕರು ತಾವೂ ಮನುಷ್ಯರು ಎಂಬ ಘನತೆಯಿಂದ ತಲೆಯೆತ್ತಿ ನಡೆಯತೊಡಗಿದರು.

ಈ ಹೋರಾಟ ಚೀನಾದ ಕಾರ್ಮಿಕ ಸಂಘರ್ಷದ ಚರಿತ್ರೆಯಲ್ಲಿ ದಾಖಲಾಯಿತು. ಮಾತ್ರವಲ್ಲ ಇದು ಚೀನಾದ ಕ್ರಾಂತಿಗೆ ನೀಡಿದ ಕೊಡುಗೆ ಕೂಡ ಅಪಾರ. ಸಾಮಾನ್ಯವಾಗಿ ದೀರ್ಘ ಕಾಲ ತಿಂಗಳುಗಟ್ಟಲೇ ನಡೆಯುವ ಹೋರಾಟಗಳು ಐತಿಹಾಸಿಕವೆಂದು ಪರಿಗಣಿಸಲ್ಪಡುತ್ತವೆ. ಆದರೆ ಕೇವಲ ಐದು ದಿನಗಳ ಈ ಮುಷ್ಕರಕ್ಕೆ ಇಷ್ಟೊಂದು ಖ್ಯಾತಿ ಬಂದಿದ್ದು ಏಕೆ? ವಿವರಗಳು ಮುಂದಿನ ಸಂಚಿಕೆಯಲ್ಲಿ .



ಶಿಕ್ಷಣ ಹಕ್ಕು ಕಾಯ್ದೆ ಜಾರಿಯಲ್ಲಿನ ಅಕ್ರಮಗಳ ವಿರುದ್ಧ ಆಟೋರಿಕ್ಷಾ ಚಾಲಕರ ಸಂಘದ ಪ್ರತಿಭಟನೆ, ಬೆಂಗಳೂರು

ಸಂಪಾದಕೀಯ ವಿಭಾಗಕ್ಕೆ ಸಂಬಂಧಿಸಿದ ಸೂಚನೆಗಳು

ಪತ್ರಿಕೆಗೆ ಕಳುಹಿಸಲಾಗುವ ಲೇಖನಗಳು, ವರದಿ, ಬರಹಗಳು, ಫೋಟೋ ಇತ್ಯಾದಿಗಳನ್ನು ಎಂದಿನಂತೆ ಮಹಾಲಕ್ಷ್ಮಿ ಬಡಾವಣೆಯ ಈ ಕೆಳಕಂಡ ವಿಳಾಸಕ್ಕೆ ಕಳುಹಿಸುವುದು.

'ಜನಶಕ್ತಿ ಕನ್ನಡ ವಾರಪತ್ರಿಕೆ'

ಇಎಂಎಸ್ ಭವನ, ನಂ: 37/ಎ, 8 ನೇ ಅಡ್ಡರಸ್ತೆ, ಪೋಸ್ಟ್ ಆಫೀಸ್ ಹತ್ತಿರ, ಮಹಾಲಕ್ಷ್ಮಿ ಬಡಾವಣೆ, ಬೆಂಗಳೂರು-560086. ಫೋ: 080-23491114

ಲೇಖನ-ವರದಿ ಮತ್ತು ಫೋಟೋಗಳನ್ನು ಮೈಲ್ ಮಾಡುವವರು ಪತ್ರಿಕೆಯ ಈ ಕೆಳಕಂಡ ಇ-ಮೈಲ್ ವಿಳಾಸಕ್ಕೆ ಕಳುಹಿಸುವುದು.

js_weekly@yahoo.com

ನಿಮ್ಮ ಲೇಖನ-ವರದಿಗಳು ನುಡಿ ತತ್ರಾಂಶ (nudi 01e)ದಲ್ಲಿರಲಿ.

-ಸಂಪಾದಕರು

ಸಂಪರ್ಕಕ್ಕೆ :

ಆರ್. ರಾಮಕೃಷ್ಣ : 9448505789

ನೀವು 'ಜನಶಕ್ತಿ ಕನ್ನಡ ವಾರಪತ್ರಿಕೆ'ಯ ಚಂದಾದಾರರೇ? ಏಜೆನ್ಸಿದಾರರೇ? ಹಾಗಿದ್ದರೆ ದಯವಿಟ್ಟು ಗಮನಿಸಿ

'ಜನಶಕ್ತಿ ಕನ್ನಡ ವಾರ ಪತ್ರಿಕೆ'ಯ ಆಡಳಿತ ಮತ್ತು ಪ್ರಸಾರ ನಿರ್ವಹಣೆಯ ಜವಾಬ್ದಾರಿ ಬದಲಾವಣೆಯಾಗಿರುವುದನ್ನು ಈಗಾಗಲೇ ಗಮನಿಸಿದ್ದೀರಿ ಎಂದು ಭಾವಿಸುತ್ತೇವೆ. ಹೊಸ ಚಂದಾಗಳ ನೀಡಿಕೆ, ವಿಳಾಸ ಬದಲಾವಣೆ, ಪತ್ರಿಕೆ ತಲುಪದಿರುವ ಬಗೆಗಿನ ದೂರುಗಳು, ಏಜೆನ್ಸಿದಾರರ ಪತ್ರಿಕೆಗಳ ಹೆಚ್ಚಳ, ಬಾಕಿ ವಿಚಾರಣೆ, ಹಣ ಪಾವತಿ, ದೂರುಗಳು ಹಾಗೂ ಜಾಹಿರಾತುಗಳಿಗೆ ಸಂಬಂಧಿಸಿದ ಎಲ್ಲ ವ್ಯವಹಾರ, ವಿಚಾರಣೆ ಇತ್ಯಾದಿಗಳನ್ನು ಇನ್ನು ಮುಂದೆ ಈ ಕೆಳಗಿನ ವಿಳಾಸದಲ್ಲೇ ಮಾಡುವುದು. ಕಚೇರಿಯ ನೇರ ಸಂಪರ್ಕವು ಕಛೇರಿ ಕಾರ್ಯ ನಿರ್ವಹಿಸುವ ನಿರ್ದಿಷ್ಟ ಅವಧಿಯಲ್ಲಿ ಮಾತ್ರ ಲಭ್ಯವಿರುತ್ತದೆ ಎಂಬುದನ್ನು ಗಮನಿಸ ತಕ್ಕದ್ದು.

ವಿಳಾಸ : 'ಜನಶಕ್ತಿ' ಆಡಳಿತ ಕಚೇರಿ,
C/o. ಕ್ರಿಯಾ ಪ್ರಕಾಶನ, ಸೂರಿ ಭವನ,
40/5, 2ನೇ 'ಬಿ' ಮೈನ್, 16ನೇ ಕ್ರಾಸ್,
ಸಂಪಂಗಿರಾಮನಗರ,
ಬೆಂಗಳೂರು-560027
email : janashakthi13.admn@gmail.com
Phone : 22234369
ಹೆಚ್.ಆರ್.ಸವಿತ ರಾಣಿ : 9483966467,
ಜಿ.ಚಂದ್ರಶೇಖರ್ : 9448578021
(ಕಾರ್ಯಾಲಯದ ಸಮಯ: ಬೆಳಿಗ್ಗೆ 10.00 ರಿಂದ ಸಂಜೆ 6.00 ಗಂಟೆವರೆಗೆ)

ಜನಶಕ್ತಿ
ಕನ್ನಡ ವಾರಪತ್ರಿಕೆ

"ಹೆಣ್ಣಿನಾ ಬಾಳು ಸುಣ್ಣಾಗಿ ಕುದಿಯಾಲಿ, ಎಲೆ ಜೀವ"

'ಹೆಣ್ಣೆಂಬ ಜನುಮ ಹೊರಬ್ಯಾಡ'

ಜಿ.ಎಸ್. ನಾಗರಾಜ್

ದೆಹಲಿಯ ಗ್ಯಾಂಗ್ ರೇಪ್‌ನ ಹಿಂದೆ, ಯಾವುದೇ ರೇಪ್, ಯಾವುದೇ ಮಹಿಳಾ ಪೀಡನೆಯ ಹಿಂದೆ ಮಹಿಳೆಯರ ಬಗೆಗಿನ ಕುತ್ಸಿತ ಭಾವದ ಪಾತ್ರವೇ ಪ್ರಧಾನ. ಮಹಿಳೆಯರು ಕೀಳು ಎಂಬ ಭಾವ ಸಮಾಜದ ಎಲ್ಲ ಸಮುದಾಯಗಳಲ್ಲಿ ವ್ಯಾಪಕವಾಗಿ ಹರಡಿದೆ. ಮಹಿಳೆಯರೂ ಸೇರಿದಂತೆ ಎಲ್ಲ ವಿಭಾಗಗಳಲ್ಲಿ ಆಳವಾಗಿ ಬೇರೂರಿದೆ. ಪುರುಷರಲ್ಲಿಯಂತೂ ಮಹಿಳೆ ಒಬ್ಬ ವ್ಯಕ್ತಿಯಲ್ಲ. ಒಂದು ಭೋಗ ವಸ್ತು, ಅವರ ಅಸ್ತಿ ಎಂಬುದು ಅವರ ತಲೆಯಲ್ಲಿ ತುಂಬಿ ಹೋಗಿದೆ. ಈ ಭಾವನೆ ಪ್ರಜ್ಞಾವಂತ ಮಹಿಳೆಯರನ್ನು ಹೊರತುಪಡಿಸಿ ಬಹುಮಟ್ಟಿಗೆ ಅನೇಕ ಮಹಿಳೆಯರಲ್ಲಿಯೂ ಇದೆ.

ಹೆಣ್ಣು, ಹೊನ್ನು, ಮಣ್ಣು


ಹೆಣ್ಣು, ಹೊನ್ನು, ಮಣ್ಣು ಎಂದು ಎಂಬ ನುಡಿಗಟ್ಟಿನ ಬಳಕೆ ಬಹಳ ಜನಜನಿತವಾಗಿದೆ. ಉತ್ತಮ ಸಾಹಿತ್ಯದಲ್ಲಿ ಮಾತ್ರವೇ ಅಲ್ಲ, ಹರಿಕಥೆ, ಪುರಾಣಗಳಲ್ಲಿ, ಯಕ್ಷಗಾನ, ಬಯಲಾಟಗಳಲ್ಲಿ, ದಿನ ನಿತ್ಯದ ಮಾತು, ಹರಟೆಗಳಲ್ಲಿ, ಗಾದೆ ಮಾತುಗಳಲ್ಲಿ ಈ ಸಮೀಕರಣವನ್ನು ಪದೇ ಪದೇ ಕೇಳುತ್ತೇವೆ, ಸಂಪತ್ತಿನ ವಸ್ತು ರೂಪಗಳ ಜೊತೆಗೆ ಮಾನವ ವ್ಯಕ್ತಿಯನ್ನೂ ಕೂಡಿಸುವ ಈ ಸಮೀಕರಣ ಸಾಮಾನ್ಯ ಜನರ ಮನಸ್ಸಿನಲ್ಲಿ ಎಷ್ಟು ಆಳವಾಗಿ ಬೇರೂರಿದೆಯೆಂದರೆ ಗಂಡಸರಾಗಲಿ, ಹೆಂಗಸರಾಗಲಿ ನಿದ್ದೆಗಣ್ಣಿನಲ್ಲಿ ಕೂಡ ಯಾರಾದರು ಈ ಮೂರರಲ್ಲಿ ಒಂದನ್ನ ಉದಾಹರಣೆಗೆ ತೆಗೆದುಕೊಂಡರೆ ಉಳಿದೆರಡನ್ನೂ ತಮ್ಮಿಂದ ತಾವೇ ಅದಕ್ಕೆ ಜೋಡಿಸಿ ಹೇಳಿಬಿಡುತ್ತಾರೆ. ಸಾವಿರಾರು ವರ್ಷಗಳಿಂದ ಹರಿದು ಬಂದ ಈ ಭಾವನೆಗಳನ್ನು ಇಂದು ಸಿನೆಮಾ ಟಿವಿ ಧಾರಾವಾಹಿಗಳು ಮುಂದುವರೆಸಿ ಜನ ಮಾನಸದಲ್ಲಿ ಈಗಾಗಲೇ ಇರುವ ಮಹಿಳಾ ವಿರೋಧಿ ಭಾವನೆಗಳನ್ನು ಮತ್ತಷ್ಟು ಗಟ್ಟಿಗೊಳಿಸುತ್ತಿವೆ.

ಅದೇನು ಅಷ್ಟೊಂದು ಮುಖ್ಯ ವಿಷಯವೇ ಎಂದು ಕೆಲವರಿಗೆ ಅನ್ನಿಸಬಹುದು. ಇಂತಹ ತಿಳುವಳಿಕೆ ಹಲವಾರು ರೀತಿಯಲ್ಲಿ ಪ್ರಭಾವ ಬೀರುತ್ತದೆ. ಹೆಣ್ಣು, ಹೊನ್ನು, ಮಣ್ಣು ಮಾಯೆ ಎಂಬುದು ಅದರ ಸಹಜ ಮುಂದುವರಿಕೆಯಂತೆ ಬಳಸಲಾಗುತ್ತದೆ. ಈ ಮಾಯೆಗೆ ಮನುಷ್ಯ ಸಿಲುಕುವುದು ಸಹಜ ಪ್ರವೃತ್ತಿ. ಇದೊಂದು ದೊಡ್ಡ ತಪ್ಪೇನೂ ಅಲ್ಲ. ಈ ಮಾಯೆಗೆ 'ಸಿಲುಕದಣ್ಣಗಳು' ಯಾರು ಹೀಗೆ ಪುರುಷರು ತಮ್ಮ ಕ್ರೌರ್ಯವನ್ನು ಸಮರ್ಥಿಸಿಕೊಳ್ಳಲು ಹಾದಿ ಮಾಡಿಕೊಡುತ್ತದೆ. ಭೂಮಿಯ ಅತಿಕ್ರಮಣ, ಹಣದ ಕಳ್ಳತನ ಅಥವಾ ಲಪಟಾವಣೆಗಳಂತೆಯೇ ಹೆಣ್ಣಿನ ಮಾನಭಂಗವೂ ಕೂಡ ಸಮಾಜದಲ್ಲಿ ನಡೆಯುವಂತಹವೇ. ನೀವು ನಿಮ್ಮ ಎಚ್ಚರದಲ್ಲಿ ಇರಬೇಕು ಅಷ್ಟೇ. ಆದ್ದರಿಂದ ಹಣವನ್ನು ತಿಜೋರಿಯಲ್ಲಿ, ಭೂಮಿಯನ್ನು ಬೇಲಿಕಟ್ಟಿ ಅಥವಾ ಕಾಂಪೌಂಡ್ ಹಾಕಿ ರಕ್ಷಿಸುವಂತೆ ಹೆಣ್ಣನ್ನೂ ಪೂರ್ಣ ಮೈ ಮುಚ್ಚಿ ಮನೆಯಲ್ಲಿ ಸುರಕ್ಷಿತವಾಗಿ ಇಟ್ಟುಕೊಳ್ಳಬೇಕು. ಅದು ಭಾರತೀಯ ಸಂಸ್ಕೃತಿ. ಹಾಗೆ ಮಾಡದಿದ್ದರೆ ಆ ಹೆಣ್ಣಿನದೇ ತಪ್ಪು ಅಥವಾ ಆ ಹೆಣ್ಣನ್ನು ಹಾಗೆ ಇರಿಸಿಕೊಳ್ಳದ ಗಂಡಸರ ಅಥವಾ ಅವರ ತಲೆಯಲ್ಲಿರುವ ವಿದೇಶೀ ಸಂಸ್ಕೃತಿಯ ತಪ್ಪು. ಇಂತಹ ವಾದಗಳು ಯಥೇಚ್ಚವಾಗಿ ದೆಹಲಿ ರೇಪ್ ವಿರುದ್ಧ ಎದ್ದ ಪ್ರತಿಭಟನೆಗೆ ಪ್ರತಿಕ್ರಿಯೆಯಾಗಿ ಕೇಳಿ ಬಂದಿದೆ.

ಗೋ ದಾನ, ಭೂ ದಾನ, ಕನ್ಯಾ ದಾನ

ಹೆಣ್ಣು ಒಂದು ವಸ್ತು, ಒಂದು ವಸ್ತುವಿಗೆ ತನ್ನದೇ ಆದ ಸ್ವಂತ ಮನಸ್ಸು, ಆಲೋಚನೆಗಳು ಇರುತ್ತವೆಂಯೇ ? ಬೇರೆ ವಸ್ತುಗಳಿಗೆ ಇರುವುದಿಲ್ಲ. ಹೆಣ್ಣೆಂಬ ವ್ಯಕ್ತಿಗೆ ಇದ್ದರೆ ! ಅದಕ್ಕೆ ಬೆಲೆ ಕೊಡಬೇಕಾಗಿಲ್ಲ. ಆದ್ದರಿಂದಲೇ ಗೋದಾನ, ಭೂದಾನ, ಸುವರ್ಣ ದಾನಗಳ ಜೊತೆಗೆ ಕನ್ಯಾದಾನವೂ ಸೇರಿಹೋಗಿರುವುದು. ಹಸು, ನಾಯಿಗಳನ್ನು, ಇಂತಹ ಅನೇಕ ಪಶು ಪಕ್ಷಿಗಳನ್ನು ಮಾರುವಾಗ, ಬೇರೆಯುವರಿಗೆ ಕೊಡುವಾಗ, ಬಲಿ ಕೊಡುವಾಗ ಅವುಗಳ ಅಭಿಪ್ರಾಯಕ್ಕೆ ಯಾರಾದರೂ ಮನ್ನಣೆ ಕೊಡುತ್ತಾರೆಂಯೇ ? ಕೋಳಿ ಕೇಳಿ ಮೆಣಸು ಅರೆಯುತ್ತಾರೆಯೇ ? ಹಾಗೆಯೇ ಹೆಣ್ಣನ್ನು ಕೇಳಿ ಮದುವೆ ಮಾಡಿಕೊಡಬೇಕೇ ? ಆ ಸ್ವತ್ತಿನ ಅಂದಿನ ಒಡೆಯ ತಂದೆ. ಅವನ ತೀರ್ಮಾನವೇ ಅಂತಿಮ. ನಮ್ಮ ದೇಶದಲ್ಲಿ ಬಹಳ ಕಾಲ ಪ್ರಬಲವಾಗಿದ್ದು ಇನ್ನೂ ಅನೇಕ ಪ್ರದೇಶಗಳಲ್ಲಿ ಜೀವಂತವಾಗಿರುವ ಕೂಡು ಕುಟುಂಬ ಪದ್ಧತಿಯಲ್ಲಿ ಮನೆಯ ಯಜಮಾನ : ಅವನು ಆ ಹುಡುಗಿಯ ತಾತನೋ, ಚಿಕ್ಕತಾತನೋ, ದೊಡ್ಡಪ್ಪನೋ ಆಗಿರಬಹುದು. ಅವನದೇ ಅಂತಿಮ ತೀರ್ಮಾನ. ಇಂತಹ ಅಮಾನವೀಯ ಚಿಂತನೆಯ ವಾತಾವರಣದಲ್ಲಿ ನಮ್ಮ ದೇಶದ ಮದುವೆಗಳು ನಡೆಯುತ್ತವೆ.

ಆದರೆ ಹೆಣ್ಣು ಒಬ್ಬಳು ವ್ಯಕ್ತಿ ತಾನೇ ? ಆದ್ದರಿಂದ ಆ ಹೆಣ್ಣೆಂಬ ವ್ಯಕ್ತಿ ತನ್ನದೇ ಮನಸ್ಸನ್ನು ತೆರೆದಿಡಬಹುದು, ಹಠ ಹಿಡಿಯುಬಹುದು, ಓಡಿಹೋಗುವುದು, ಆತ್ಮಹತ್ಯೆ ಮೊದಲಾದ ತನಗೆ ಗೊತ್ತಿರುವ ಪ್ರತಿಭಟನೆಯ ಮಾರ್ಗವನ್ನು ಹಿಡಿಯಬಹುದು. ಆದ್ದರಿಂದ ಅವಳು ತನ್ನದೇ ಆಲೋಚನೆಯನ್ನು ಬೆಳೆಸಿಕೊಳ್ಳುವ ಮೊದಲೇ ಆಕೆಯನ್ನು ಪರಭಾರೆ ಮಾಡಿಬಿಟ್ಟರೆ ಸಮಸ್ಯೆಯೇ ಇರುವುದಿಲ್ಲವಲ್ಲ !!. ಬಾಲ್ಯ ವಿವಾಹ ಎಂಬ ಕೊಳೆತ ಪದ್ಧತಿ ಹುಟ್ಟಿದ್ದು ಇಂತಹ ಸನ್ನಿವೇಶದಲ್ಲಿ. 21 ನೆಯ ಶತಮಾನದಲ್ಲಿಯೂ ಎಲ್ಲ ಕಾನೂನುಗಳ ನಿರ್ಬಂಧಗಳನ್ನು ಮೀರಿ ಕಾನೂನು ಪಾಲಕರ ಕಣ್ಣೆದುರಿಗೇ ಬಾಲ್ಯ ವಿವಾಹಗಳು ಯಥೇಚ್ಚವಾಗಿ ನಡೆಯುತ್ತಲೇ ಇವೆ.



ಕನ್ಯಾದಾನವೆಂಬ ನಮ್ಮ ವಿವಾಹ ಪದ್ಧತಿಯೇ ಹೆಣ್ಣು ಎಂಬ ವಸ್ತುವನ್ನು ತಮ್ಮ ಆಸ್ತಿಯನ್ನು ಅದರ ಮೇಲಿನ ಎಲ್ಲಾ ಹಕ್ಕನ್ನೂ ತಂದೆಯೆಂಬ ವ್ಯಕ್ತಿ ಗಂಡನೆಂಬ ವ್ಯಕ್ತಿಗೆ ವರ್ಗಾಯಿಸುವ ಉದ್ದೇಶದಿಂದ ರೂಪಿತವಾದದ್ದು. ಇದೇ ಕನ್ಯಾದಾನದ ಅರ್ಥವೆಂದು ಎಲ್ಲಾ ಶಾಸ್ತ್ರಗಳೂ ಸಾರಿ ಹೇಳಿವೆ. ಕೆಳಗೆ ನೀಡಲಾಗಿರುವ ಮನು ಸ್ಮೃತಿಯ ಶ್ಲೋಕ ಸ್ಪಷ್ಟವಾಗಿ ಸಾರುತ್ತದೆ. " ವಿವಾಹೇಷು ಪ್ರದಾನಂ ಸ್ವಾಮ್ಯ ಕಾರಣಂ " ವಿವಾಹದಲ್ಲಿ ದಾನ ಮಾಡುವುದೇ ಹೆಣ್ಣು ದಾನ ತೆಗೆದುಕೊಂಡವರ ಸ್ವತ್ತು ಎಂಬುದಕ್ಕೆ ಬಲವಾದ ಆಧಾರ" ಎಂದು. ಇನ್ನು ಮುಂದೆ ಈ ಹಣ್ಣು ನಿಮ್ಮ ಆಸ್ತಿ ಹೇಗೆ ಬೇಕಾದರೂ ಅನುಭವಿಸಿ, ಎಷ್ಟು ಬೇಕಾದರೂ ದುಡಿಸಿಕೊಳ್ಳಿ, ಬಗ್ಗದಿದ್ದರೆ ಹೊಡೆಯಿರಿ, ಬಡಿಯಿರಿ. ಇದನ್ನೇ ಜನ ಸಾಮಾನ್ಯರು ತಮ್ಮ ನಿತ್ಯದ ಮಾತುಗಳಲ್ಲಿ ಆಡುತ್ತಿರುತ್ತಾರೆ.

ಹೆಣ್ಣು : ವ್ಯಕ್ತಿಯೋ ಭೋಗವಸ್ತುವೋ

ಹೆಣ್ಣು ಒಂದು ಭೋಗವಸ್ತುವಷ್ಟೇ ಎಂಬ ಅಮಾನವೀಯ ಭಾವನೆಯನ್ನು ಪಾಳೆಯಗಾರೀ ಸಮಾಜದಲ್ಲಿ ಹುಟ್ಟಿದ ಪ್ರಾಚೀನ ಕಾವ್ಯ ನಾಟಕಗಳು ಬಿತ್ತಿರುವ ಹಲವು ರೀತಿಗಳಲ್ಲಿ ಮತ್ತೊಂದು ಮುಖ್ಯವಾದ ವಿಧಾನವೆಂದರೆ ಹೆಣ್ಣಿನ ವರ್ಣನೆ.(ಹಾಗೆಂದ ಮಾತ್ರಕ್ಕೆ ಪ್ರಾಚೀನ ಸಾಹಿತ್ಯವನ್ನೇ ಒಟ್ಟಾರೆಯಾಗಿ ತಳ್ಳಿ ಹಾಕುತ್ತಿದ್ದೇನೆಂದು ಯಾರೂ ಭಾವಿಸಬಾರದು.) ಗುರು ನಿತಂಬಿನಿ, ಪೀನ ಪಯೋಧರೆ, ಬಿಂಬಾಧರೆ, ಮೀನ ಲೋಚನೆ, ಕಮಲಮುಖಿ- ಚಂದ್ರ ಮುಖಿ ಇಂತಹ ನೂರಾರು ವರ್ಣನೆಗಳು ಕವಿಗಳ ಹೆಗ್ಗಳಿಕೆಗಳಾಗಿದ್ದುವು. ಹೆಣ್ಣಿನ ಮನಸ್ಸು, ಅಭಿಪ್ರಾಯ, ವ್ಯಕ್ತಿತ್ವಗಳಿಗೆ ಬಹಳ ಅಪರೂಪವಾಗಿ ಮಾತ್ರವೇ ಗಮನವೀಯುತ್ತಿದ್ದ ಈ ಸಾಹಿತ್ಯ ಹೆಣ್ಣೊಂದು ಭೋಗವಸ್ತು, ಇಂತಹ ಹೆಣ್ಣನ್ನು ' ಹೇಗಾದರೂ' ಮಾಡಿ ಪಡೆಯಬೇಕು, ಇಲ್ಲದಿದ್ದರೆ ಅನುಭವಿಸಬೇಕು ಎಂಬ ಕೀಳು ಕಾಮನೆಯನ್ನು ಮೂಡಿಸದೇ ಬೇರೇನು ಮಾಡಲು ಸಾಧ್ಯ. ಇಂದಿನ ಸಿನೆಮಾ ರಂಗ ಈ ವರ್ಣನೆಯನ್ನು ಡಗಾರ್, ಫಿಗರ್ ಎಂದು ಇನ್ನೂ ಕೀಳು ಹಂತಕ್ಕೊಯ್ದು ಜನ ಮಾನಸವನ್ನು ಹದಗೆಡಿಸುತ್ತಿರುವುದು ಬಹು ಚರ್ಚಿತ ವಿಷಯ.

ಪುಟ 12 ಕ್ಕೆ

ಎಲೆ ಜೀವ ಹೆಣ್ಣೆಂಬ ಜನುಮ ....

ಪುಟ 11 ರಿಂದ

ಪಾಳೆಯಗಾರೀ ದಬ್ಬಾಳಿಕೆ ಹಾಗೂ ಮಹಿಳೆಯರಿಗೆ ಆಸ್ತಿ, ದುಡಿಮೆಯ ಫಲ, ಶಿಕ್ಷಣದ, ವಂಚನೆ.

ಮಹಿಳೆಯರ ಬಗ್ಗೆ ಇಂತಹ ಅಮಾನುಷ ದೃಷ್ಟಿ ಕೋನ ಸಮಾಜದಲ್ಲಿ ಆಳವಾಗಿ ನೆಲೆಗೊಳ್ಳಲು ಮೂಲ ಕಾರಣವೇನು ಎಂಬುದನ್ನು ತಿಳಿದುಕೊಂಡಲ್ಲದೇ ಈ ಭೀಕರ ಸಮಸ್ಯೆಯನ್ನು ಪರಿಹರಿಸಲಾಗುವುದಿಲ್ಲ. ಭಾರತದ ಎಲ್ಲಾ ಶಾಸ್ತ್ರ, ಪುರಾಣಗಳೂ ಇಂತಹ ಕ್ರೌರ್ಯ ತುಂಬಿದ ವಿಚಾರಗಳನ್ನು ಬೆಳೆಸಲು ಒಂದು ಮುಖ್ಯ ಕಾರಣ ಆಸ್ತಿ. ನನ್ನ ಆಸ್ತಿಯನ್ನು ಹೆಚ್ಚು ಹೆಚ್ಚು ಮಾಡಿಕೊಳ್ಳಬೇಕು. ಇದು ಅಂದಿನ ರಾಜ, ಮಹಾರಾಜ, ಚಕ್ರವರ್ತಿಗಳ, ಸುಲ್ತಾನ ನವಾಬ, ಬಾದಶಾಹರ ಆಲೋಚನೆ. ಅವರ ಪ್ರಭುತ್ವದ ಆಧಾರ ಸ್ತಂಭಗಳಾದ ಸಾಮಂತರ, ಪಾಳೆಯಗಾರರ ಇತರ ಶ್ರೀಮಂತ ಆಸ್ತಿವಂತರ ಯೋಚನೆ. ಅದನ್ನು ಸಾಧಿಸುವುದಕ್ಕೆ ಒಂದು ಪ್ರಮುಖ ಸಾಧನ ಇನ್ನೊಬ್ಬರ ಆಸ್ತಿಯನ್ನು, ಇನ್ನೊಬ್ಬರ ದುಡಿಮೆಯನ್ನು ತನ್ನದಾಗಿ ಮಾಡಿಕೊಳ್ಳುವುದು.

ಇದಕ್ಕಾಗಿಯೇ ನಮ್ಮ ಋಗ್ವೇದ ಕಾಲದ ಕೊನೆಯಲ್ಲಿ ಇತರ ವೇದಗಳಲ್ಲಿ ಮತ್ತು ನಂತರದ ಎಲ್ಲ ಶಾಸ್ತ್ರ, ಪುರಾಣಗಳಲ್ಲಿ ಏಕ ಕಾಲಕ್ಕೆ ವರ್ಣಾಶ್ರಮ-ಜಾತಿವ್ಯವಸ್ಥೆಯನ್ನೂ, ಮಹಿಳೆ ಕೀಳು ಎಂಬುದನ್ನೂ ಹುಟ್ಟು ಹಾಕಿರುವುದು. ಇದು ಸ್ವತಃ ದೇವರ ಸೃಷ್ಠಿ ಎಂದು ಮತ್ತೆ ಮತ್ತೆ ಪ್ರತಿಪಾದಿಸಿರುವುದು. ಆ ಮೂಲಕ ಒಟ್ಟಿಗೇ ಶೂದ್ರ, ದಲಿತ ಜಾತಿಗಳಿಗೆ ಹಾಗೂ ಮಹಿಳೆಯರಿಗೆ ಆಸ್ತಿಯನ್ನು, ಅಂದಿನ ಸಂಪತ್ತಿನ ಮುಖ್ಯ ಆಧಾರವಾಗಿದ್ದ ಇಂದಿಗೂ ಒಂದು ಮುಖ್ಯ ಆಧಾರವಾಗಿರುವ ಭೂಮಿಯ ಒಡೆತನವನ್ನು ವಂಚಿಸಿರುವುದು.

ಇವರಿಗೆ ವಿದ್ಯಾಭ್ಯಾಸ ನೀಡಿದರೆ ಎಲ್ಲಿ ನಾವು ಅವರಿಗೆ ಮಾಡಿರುವ ವಂಚನೆ ಬಗ್ಗೆ ತಿಳಿದುಕೊಂಡು ತಮ್ಮ ಆಸ್ತಿಯನ್ನು ಕಿತ್ತುಕೊಂಡು ಬಿಡುತ್ತಾರೋ ಎಂಬ ಭಯದಿಂದ ಮಹಿಳೆಯರಿಗೂ ಕೆಳಜಾತಿಗಳಿಗೂ ಶಿಕ್ಷಣ ವಂಚನೆ ಮಾಡಿರುವುದು. ಹಾಗೂ ಅವರು ದಂಗೆ ಏಳದಂತೆ ಒಂದು ಕಡೆ ಅವರಿಗೆ ಶಾಸ್ತ್ರಗಳ, ಕಟ್ಟು ಕಟ್ಟಳೆಗಳ ಸಂಕೋಲೆ. ಮತ್ತೊಂದು ಕಡೆ ಕೇವಲ ಕ್ಷತ್ರಿಯರು ಮಾತ್ರ ಆಳುವ, ಶಸ್ತ್ರಾಭ್ಯಾಸ ಮಾಡುವ ಹಕ್ಕು. ಮತ್ತೆ ಕೆಳ ಜಾತಿಗಳಿಗೆ ಹಾಗೂ ಮಹಿಳೆಯರಿಗೆ ಶಸ್ತ್ರ ವಂಚನೆ.

ಹೀಗೆ ಆಸ್ತಿ ವಂಚನೆ, ಅದಕ್ಕಾಗಿ ಶಿಕ್ಷಣ ವಂಚನೆ ಮತ್ತೆ ಶಸ್ತ್ರ ವಂಚನೆ. ಈ ಮೂರೂ ವಂಚನೆಗೊಳಗಾದ ಕೆಳ ಜಾತಿಗಳು ದುರ್ಬಲರಾದರೆ, ಮಹಿಳೆಯರು ಅಬಲೆಯರಾದರು. ಆಗ ಅವರು ಪೂರ್ಣವಾಗಿ ತಮ್ಮ ಹೊಟ್ಟೆ ಹೊರೆಯುವುದಕ್ಕಾಗಿ ಮೇಲ್ಜಾತಿಯ ಮೇಲ್ವರ್ಗಗಳ ಸೇವಕತನ ಅನಿವಾರ್ಯವಾಗುವಂತೆ ಮಾಡಲಾಯಿತು. ಹೀಗೆ ಕೇವಲ ಜೀವ ಉಳಿಸಿಕೊಳ್ಳಲು ಎಷ್ಟು ಕನಿಷ್ಠ ಉಣಿಸು ಮತ್ತಿತರ ಅವಶ್ಯಕತೆಗಳನ್ನು ಅವರ ಮುಂದೆ ಬಿಸಾಡಿ ಅವರನ್ನು ಗರಿಷ್ಠ ದುಡಿಮೆಗೆ ಹಚ್ಚಲಾಯಿತು. ಅವರ ದುಡಿಮೆಯನ್ನು ಸೆಳೆದು ಕೊಳ್ಳಲು ಬೇಕಾದಂತೆ ಭೂ ಒಡೆತನದ, ಗೇಣಿ, ಗುತ್ತಿಗೆ, ಪಾಲು ಇತ್ಯಾದಿ ಪದ್ಧತಿಗಳನ್ನು ರೂಪಿಸಲಾಯಿತು. ಭೂ ಒಡೆಯನ, ಮನೆಯೊಡೆಯನ ದಾಸರ, ಅವನ ಹೆಂಡತಿ ಮೊದಲಾದ ಮಹಿಳೆಯರ ಯಾವುದೇ ಆಸ್ತಿ ಒಡೆಯನಿಗೇ ಸೇರಿದ್ದು ಎಂಬ ಮನು ಸ್ಮೃತಿಯ ಕಟ್ಟಳೆ ಈ ಕಾರಣಕ್ಕಾಗಿಯೇ ರೂಪಿಸಲ್ಪಟ್ಟಿದೆ. ಹೀಗೆ ಮೇಲ್ಜಾತಿಯ ಮೇಲ್ವರ್ಗಗಳು ಹೆಚ್ಚು ಹೆಚ್ಚು ಆಸ್ತಿಯನ್ನು, ಸಂಪತ್ತನ್ನು ಪಡೆಯಲು ಕೆಳ ಜಾತಿ, ಕೆಳ ವರ್ಗಗಳ ಹಾಗೂ ಎಲ್ಲ ಮಹಿಳೆಯರ ದುಡಿಮೆಯನ್ನೂ ಶೋಷಣೆಗೆ ಗುರಿಯಾಗಿಸಿದೆ. ಇದು ಎಲ್ಲ ಮಹಿಳೆಯರಿಗೂ ಕೆಳ ಜಾತಿಗಳ ಪುರುಷರಿಗೂ ಮನವರಿಕೆಯಾಗಬೇಕಿದೆ. ಆಗ ಮಾತ್ರವೇ ಕೆಳ ಜಾತಿ, ಕೆಳವರ್ಗಗಳ ಎಲ್ಲ ಜನ ಹಾಗೂ ಮೇಲ್ಜಾತಿ ಮೇಲ್ವರ್ಗಗಳ ಮಹಿಳೆಯರೂ ಒಂದಾಗಿ ಈ ವ್ಯವಸ್ಥೆಯನ್ನು ಬದಲಾಯಿಸುವ ಮಹಾ ಕರ್ತವ್ಯದಲ್ಲಿ ಅವರು ತೊಡಗಲು, ಯಶಸ್ವಿಯಾಗಲು ಸಾಧ್ಯ.

ಇನ್ನು ಮಹಿಳೆಯರಿಗೇ ವಿಶಿಷ್ಟವಾದ ಶೋಷಣೆ ಅವರ ಪರಿಸ್ಥಿತಿಯನ್ನು ಮತ್ತಷ್ಟು ಗಂಭೀರವಾಗಿಸುತ್ತದೆ. ನನ್ನ ಆಸ್ತಿ ಮುಂದೆ ಯಾರಿಗೆ ಹೋಗಬೇಕು ಎಂಬ ಮೂಲಭೂತ ಪ್ರಶ್ನೆ. ಆಸ್ತಿಯನ್ನು, ಹೆಚ್ಚು ಹೆಚ್ಚು ಆಸ್ತಿಯನ್ನು ಸಂಪಾದಿಸುವ ಗೀಳಿಗೆ ಬಿದ್ದ ಮೇಲೆ ನನ್ನ ನಂತರ ಆ ಆಸ್ತಿಗೆ ಉತ್ತರಾಧಿಕಾರಿ ಯಾರು ಎಂಬುದು ಬಹಳ ಮುಖ್ಯ ವಿಷಯವಾಗಲೇ ಬೇಕು. ನಾನು ಸಂಪಾದಿಸಿದ ಆಸ್ತಿ ನನ್ನ ಮಕ್ಕಳಿಗೆ ಹೋಗಬೇಕು. ಅದನ್ನು ಖಾತ್ರಿಗೊಳಿಸಿಕೊಳ್ಳುವುದು ಹೇಗೆ? ನನ್ನ ಹೆಂಡತಿಗೆ ಯಾವ ಕಾರಣಕ್ಕೂ ಬೇರೇ ಯಾರ ಜೊತೆಗೂ ಸಂಬಂಧ ಬರದಂತೆ ಮಾಡುವುದರ ಮೂಲಕ ಮಾತ್ರ ಅವಳಿಗೆ ಹುಟ್ಟಿದ ಮಕ್ಕಳು ತನ್ನ ಮಕ್ಕಳು ಎಂದು ಖಾತ್ರಿಯಾಗುವುದು ಸಾಧ್ಯ. ಇದಕ್ಕಾಗಿಯೇ ಮಹಿಳೆಯರ ಮೇಲೆ ಮನುಸ್ಮೃತಿ ಹೇರಿದ ನಿರ್ಬಂಧಗಳ, ಇನ್ನೂ ಜಾರಿಯಲ್ಲಿರುವ ಅಮಾನವೀಯ ಆಚರಣೆ, ವಿಚಾರಗಳ ಪರಮ ಕಟುತ್ವ ! ಪತಿವ್ರತೆ, ಶೀಲ, ಕನ್ಯತ್ವ, ಮುತ್ತೈದೆ, ತಾಳಿ ಭಾಗ್ಯ; 'ನ ಸ್ತ್ರೀ ಸ್ವಾತಂತ್ರ್ಯಮರ್ಹತಿ' ಎಂಬ ಕಟ್ಟಳೆಗಳು. ಈ ಯಾವ ನಿಯಮಗಳೂ ಪುರುಷರಿಗೆ ಅನ್ವಯವಾಗದಿರುವುದರ ಹಿನ್ನೆಲೆಯೂ ಇದೇ.

ಪ್ರಜಾಪ್ರಭುತ್ವದ ಹೆಸರಿನಲ್ಲಿ ಬಂಡವಾಳಶಾಹಿಯ ಪ್ರಾಬಲ್ಯ

ರಾಜಪ್ರಭುತ್ವ ಹೋಗಿ ಸ್ವಾತಂತ್ರ್ಯ ಚಳುವಳಿಯ ಫಲವಾಗಿ ಪ್ರಜಾಪ್ರಭುತ್ವ ಸ್ಥಾಪನೆಯಾದ 66 ವರ್ಷಗಳಾದ ನಂತರವೂ, ನಮ್ಮ ದೇಶದ ಸಂವಿಧಾನ ಲಿಂಗ ಬೇಧ, ಜಾತಿ ಬೇಧಗಳಿಲ್ಲದೇ ಎಲ್ಲರೂ ಸಮಾನರು ಎಂದು ಸಾರಿದ ಮೇಲೂ ಮಹಿಳೆಯರು ಕೀಳು ಎಂಬ ಭಾವನೆ ಉಳಿದಿದೆ ಮಾತ್ರವಲ್ಲ ಬೆಳೆಸಲು ತೀವ್ರ ಪ್ರಯತ್ನಗಳು ನಡೆಯುತ್ತಿವೆ. ಕಾರಣ ಇನ್ನೊಬ್ಬರ ದುಡಿಮೆಯನ್ನು ಕಿತ್ತು ಕೊಂಡು ತಮ್ಮ ಆಸ್ತಿಯನ್ನು ವೃದ್ಧಿಸಿಕೊಳ್ಳ ಬೇಕೆನ್ನುವ ದುರಾಲೋಚನೆ ಇಂದು ಪ್ರಜಾಪ್ರಭುತ್ವದ ಹೆಸರಿನಲ್ಲಿ ಪ್ರಬಲವಾಗಿರುವ ಬಂಡವಾಳಶಾಹಿ ವ್ಯವಸ್ಥೆಯಲ್ಲಿಯೂ ಸರ್ವ ವ್ಯಾಪಿಯಾಗಿರುವುದು. ಮಹಿಳೆಯರು ಮನೆಯಲ್ಲಿಯೇ ಆಸ್ತಿ, ಸಂಪತ್ತುಗಳ ಅಧಿಕಾರವಿಲ್ಲದೇ ಅವರ ಶ್ರಮಕ್ಕೆ ತಕ್ಕ ಪ್ರತಿಫಲವಿಲ್ಲದೇ ದುಡಿಯಬೇಕು, ಜೊತೆಗೆ ದುಡಿಮೆಗಾರರ ಸಂಬಳ ಸಾರಿಗೆ, ಕೂಲಿಯನ್ನು ತಗ್ಗಿಸಲು ಮಹಿಳೆಯರನ್ನು ದುಡಿಮೆಗೆ ಇಳಿಸಲು ಅವರು ಲಭ್ಯವಾಗಬೇಕು. ಅವರ ದುಡಿಮೆ ಕೀಳು ಎಂಬ ಹೆಸರಿನಲ್ಲಿ ಅವರಿಗೆ ಕಡಿಮೆ ಕೂಲಿ ಕೊಡುವುದರ ಮೂಲಕ ಬಂಡವಾಳಗಾರರು ಲಾಭ ಕೊಳ್ಳೆ ಹೊಡೆಯಲು ಅನುಕೂಲವಾಗಬೇಕು. ಇದೇ ಬಂಡವಾಳಶಾಹಿ ವ್ಯವಸ್ಥೆಯ ಲಾಭಕೋರತನದ ಮೌಲ್ಯಗಳಾಗಿವೆ.

ಮಹಿಳೆಯರ ಬಗ್ಗೆ ಸಾವಿರಾರು ವರ್ಷಗಳಿಂದ ಹರಿದು ಬಂದ ಪಾಳೆಯಗಾರೀ ಮೌಲ್ಯಗಳು ನಮ್ಮ ಸಮಾಜವನ್ನು ಇನ್ನೂ ಗಾಢವಾಗಿ ಪ್ರಭಾವಿಸಿರುವಾಗಲೇ ಲಾಭಕೋರ ಮಾಧ್ಯಮಗಳು, ಮನರಂಜನಾ ಉದ್ದಿಮೆಗಳು ಸ್ತ್ರೀಯರನ್ನು ಮತ್ತಷ್ಟು ಕೀಳಾಗಿ, ಭೋಗವಸ್ತುವಾಗಿ ಚಿತ್ರಿಸುತ್ತಿವೆ. ನಮ್ಮ ಸಿನೆಮಾ ಪ್ರಪಂಚ, ಟಿವಿ ಕಾರ್ಯಕ್ರಮಗಳು ಇಂದು ಶಾಸ್ತ್ರ ಪುರಾಣಗಳ ಪಾತ್ರವಹಿಸಿ ಕೈಗೊಂಡಿರುವ ಈ 'ಪವಿತ್ರ ಕೈಂಕರ್ಯ'ವನ್ನು ವಿವರಿಸ ಹೊರಟರೆ ಅದೇ ಒಂದು ದೊಡ್ಡ ಪುರಾಣವಾಗುವಷ್ಟಿದೆ. ಈ ಸಿನೆಮಾ, ಟಿವಿಗಳಲ್ಲಿ ತೊಡಗಿರುವ ಬಂಡವಾಳಶಾಹಿಗಳು ಇಡೀ ಬಂಡವಾಳಶಾಹಿಯ ಲಾಭಕೋರತನಕ್ಕೆ ನೆರವಾಗಲು ಮಹಿಳೆಯರ ಮೇಲಿನ ದೌರ್ಜನ್ಯಗಳನ್ನು, ಬಲಾತ್ಕಾರಗಳನ್ನು ಎಸಗುವ ಕ್ರೂರ ಮನಸ್ಸುಗಳನ್ನು ಸೃಷ್ಠಿಸುತ್ತಿದ್ದಾರೆ. ಅದರಲ್ಲಿಯೂ ಇಂದು ಅಂತರ್ಜಾಲದಲ್ಲಿ ಸುಲಭ ಲಭ್ಯವಿರುವ ಅಶ್ಲೀಲ ಸಾಹಿತ್ಯದ ಪರಿಣಾಮವನ್ನು ಅಧ್ಯಯನಕ್ಕೊಳಪಡಿಸಬೇಕು. ಇವೆರಡನ್ನೂ ಒಟ್ಟಾಗಿಯೇ ತೊಡೆದು ಹಾಕಲು ಬೃಹತ್ ಪ್ರಮಾಣದ ಸಾಮೂಹಿಕ ಪ್ರಯತ್ನ ಕೈಗೊಳ್ಳಬೇಕು. ನಮ್ಮ ದೇಶದಲ್ಲಿ ಮಹಿಳಾ ಸಮಾನತೆಯ ಮೌಲ್ಯಗಳನ್ನು ಪ್ರಧಾನ ನೆಲೆಗೆ ತರುವುದೊಂದೇ ಮೂಲಭೂತ ಪರಿಹಾರ. ಪ್ರತಿ ಹಳ್ಳಿ ಹಳ್ಳಿಗಳಲ್ಲಿಯೂ, ಪಟ್ಟಣ, ನಗರಗಳ ಪ್ರತಿ ಬೀದಿ, ನೆರೆ ಹೊರೆ ಪ್ರದೇಶಗಳಲ್ಲಿಯೂ, ಮಹಿಳೆಯರು ದುಡಿಯುವ ಪ್ರತಿ ಕೈಗಾರಿಕೆ, ಕಛೇರಿಗಳಲ್ಲಿಯೂ, ಪ್ರತಿ ಕಾಲೇಜು ಮತ್ತಿತರ ಕಡೆಗಳಲ್ಲಿಯೂ ಮಹಿಳೆಯರ, ದುಡಿಯುವ ಮಹಿಳೆಯರ ಸಂಘಟನೆಗಳು, ಚಳುವಳಿಗಳು ಬೆಳೆದು ಬರಬೇಕು. ಮಹಿಳಾ ಸಮಾನತೆಯನ್ನು ಪ್ರತಿಪಾದಿಸುವ ಪುರುಷರು ಇದಕ್ಕೆ ಒತ್ತಾಸೆಯಾಗಿ ನಿಲ್ಲಬೇಕು. ಇದೇ ನಮ್ಮೆಲ್ಲರ ಮುಂದಿರುವ ದಾರಿ. ಕಠಿಣ ಕಾನೂನು, ಅದರ ಕಟ್ಟು ನಿಟ್ಟಿನ ಜಾರಿಗಾಗಿ ನಾವೆಲ್ಲರೂ ನಡೆಸುವ ಚಳುವಳಿ ಸಮಾನತೆಗಾಗಿ ನಡೆಸುವ ಹೋರಾಟದ ತಕ್ಷಣದ ಆಯಾಮ ಮಾತ್ರ ಎಂಬ ಸ್ಪಷ್ಟತೆ ಬೇಕು. ನಾವೆಲ್ಲರೂ ಒಟ್ಟಾಗಿ ಬೃಹತ್ತಾದ ಮಹಿಳಾ ವಿಮೋಚನೆಯ ಚಳುವಳಿಯನ್ನು ಕಟ್ಟೋಣ. ಎಲ್ಲ ದೌರ್ಜನ್ಯಗಳ ವಿರುದ್ಧ ಸೆಟೆದು ನಿಲ್ಲೋಣ.

ಪುಟ 9 ರಿಂದ


ಪ್ರಸಕ್ತ ರಾಜಕೀಯ ಬೆಳವಣಿಗೆಗಳ ಹಿನ್ನೆಲೆಯಲ್ಲಿ ಮುಂಬರುವ ವಿಧಾನಸಭಾ ಚುನಾವಣೆಯಲ್ಲಿ ಎಡಪಕ್ಷಗಳ ಸ್ಪರ್ಧೆ ಮಹತ್ವದ್ದಾಗಲಿದೆ. ಜನರ ನಡುವೆ ಕಾಂಗ್ರೆಸ್ ಹಾಗೂ ಬಿಜೆಪಿಗೆ ದೋರಣಾತ್ಮಕ ಪರ್ಯಾಯವನ್ನು ಬಿಂಬಿಸಲು ಎಡಪಕ್ಷಗಳು ಗಣನೀಯ ಕ್ಷೇತ್ರಗಳಲ್ಲಿ ಸ್ಪರ್ಧೆಮಾಡುವುದು, ಪರಿಣಾಮಕಾರಿ ಪ್ರಚಾರ ನಡೆಸುವುದು ಮತ್ತು ಕೆಲವು ಸ್ಥಾನಗಳಲ್ಲಿ ಗೆಲ್ಲುವುದು ಸಾಧ್ಯವಾಗಬೇಕಾಗಿದೆ.

ಎಡಪಕ್ಷಗಳು ಸ್ಪರ್ಧಿಸುವ ಕ್ಷೇತ್ರಗಳಲ್ಲಿ ತಕ್ಷಣದಿಂದ ಎಲ್ಲಾ ಚಟುವಟಿಕೆಗಳನ್ನು ಚುನಾವಣಾ ಕೆಲಸಕ್ಕೆ ಪೂರಕವಾಗುವಂತೆ ರೂಪಿಸಿಕೊಳ್ಳಬೇಕು. ಜನರನ್ನು ತೀವ್ರವಾಗಿ ಬಾಧಿಸುತ್ತಿರುವ ಬರಗಾಲ, ಕುಡಿಯುವ ನೀರಿನ ಪ್ರಶ್ನೆ, ರೇಷನ್ ಸಮಸ್ಯೆ, ಮನೆ ನಿವೇಶನ, ಬಗರ್ ಹುಕುಂ ಸಾಗುವಳಿ ಸಕ್ರಮ, ಉದ್ಯೋಗ ಖಾತ್ರಿ ಯೋಜನೆ ಅಡಿಯಲ್ಲಿ ಕೆಲಸ ಕೊಡಿಸುವುದು ಮುಂತಾದ ಪ್ರಶ್ನೆಗಳಿಗಾಗಿ ವಿಶಾಲ ಜನಸಮೂಹಗಳನ್ನು ಒಳಗೊಳ್ಳುವಂತಹ ಚಳುವಳಿಗಳನ್ನು ಹಮ್ಮಿಕೊಳ್ಳುವುದು ಆಗಬೇಕು.

ಚುನಾವಣಾ ಕ್ಷೇತ್ರಗಳಲ್ಲಿ ಕೂಡಲೇ, ರಾಜಕೀಯ ಸಮಾವೇಶಗಳನ್ನು ಏರ್ಪಡಿಸಿ ಕಾಂಗ್ರೆಸ್ ಅನ್ನು ಮತ್ತು ಬಿಜೆಪಿಯನ್ನು ಹಾಗೂ ಇತರ ಪಕ್ಷಗಳನ್ನು ಏಕೆ ತಿರಸ್ಕರಿಸಬೇಕು ಮತ್ತು ಎಡಪಕ್ಷಗಳನ್ನು ಏಕೆ ಬೆಂಬಲಿಸಬೇಕು ಎಂಬುದನ್ನು ಮತದಾರರಿಗೆ ಮನವರಿಕೆ ಮಾಡಬೇಕು.

ಜನಶಕ್ತಿ
ಕನ್ನಡ ವಾರಪತ್ರಿಕೆ

ಭಾರತದಲ್ಲಿ 'ಸೂಪರ್ ಶ್ರೀಮಂತರು' ಕೇವಲ 42,800 ?




ವೇದರಾಜ ಎನ್.ಕೆ.

ಬಜೆಟಿನ ಉದ್ದೇಶ ಮತ್ತು ಒಬ್ಬ ಹಣಕಾಸು ಮಂತ್ರಿಯ ಕೆಲಸವೆಂದರೆ ಆರ್ಥಿಕ ಅವಕಾಶವನ್ನು ನಿರ್ಮಿಸುವುದು ಮತ್ತು ಸಾಮಾಜಿಕ-ಆರ್ಥಿಕ ಗುರಿಗಳನ್ನು ಸಾಧಿಸಲು ಸಂಪನ್ಮೂಲಗಳನ್ನು ಕಂಡು ಹಿಡಿಯುವುದು ಎಂದಿದ್ದರು ಯುಪಿಎ-2 ಹಣಕಾಸು ಮಂತ್ರಿಗಳು ತಮ್ಮ ಇತ್ತೀಚಿನ ಬಜೆಟ್ ಭಾಷಣದಲ್ಲಿ. ಆದರೆ ಸಂಪನ್ಮೂಲ ಸಂಗ್ರಹಿಸಲು ಅವರು ನಿಜವಾಗಿಯೂ ಪ್ರಯತ್ನಿಸಿದ್ದಾರೆಯೇ? ಭಾರತದಲ್ಲಿ ತೆರಿಗೆ-ಜಿಡಿಪಿ ಅನುಪಾತ ಸುಮಾರು 10ಶೇ. ಇದು ಅಭಿವೃದ್ಧಿಶೀಲ ದೇಶಗಳಲ್ಲೆ ಅತಿ ಕಡಿಮೆ. ಭಾರತದಲ್ಲೆ ಈ ಅನುಪಾತ 2007-08ರಲ್ಲಿ 11.9 ಶೇ. ತಲುಪಿತ್ತು. ಅಷ್ಟರ ವರೆಗಾದರೂ ಏರಿಸಿದ್ದರೂ ಸಾಕಷ್ಟು ಸಂಪನ್ಮೂಲಗಳನ್ನು ಸಂಗ್ರಹಿಸಬಹುದಾಗಿತ್ತು.

ಆದರೆ ಯುಪಿಎ ಹಣಕಾಸು ಮಂತ್ರಿ ಈ ಬಗ್ಗೆ ಅಷ್ಟೇನೂ ತಲೆ ಕೆಡಿಸಿಕೊಂಡಂತೆ ಕಾಣಿಸಲಿಲ್ಲ. ಶ್ರೀಮಂತ ಮತ್ತು ಕಾರ್ಪೊರೇಟ್ ವಿಭಾಗಗಳಿಂದ ಹೆಚ್ಚಿನ ತೆರಿಗೆ ಸಂಗ್ರಹಿಸುವ ಹೆಸರಿನಲ್ಲಿ ಮಾಡಿದ ಒಂದೇ ಕೆಲಸವೆಂದರೆ ಒಂದು ಕೋಟಿ ರೂ. ಗಿಂತ ಹೆಚ್ಚಿನ ಆದಾಯ ತೋರಿಸಿರುವವರ ಮೇಲೆ 10ಶೇ. ಅಧಿಭಾರ(ಸರ್ಚಾರ್ಜ್) ಹಾಕಿದ್ದಷ್ಟೇ, ಅಂದರೆ ಅವರು ತೆರಬೇಕಾದ ತೆರಿಗೆಯ ಶೇಕಡ 30.9 ರಿಂದ 33.9ಕ್ಕೆ ಏರಿಸಿದ್ದಷ್ಟೇ. ಇದು ಅನ್ವಯವಾಗುವವರ ಸಂಖ್ಯೆ ಕೇವಲ 42,800 ಮಾತ್ರ ಎಂದು ಸ್ವತಃ ಹಣಕಾಸು ಮಂತ್ರಿಗಳು ಹೇಳಿದರು. ಈ ಮಾತನ್ನು ಎರಡೆರಡು ಬಾರಿ ಅವರು ಹೇಳಿದರು. ನಿಜ, ಮಾಧ್ಯಮಗಳಲ್ಲಿ ಹಣಕಾಸು ಮಂತ್ರಿಗಳು ಬಡವರಿಗಾಗಿ 'ಸೂಪರ್ ಶ್ರೀಮಂತರ' ಮೇಲೆ ತೆರಿಗೆ ಹಾಕಿಯೇ ಬಿಟ್ಟರು ಎಂಬುದು ದೊಡ್ಡ ಸುದ್ದಿಯಾಗಿ ಬಿಟ್ಟಿತು.

ಆದರೆ ನಿಜವಾಗಿಯೂ ಇಂತಹ 'ಸೂಪರ್ ಶ್ರೀಮಂತ'ರ ಸಂಖ್ಯೆ ಕೇವಲ ಇಷ್ಟೆಯೇ? ಖಂಡಿತಾ ಅಲ್ಲ ಎನ್ನುತ್ತಾರೆ ಒಬ್ಬ ವಿಶ್ಲೇಷಕರು. ಕೆಪಿಎಂಜಿ ಇಂಟರ್‌ನ್ಯಾಶನಲ್ ಎಂಬ ಸಂಸ್ಥೆ ಪ್ರಕಟಿಸಿದ 'ಹೆಚ್‌ಎನ್‌ಐ'(ಅಂದರೆ ಉನ್ನತ ನಿವ್ವಳ ಮೌಲ್ಯದ) ಭಾರತೀಯ ವ್ಯಕ್ತಿಗಳ ಸಂಖ್ಯೆ 1,25,000. ಇವರು 1ಮಿಲಿಯ ಡಾಲರ್(5.5ಕೋಟಿರೂ.) ಹೂಡಿಕೆಗೆ ಸಿದ್ಧವಿರುವ ಹಣ ಇರುವವರು. 5.5 ಕೋಟಿ ರೂ.ಗಿಂತ ಹೆಚ್ಚು ಆದಾಯವಿರುವವರ ಸಂಖ್ಯೆಯೇ ಇಷ್ಟಿದ್ದರೆ, 1ಕೋಟಿ ರೂ. ಆದಾಯ ವಿರುವವರ ಸಂಖ್ಯೆ ಇನ್ನೂ ಎಷ್ಟೋ ಹೆಚ್ಚಿರಬೇಕಲ್ಲವೇ? ಭಾರತದಲ್ಲಿ ದುಬಾರಿ ಕಾರುಗಳೇ ವರ್ಷಕ್ಕೆ 27,000 ಮಾರಾಟವಾಗುತ್ತಿರುವಾಗ ಈ 42800 ಎಂಬ ಸಂಖ್ಯೆ ನಂಬಲರ್ಹವೇ ಎಂಬುದು ಆ ವಿಶ್ಲೇಷಕರ ಪ್ರಶ್ನೆ. ಇನ್ನೂ ಮುಖ್ಯವಾದ ಪ್ರಶ್ನೆ, 'ಬಡವರಿಗಾಗಿ' ಹೆಚ್ಚಿನ ತೆರಿಗೆ ತೆರಬಲ್ಲವರು ಇವರು ಮಾತ್ರವೇ?



ಮಾಲೀಕರ ಹೆಮ್ಮೆ ನೆರೆಹೊರೆಯವರ ಅಸೂಯೆ

ಭಾರತೀಯ ಕಾರ್ಪೊರೇಟ್‌ಗಳಲ್ಲಿ 98ಶೇ.ದಷ್ಟು ಕುಟುಂಬಗಳ ಒಡೆತನದಲ್ಲಿ ಇರುವಂತವು. ಆದ್ದರಿಂದ ವ್ಯಕ್ತಿಗಳು ಮತ್ತು ಕುಟುಂಬಗಳು ತಮ್ಮ ಹತೋಟಿಯಲ್ಲಿರುವ ಕಂಪನಿಗಳ ಮೂಲಕ ತಮ್ಮ ಆದಾಯಗಳನ್ನು ಅನುಭವಿಸುತ್ತವೆ. ಅವು ಈ ಹಣಕಾಸು ಮಂತ್ರಿಗಳ 42,800ರಲ್ಲಿ ಬರುವುದೇ ಇಲ್ಲ. ಈ ಶ್ರೀಮಂತ ಕಾರ್ಪೊರೇಟ್‌ಗಳು ತೆರುವ ತೆರಿಗೆ ಎಷ್ಟು? ಕಾನೂನು ಪ್ರಕಾರ 32.5ಶೇ. ಹೆಚ್ಚಿನ ರಾಷ್ಟ್ರಗಳಲ್ಲಿ ಇದಕ್ಕಿಂತ ಹೆಚ್ಚಿನ ದರಗಳಿವೆ, ಇವರ ಮಾದರಿಗಳಾದ ಅಮೆರಿಕಾದಲ್ಲಿ 40ಶೇ., ಜಪಾನಿನಲ್ಲಿ 38 ಶೇ. ಆದರೆ ಭಾರತದಲ್ಲಿನ ಕಾರ್ಪೊರೇಟುಗಳು 32.5 ಶೇ.ವನ್ನು ಕೂಡ ತೆರುವುದಿಲ್ಲ. ನಮ್ಮ ಹಣಕಾಸು ಮಂತ್ರಿಗಳ ಬಜೆಟ್ ದಸ್ತಾವೇಜುಗಳ ಪ್ರಕಾರ ಅವರೆಲ್ಲ ವಾಸ್ತವವಾಗಿ 10 ಶೇ. ತೆರಿಗೆಯನ್ನೂ ತೆರುವುದಿಲ್ಲ. ಎಲ್ಲ ಕಾರ್ಪೊರೇಟುಗಳಿಂದ 32.5ಶೇ.ದರದಲ್ಲಾದರೂ ತೆರಿಗೆ ವಸೂಲಿ ಮಾಡಿದರೆ ಸಾಕು, ಸಂಪನ್ಮೂಲಗಳೇ ಹಣಕಾಸು ಮಂತ್ರಿಗಳನ್ನು ಹುಡುಕಿಕೊಂಡು ಬರುತ್ತವೆ, ಅವರು 42,800 ಮಂದಿ ಕಡೆಗೆ ಮಾತ್ರ ನೋಡಬೇಕು ಎಂದು ಕೊರಗಬೇಕಿಲ್ಲ. ಅವರೇ ಸಲ್ಲಿಸಿದ ಆರ್ಥಿಕ ಸರ್ವೇಕ್ಷಣೆ ಅವರಿಗೆ ಈ ರೀತಿ ಕೊರಗುವ ಅವಕಾಶವನ್ನು ಕೊಟ್ಟಿಲ್ಲ.

"ಬಿಟ್ಟುಕೊಟ್ಟ ಆದಾಯದ ಮೊತ್ತ ನಿಜಕ್ಕೂ ಅಪಾರ. ವಿನಾಯ್ತಿಗಳನ್ನು ಸೀಮಿತಗೊಳಿಸಬೇಕಾಗಿದೆ, ಇಲ್ಲವೇ ಒಂದೊಂದಾಗಿ ಪರಿಶೀಲಿಸಬೇಕಾಗಿದೆ, ಈ ಮೂಲಕ ವಿಶಾಲ ತೆರಿಗೆ ಆಧಾರದ ಮೂಲಕ ಪೂರ್ಣ ವಸೂಲಿಗಳನ್ನು ಮಾಡಬೇಕಾಗಿದೆ" ಎಂದು ಆರ್ಥಿಕ ಸರ್ವೆಯಲ್ಲಿ ಹೇಳಿ, ಬಿಟ್ಟು ಕೊಟ್ಟ ಕಾರ್ಪೊರೇಟ್ ಮತ್ತು ಪರೋಕ್ಷ ತೆರಿಗೆಗಳ ಪಟ್ಟಿ ಸಲ್ಲಿಸಿದ 24 ಗಂಟೆಗಳೊಳಗೆ ಹೆಚ್ಚಿನ ಸಂಪನ್ಮೂಲ ಸಂಗ್ರಹಿಸಲು 42,800 ಮಂದಿಯಷ್ಟೇ ಇದ್ದಾರೆ ಎನ್ನಲು ಹೇಗೆ ತಾನೇ ಸಾಧ್ಯ?

ಆರ್ಥಿಕ ಸರ್ವೇಕ್ಷಣೆಯಲ್ಲಿನ ಹೇಳಿಕೆಯ ಪ್ರಕಾರ 2010-11 ರಲ್ಲಿ ವಸೂಲಿ ಮಾಡಿದ ಪ್ರತಿ 100ರೂ. ಅಬಕಾರಿ ಮತ್ತು ಸೀಮಾಸುಂಕಗಳಿಗೆ ಪ್ರತಿಯಾಗಿ ವಿವಿಧ ರಿಯಾಯ್ತಿ/ವಿನಾಯ್ತಿಗಳಿಂದ ಬಿಟ್ಟುಕೊಟ್ಟ ಆದಾಯ ರೂ. 132. 2011-12ರಲ್ಲಿ ಇದು 145ರೂ. ಅಂದರೆ 2010-11ರಲ್ಲಿ ಒಟ್ಟು ರೂ. 2.75 ಕೋಟಿ ವಸೂಲಾಗಿದ್ದರೆ, ವಸೂಲು ಮಾಡದೆ ಬಿಟ್ಟುಕೊಟ್ಟದ್ದು ರೂ. 3.65ಲಕ್ಷ ಕೋಟಿ; 2011-12ರಲ್ಲಿ, ವಸೂಲಿ ಮಾಡಿದ್ದು 2.99ಲಕ್ಷ ಕೋಟಿ, ಬಿಟ್ಟು ಕೊಟ್ಟದ್ದು ರೂ. 4.35 ಲಕ್ಷ ಕೋಟಿ. ಇವನ್ನೆಲ್ಲ ವಸೂಲಿ ಮಾಡಿದರಷ್ಟೇ ಸಾಕಿತ್ತು, ಹಣಕಾಸು ಕೊರತೆಯೇ ಇರುತ್ತಿರಲಿಲ್ಲ, ಆಹಾರ ಸಬ್ಸಿಡಿ, ಇಂಧನ ಸಬ್ಸಿಡಿಗಳ ಬಗ್ಗೆ ಕೊರಗುವ, ಅವನ್ನು ಕಡಿತ ಮಾಡುವ ಜನಗಳ ವಿರೋಧವನ್ನು ಕಾಣುವ ಅಗತ್ಯವೇ ಇರುತ್ತಿರಲಿಲ್ಲ. ಆದರೆ ಯುಪಿಎ ಸರಕಾರದ ಹಣಕಾಸು ಮಂತ್ರಿಗಳು ಇದನ್ನು ಗಮನಿಸದೆ ಕೇವಲ 42,800 ಎಂದು ಅಸಹಾಯಕರಂತೆ ಮಾತಾಡಿದ್ದೇಕೆ?

ಹೆಣ್ಣು ಭ್ರೂಣ ಹತ್ಯೆ: ಸುಪ್ರಿಂ ಕೋರ್ಟ್ ತರಾಟೆ

ದೇಶದಲ್ಲಿ ಜನ್ಮದ ಮೊದಲು ಶಿಶುವಿನ ಲಿಂಗ ನಿರ್ಧಾರದ ಕಾನೂನನ್ನು ಯಾವುದೆ ಲಂಗು-ಲಗಾಮಿಲ್ಲದೆ ದುರುಪಯೋಗ ಪಡಿಸಿಕೊಳ್ಳಲಾಗುತ್ತಿದೆ ಎಂದು ದೇಶದ ಸರ್ವೋಚ್ಚ ನ್ಯಾಯಾಲಯ ಸರಕಾರಗಳನ್ನು ತರಾಟೆಗೆ ತಗೊಂಡಿದೆ. ಈ ಕುರಿತ 1994 ರ ಕಾನೂನಿನ ಕಟ್ಟು ನಿಟ್ಟಾದ ಪಾಲನೆ ಮಾಡಿಸಬೇಕಾಗಿದೆ ಎಂದು ಅದು ನಿರ್ದೇಶನ ನೀಡಿದೆ.

ಹೆಣ್ಣು ಭ್ರೂಣ ಹತ್ಯೆ ಮಾನವ ಕುಲದ ಅತ್ಯಂತ ಹೀನ ರೀತಿಯ ಅಮಾನವೀಕರಣ ಎಂದಿರುವ ಇಬ್ಬರು ನ್ಯಾಯಾಧೀಶರ ನ್ಯಾಯಪೀಠ ಈ ಕಾನೂನಿನ ಗುರಿಗಳ ಸಾಧನೆಗೆ ಪರಿಣಾಮಕಾರಿ ಉಸ್ತುವಾರಿಯಾಗಲೀ, ಅದನ್ನನುಸರಿಸಿದ ಕ್ರಮಗಳಾಗಲೀ ಇಲ್ಲ ಎಂದು ಟಿಪ್ಪಣಿ ಮಾಡಿದೆ. ಸೋನೋಗ್ರಫಿ ಕೇಂದ್ರಗಳು, ಜೆನೆಟಿಕ್ ಕ್ಲಿನಿಕ್‌ಗಳು, ಜೆನೆಟಿಕ್ ಸಲಹಾ ಕೇಂದ್ರಗಳು, ಸಂಬಂಧಪಟ್ಟ ಪ್ರಯೋಗಾಲಯಗಳು ಇತ್ಯಾದಿ ದೇಶದ ಎಲ್ಲೆಡೆ ನಾಯಿಕೊಡೆಗಳಂತೆ ಹರಡುತ್ತಿವೆ. ಹೀಗಿರುವಾಗ ಈ ಬಗ್ಗೆ ಇನ್ನಷ್ಟು ಎಚ್ಚರ, ಗಮನ ಅಗತ್ಯವಾಗಿದೆ. ಮೂರು ತಿಂಗಳೊಳಗೆ ಎಲ್ಲ ರಿಜಿಸ್ಟರಾದ ಮತ್ತು ಆಗದ ಸೊನೊಗ್ರಫಿ ಕ್ಲಿನಿಕ್‌ಗಳ ಮಾಹಿತಿ ಸಿದ್ಧವಾಗಬೇಕು ಎಂದಿದೆ.

ಹೆಣ್ಣು ಭ್ರೂಣಹತ್ಯೆಯ ಬೇರುಗಳು ಸಮಾಜದ ಕೆಲವು ತಪ್ಪು ನಂಬಿಕೆಗಳು, ಸ್ವಾರ್ಥಪರ ಪರಂಪರೆಗಳಲ್ಲಿವೆ. ಈ ಕಾನೂನಿನ ಜಾರಿ ಮಾಡಬೇಕಾದವರು ಅದನ್ನು ಸಮರ್ಪಣಾ ಭಾವ ಮತ್ತು ಬದ್ಧತೆಯಿಂದ ಮಾಡಬೇಕಾಗಿದೆ, ಅವರಲ್ಲಿ ಸಮಾಜದಲ್ಲಿ ಮಹಿಳೆಯರ ಪಾತ್ರದ ಅರಿವು ಇರಬೇಕು ಎಂದಿರುವ ಸುಪ್ರಿಂ ಕೋರ್ಟ್, ಎಲ್ಲ ಕೋರ್ಟುಗಳು ಆರು ತಿಂಗಳೊಳಗೆ ಈ ಕಾನೂನಿನ ಅಡಿಯಲ್ಲಿನ ಕೇಸುಗಳನ್ನು ಇತ್ಯರ್ಥ ಮಾಡಬೇಕು, ಕೇಂದ್ರ ಸಲಹಾಮಂಡಳಿ ಮತ್ತು ರಾಜ್ಯ ಮಂಡಳಿಗಳು ಕನಿಷ್ಟ ಆರು ತಿಂಗಳಿಗೊಮ್ಮೆಯಾದರೂ ಸಭೆ ಸೇರಿ ಕಾನೂನಿನ ಪಾಲನೆಯ ಸಮೀಕ್ಷೆ ನಡೆಸಬೇಕು, ರಿಜಿಸ್ಟರಾಗದ ಸೊನೊಗ್ರಫಿ ಯಂತ್ರಗಳನ್ನು ವಶಪಡಿಸಿಕೊಳ್ಳಬೇಕು. ಈ ಯಂತ್ರಗಳ ಉತ್ಪಾದಕರು ಅವನ್ನು ರಿಜಿಸ್ಟರಾಗದ ಕ್ಲಿನಿಕ್‌ಗಳಿಗೆ ಮಾರದಂತೆ ಉಸ್ತುವಾರಿ ಇರಬೇಕು, ಈ ಬಗ್ಗೆ ರಾಜ್ಯ ಸರಕಾರಗಳು ಮೂರು ತಿಂಗಳಿಗೊಮ್ಮೆ ವರದಿ ಸಲ್ಲಿಸಬೇಕು ಎಂದೂ ನ್ಯಾಯಾಲಯ ನಿರ್ದೇಶನ ನೀಡಿದೆ.

ನೈತಿಕ ಪೋಲೀಸ್‌ಗಿರಿ–ಉಡುಪಿ ಜಿಲ್ಲೆಗೂ ವಿಸ್ತರಣೆ

ಕರಾವಳಿ ಕರ್ನಾಟಕ–ಮತ್ತೆ ಎದ್ದಿರುವ ಕೋಮುವಾದಿ ಚಟುವಟಿಕೆಗಳು

ಬಾಲಕೃಷ್ಣ ಶೆಟ್ಟಿ

ನೈತಿಕ ಪೋಲೀಸ್‌ಗಿರಿ, ಚರ್ಚ್ ಮೇಲೆಧಾಳಿ, ಮಸೀದಿ ಕಟ್ಟಬಾರದೆಂದು ಪ್ರತಿಭಟನೆ, ಮಸೀದಿಯ ಮೇಲೆ ಕಲ್ಲು ತೂರಾಟ, ಹಂದಿ ಮಾಂಸದ ತುಂಡುಗಳನ್ನು ಎಸೆಯುವುದು, ಹಿಂದೂ ಪೂಜಾ ಸ್ಥಳಗಳಲ್ಲಿ ಗೋಮಾಂಸದ ತುಂಡುಗಳನ್ನು ಬಿಸಾಡುವುದು ಇತ್ಯಾದಿ ಕೋಮುವಾದಿ ಚಟುವಟಿಕೆಗಳು ಕರಾವಳಿ ಕರ್ನಾಟಕದಲ್ಲಿ ಮುಂದುವರಿಯುತ್ತಿವೆ. ಕೋಮುಸಂಘಟನೆಯ ಹೆಸರಿನಲ್ಲಿ ಗೂಂಡಾ ಧಾಳಿಗಳು ನಡೆಯುತ್ತಿವೆ.

ಇದಲ್ಲದೆ, ಯಕ್ಷಗಾನದಂತಹ ಸಾಂಸ್ಕೃತಿಕ ಚಟುವಟಿಕೆಗಳಲ್ಲಿ ಕೋಮುಭಾವನೆಗಳನ್ನು ಪ್ರಚೋದಿಸುವ ಕೆಲಸವೂ ನಡೆಯುತ್ತಿದೆ. ಇನ್ನೊಂದೆಡೆಯಲ್ಲಿ ಸಂಘಪರಿವಾರದ ಸಂಘಟನೆಗಳ ಕೆಲವು ಮುಖಂಡರು ಡ್ರಗ್ಸ್ ವ್ಯಾಪಾರದಲ್ಲಿ ತೊಡಗಿರುವುದನ್ನು ಬಯಲುಗೊಳಿಸಿದ ಕರಾವಳಿ ಅಲೆ ಪತ್ರಿಕೆಯ ವರದಿಗಾರರ ಮೇಲೆ ಪ್ರಸಾರ ವ್ಯಾನುಗಳ ಮೇಲೆ ದಾಳಿ ನಡೆಸಿದ ತಂಡವು ಕೆಲವು ದಿನ ಓದುಗರಿಗೆ ಪತ್ರಿಕೆ ದೊರಕದಂತೆ ಮಾಡಿದೆ. ಇಷ್ಟೆಲ್ಲಾ ಅನಾಹುತಗಳು ಮೇಲಿಂದ ಮೇಲೆ ನಡೆಯುತ್ತಿದ್ದರೂ ಏನು ನಡೆದಿಲ್ಲವೆಂಬಂತೆ ಬಿಜೆಪಿ ಸರಕಾರ ಕೈ ಕಟ್ಟಿ ಕುಳಿತಿದೆ. ಈ ಸರಕಾರದಿಂದ ನೇಮಿಸಲ್ಪಟ್ಟ ಪೋಲೀಸ್ ಅಧಿಕಾರಿಗಳು ಬಹುತೇಕ ಸಂದರ್ಭಗಳಲ್ಲಿ ಹಿಂದೂ ಕೋಮುವಾದಿ ಸಂಘಟನೆಗಳ ಬೆಂಬಲಕ್ಕೆ ನಿಂತಿದ್ದಾರೆ.

ಕ್ರೈಸ್ತ ಪ್ರಾರ್ಥನಾಲಯದ ಮೇಲೆ ಧಾಳಿ : ಇತ್ತೀಚಿಗೆ ಉಡುಪಿ ಜಿಲ್ಲೆಯ ಮೂಡುಬೆಳ್ಳೆ ಎಂಬ ಗ್ರಾಮದ ಕುದುರೆ ಮಾಲೆ ಎಂಬಲ್ಲಿ ಬೈಬಲ್ ಕುರಿತು ಭೋಧನೆ ನೀಡುತ್ತಿದ್ದ ಕ್ರೈಸ್ತ ಪ್ರಾರ್ಥನಾಲಯದ ಮೇಲೆ ಬಜರಂಗದಳದ ಕಾರ್ಯಕರ್ತರು ದಾಳಿ ನಡೆಸಿದ್ದು ಪ್ರಾರ್ಥನೆಗೆಂದು ಬಂದಿದ್ದ 6 ಜನರು ಗಾಯಗೊಂಡಿದ್ದಾರೆ. ಒಬ್ಬರು ಗಂಭೀರ ಸ್ಥಿತಿಯಲ್ಲಿ ಮಣಿಪಾಲ ಅಸ್ಪತ್ರೆಗೆ ದಾಖಲಾಗಿದ್ದಾರೆ. ಪೋಲೀಸರು 10 ಜನರನ್ನು ಬಂಧಿಸಿದ್ದರೂ ಅದೇ ದಿನ ರಾತ್ರಿಯೇ ಜಾಮಿನಿನ ಮೇಲೆ ಹೊರಗೆ ಬಂದಿದ್ದಾರೆ. ಆ ಪ್ರಾರ್ಥನಾ ಮಂದಿರಕ್ಕೆ ಹಿಂದುಗಳು, ಕ್ರಿಶ್ಚಿಯನ್ನರು ಭೇದವಿಲ್ಲದೆ ಜನರು ಬರುತ್ತಿದ್ದರು. ನಮ್ಮ ಮಾನಸಿಕ ನೆಮ್ಮದಿಗಾಗಿ ಸ್ವ ಇಚ್ಛೆಯಿಂದ ಬರುತ್ತಿದ್ದೇವೆ ಎಂದು ಹೇಳಿಕೆಯನ್ನು ನೀಡಿದ್ದಾರೆ. ಆದರೆ ಮತಾಂತರ ನಡೆಯುತ್ತಿದೆ ಎಂದು ಆರೋಪ ಹೊರಿಸಿ, ಪ್ರಚಾರ ನಡೆಸಿ ದಾಳಿಯನ್ನು ಮಾಡಲಾಗಿದೆ.

ಮಸೀದಿ ನಿರ್ಮಾಣಕ್ಕೆ ತಡೆ : ಕಳೆದ ತಿಂಗಳು ಉಡುಪಿ ತಾಲೂಕಿನ ಕಾಪು ಪ್ರದೇಶದ ಮಲ್ಲಾರು ಗ್ರಾಮ ಪಂಚಾಯಿತ್ ವ್ಯಾಪ್ತಿಯಲ್ಲಿ ಪರವಾನಗಿ ಪಡೆದು ನಿರ್ಮಿಸುತ್ತಿದ್ದ ಮಸೀದಿ ಕಟ್ಟಡ ನಿರ್ಮಾಣ ಕಾರ್ಯವನ್ನು ವಿಶ್ವಹಿಂದೂ ಪರಿಷತ್‌ನ ಕಾರ್ಯಕರ್ತರು ಹಾಗೂ ಸ್ಥಳಿಯ ಬಿಜೆಪಿ ಶಾಸಕ ಲಾಲಾಜಿ ಮೆಂಡನ್ ರವರು ಪ್ರತಿಭಟಿಸಿದ ನಂತರ ತಡೆಹಿಡಿಯಲಾಗಿದೆ. ಈ ಘಟನೆ ಕೇವಲ ಕೋಮು ಭಾವನೆ ಪ್ರಚೋದನೆ ಮಾಡುವ ಉದ್ದೇಶ ಮಾತ್ರವಾಗಿರದೆ, ಭೂ ಮಾಫಿಯಾಗಳ ಕೈವಾಡವೂ ಇದೆ ಎಂದು ಶಂಕಿಸಲಾಗಿದೆ. ಉಡುಪಿ ಜಿಲ್ಲೆಯ ಜಿಲ್ಲಾಧಿಕಾರಿಗಳೇ ಪರಿಶೀಲಿಸಿದ ದಾಖಲೆಗಳ ಪ್ರಕಾರ, 1948 ರಲ್ಲಿ ರಚಿತವಾದ ಈ ಮಸೀದಿಯ ಪುನರ್ ನಿರ್ಮಾಣಕ್ಕಾಗಿ



ಕುದುರೆಮಾಲೆಯ ಕ್ರೈಸ್ತ ಪ್ರಾರ್ಥನಾಲಯದ ಮೇಲೆ ಧಾಳಿ



ಸದ್ರಿ ಗ್ರಾಮ ಪಂಚಾಯಿತ್‌ನಿಂದ ಪರವಾನಗಿ ಪಡೆಯಲಾಗಿದೆ. ಆ ಮಸೀದಿ ಒಳಗೊಂಡಿರುವ 3 ಎಕರೆ ಪ್ರದೇಶದ ಜಾಗವನ್ನು 1948 ರಲ್ಲಿ ಮುಸ್ಲಿಮರ ಖಬರ್ ಸ್ಥಾನ್ (ಸ್ಮಶಾನ)ಕಾಗಿ ನೀಡಿರುವ ಬಗ್ಗೆ ದಾಖಲೆಗಳಿವೆ. ವಿಪರ್ಯಾಸವೆಂದರೆ, ಈ ವಿವಾದದಲ್ಲಿ ಮಧ್ಯಪ್ರವೇಶಿಸಿದ ಜಿಲ್ಲಾಧಿಕಾರಿಗಳು, 'ಸೌಹಾರ್ದ ರೀತಿಯಲ್ಲಿ ಗೊಂದಲವನ್ನು ಬಗೆ ಹರಿಸುವ' ಹೆಸರಿನಲ್ಲಿ ಕಟ್ಟಡ ಕಾಮಗಾರಿಯನ್ನು ತಾತ್ಕಾಲಿಕವಾಗಿ ಸ್ಥಗಿತಗೊಳಿಸಲು ಸೂಚಿಸಿದ್ದಾರೆ. ಇದು ಬಿಜೆಪಿ ಶಾಸಕರ ಮತ್ತು ಸರಕಾರದ ಪ್ರಭಾವ.

ನೈತಿಕ ಪೋಲೀಸ್ ಗಿರಿ – ಮುಸ್ಲಿಂ ಯುವಕರಿಂದ : ಹಿಂದೂ ಕೋಮುವಾದ ಮತ್ತು ಮುಸ್ಲಿಂ ಮೂಲಭೂತವಾದ ಒಂದ–ಕ್ಕೊಂದು ಪೂರಕವಾಗಿ ಬೆಳೆಯುತ್ತದೆ ಎಂಬುದು ಓದುಗರಿಗೆ ತಿಳಿದ ವಿಚಾರ. ಕರಾವಳಿ ಜಿಲ್ಲೆಗಳಲ್ಲಿ ವಿಶೇಷವಾಗಿ, ದಕ್ಷಿಣ ಕನ್ನಡ ಮತ್ತು ಉಡುಪಿಯಲ್ಲಿ ಮುಸ್ಲಿಂ ಮೂಲಭೂತವಾದಿ ಸಂಘಟನೆಗಳ ಚಟುವಟಿಕೆಗಳೂ ಹೆಚ್ಚುತ್ತಿವೆ. ಇತ್ತೀಚಿಗೆ ಮುಸ್ಲಿಂ ಮಹಿಳೆಯೊಬ್ಬರು ಹಿಂದೂ ಪುರುಷನೊಂದಿಗೆ ಕಾರಿನಲ್ಲಿ ಪ್ರಯಾಣಿಸಿದರು ಎಂಬುದನ್ನೇ ನೆಪವಾಗಿಟ್ಟುಕೊಂಡು ಪಾಪುಲರ್ ಫ್ರಂಟ್ ಆಫ್ ಇಂಡಿಯಾದ ಕಾರ್ಯಕರ್ತರು ಆ ಮಹಿಳೆಯನ್ನು ಥಳಿಸಿದ್ದರು.

ಇದೀಗ ಮಾರ್ಚ್ 13 ರಂದು ಸುರತ್ಕಲ್‌ನ ಕಾಟಿಪಳ್ಳ ಕಾಲೇಜಿನ ಇಬ್ಬರು ಮುಸ್ಲಿಂ ವಿದ್ಯಾರ್ಥಿನಿಯರು ಮತ್ತು ಒಬ್ಬ ಹಿಂದೂ ವಿದ್ಯಾರ್ಥಿನಿ, ಅವರ ಸ್ನೆಹಿತರಾದ ರಾಕೇಶ್ ಮತ್ತು ಶ್ರೀನಾಥ್ ಎಂಬುವರೊಂದಿಗೆ ಮಣಿಪಾಲಕ್ಕೆ ಹೋಗಿ ವಾಪಾಸು ಬರುವ ಸಂದರ್ಭದಲ್ಲಿ ಕಾಪು ಬಳಿಯಲ್ಲಿ ಮುಸ್ಲಿಂ ಯುವಕರ ಗುಂಪೊಂದು ರಾಕೇಶ್ ಮತ್ತು ಶ್ರೀನಾಥ್ ಮೇಲೆ ಹಲ್ಲೆ ನಡೆಸಿದೆ. ಈ ಸುದ್ದಿ ತಿಳಿಯುತ್ತಿದ್ದಂತೆ ಹಲ್ಲೆ ನಡೆಸಿದವರನ್ನು ಬಂಧಿಸಬೇಕೆಂದು ಬಜರಂಗದಳ ಕಾರ್ಯಕರ್ತರು ಕಾಪು ಪೋಲೀಸ್ ಠಾಣೆ–ಯ ಎದುರಿನಲ್ಲಿ ಪ್ರತಿಭಟನೆ ನಡೆಸಿದ್ದಾರೆ. ಮುಸ್ಲಿಂ ಯುವತಿಯರೊಂದಿಗೆ ತೆರಳಿದ ರಾಜೇಶ್ ಮತ್ತು ಶ್ರೀನಾಥ್ ಬಜರಂಗದಳದ ಕಾರ್ಯಕರ್ತರೇ ಎಂಬುದು ಇನ್ನೂ ಖಚಿತವಾಗಿ ತಿಳಿದಿಲ್ಲ.

ಯಕ್ಷಗಾನದಲ್ಲೂ ಕೊಮುಭಾವನೆ ಪ್ರಚೋದನೆ : ಮಾರ್ಚ್ 2 ರಂದು ಕುಂದಾಪುರ ಪುರಸಭೆ ಚುನಾವಣೆ ನಡೆಯುವ ಸಂದರ್ಭದಲ್ಲಿಯೂ ಯಕ್ಷಗಾನ ಬಯಲಾಟ ಉಚಿತ ಪ್ರದರ್ಶನವಿತ್ತು. "ಕುಂದಾಪುರ ಕ್ಷೇತ್ರ ಮಹಾತ್ಮೆ" ಎಂಬ ಹೆಸರಿನ ನೂತನ ಪ್ರಸಂಗ (ಯಕ್ಷಗಾನದ ಕಥೆ) ವನ್ನು ಡಾ। ವೈ. ಚಂದ್ರಶೇಖರ ಶೆಟ್ಟಿಯವರು ಬರೆದಿದ್ದರು. ಇದು ಅವರ 75 ನೇ ಕೃತಿ. ಈ ಸಂದರ್ಭದಲ್ಲಿ ಜಿಲ್ಲಾ ಉಸ್ತುವಾರಿ ಸಚಿವ ಕೋಟಾ ಶ್ರೀನಿವಾಸ ಪೂಜಾರಿಯವರು ಡಾ। ಶೆಟ್ಟಿಯವರನ್ನು ಸನ್ಮಾನಿಸಿ ಮಾತನಾಡಿದ್ದರು. ಚುನಾವಣಾ ಆಯೋಗದ ನೀತಿ ಸಂಹಿತೆಯ ಪ್ರಕಾರ, ಸಾಂಸ್ಕೃತಿಕ ಕಾರ್ಯಕ್ರಮಗಳಿಗೆ ನೀತಿ ಸಂಹಿತೆ ಅನ್ವಯಿಸುವುದಿಲ್ಲ!.

ಈ ಪ್ರಸಂಗವನ್ನು ಬಯಲಾಟದ ಮೂಲಕ ಆಡಿ ತೋರಿಸಿದವರು ರಾಮಚಂದ್ರಪುರ ಮಠದ ಮೇಳದವರು. ಆರ್.ಎಸ್.ಎಸ್. ಮಠ ಎಂದೇ ಪ್ರಚಲಿತವಾದುದು. ಇಲ್ಲಿ ಬರುವ ಪಾತ್ರಧಾರಿಗಳು ಶ್ರೀ ರಾಮಸೇನೆ ಮತ್ತು ಶಿವ ಸೇನೆ ಎಂಬ ಹೆಸರಿನಲ್ಲಿ ಜಗಳವಾಡುತ್ತಾರೆ. ತಮ್ಮ ನಡುವಿನ ಜಗಳವನ್ನು ಪರಿಹರಿಸಿಕೊಳ್ಳಲು ಪರಮಾತ್ಮನಾದ ಶಿವನಿಗೆ ಮೊರೆ ಹೋಗುತ್ತಾರೆ. ಅಲ್ಲಿ ಶಿವ–ಪರಮಾತ್ಮ ಅವರಿಗೆ ಕೊಡುವ ಪರಿಹಾರ ಸೋಜಿಗವೂ, ಅಪಾಯಕಾರಿಯೂ ಆಗಿದೆ. 'ನಿಮ್ಮಬ್ಬರನ್ನು ಪಾಪಿಗಳ ಪಾಪ ತೊಳೆಯಲು, ಅವರನ್ನು ಸಂಹರಿಸಲು ಭೂಮಿಗೆ (ಈ ಪ್ರಸಂಗದಲ್ಲಿ ಕುಂದಾಪುರಕ್ಕೆ) ಕಳುಹಿಸಲಾಗಿದೆ. ನೀವಿಬ್ಬರೂ ಜಗಳವಾಡುವ ಬದಲಾಗಿ, ಗೋಹತ್ಯೆ ಮಾಡುವ, ಗೋವುಗಳನ್ನು ಕಡಿಯುವ ಪಾಪಿಗಳಿದ್ದಾರೆ. ಅಂತವರ ವಿರುದ್ಧ ಹೋರಾಡಲು ನೀವು ಒಂದಾಗಬೇಕು. ನಿಮ್ಮಲ್ಲಿ ಜಗಳವಾಡಬಾರದು' ಎಂದು ಶಿವ ಪರಮಾತ್ಮ ಬುದ್ಧಿವಾದ ಹೇಳುತ್ತಾನೆ. ಹೇಗಿದೆ ಸಾಂಸ್ಕೃತಿಕ ದಾಳಿ? ಇಂತಹ ಘಟನೆಗಳು ದಿನ ನಿತ್ಯವೆಂಬಂತೆ ನಡೆಯುತ್ತಿದೆ.

ಜನರಿಂದ ತಕ್ಕ ಪಾಠ : ಇತ್ತೀಜೆಗೆ ನಡೆದ ಸ್ಥಳೀಯ ಸಂಸ್ಥೆಗಳ ಚುನಾವಣೆಗಳಲ್ಲಿ ಕೋಮುವಾದಿ ಸಂಘಟನೆಗಳಿಗೆ ಬೆಂಬಲ ನೀಡುತ್ತಿರುವ ಬಿಜೆಪಿಯನ್ನು ಕರಾವಳಿಯ ಜನರು ಹೀನಾಯವಾಗಿ ಸೋಲಿಸಿದ್ದಾರೆ. ಬೇರೆ ಪರ್ಯಾಯ ಕಾಣದೆ ಕಾಂಗ್ರೆಸ್ ಅನ್ನು ಗೆಲ್ಲಿಸಿದ್ದಾರೆ. 45 ವರ್ಷಗಳಿಂದ ಅವ್ಯಾಹತವಾಗಿ ಅಧಿಕಾರ ನಡೆಸುತ್ತಿದ್ದ (ಮಧ್ಯೆ 5 ವರ್ಷಗಳ ಕಾಲ ಚುನಾವಣಾ ಬಹಿಷ್ಕಾರದಿಂದ ಕಾಂಗ್ರೆಸ್ ಅಧಿಕಾರಕ್ಕೆ ಬಂದಿತ್ತು.) ಪೂರ್ವಾಶ್ರಮದ ಜನಸಂಘ ಮತ್ತು ಇಂದಿನ ಬಿಜೆಪಿ ಮಣ್ಣು ಮುಕ್ಕಿದೆ.

ಮುಂಬರುವ ವಿಧಾನ ಸಭಾ ಚುನಾವಣೆಯ ಹಿನ್ನೆಲೆಯಲ್ಲಿ ಇನ್ನಷ್ಟು ಕೋಮುವಾದಿ ಚಟುವಟಿಕೆಗಳು ಹೆಚ್ಚುತ್ತಿದ್ದು ಅದರ ವಿರುದ್ಧ ಪ್ರತಿಭಟಿನೆ ನಡೆಸುತ್ತಾ ಜನರನ್ನು ಎಚ್ಚರಿಸುವ ಕೆಲಸವನ್ನು ಉಡುಪಿ ಮತ್ತು ದಕ್ಷಿಣ ಕನ್ನಡ ಜಿಲ್ಲೆಯ ಎಲ್ಲ ಪ್ರಗತಿಪರ ಶಕ್ತಿಗಳು ಮಾಡಬೇಕಿದೆ. ಅದರಿಂದ ಮಾತ್ರವೇ ಈ ಶಕ್ತಿಗಳನ್ನು ಜನತೆಯಿಂದ ದೂರವಿರಿಸಲು ಸಾಧ್ಯ.

ವಿಶ್ವ ಮಹಿಳಾ ದಿನದ ಕಹಳೆ.........

ಪುಟ 6 ರಿಂದ



ಇಡೀ ಕಾರ್ಯಕ್ರಮ ಒಂದು ಹಾಡುಗಳ ಉತ್ಸವದಂತಿತ್ತು. ಮಹಿಳೆಯರೇ ಸೇರಿದಾಗ ಹಾಡುಗಳಿಲ್ಲದಿದ್ದರೆ ಹೇಗೆ?

‘ಪ್ರೀತಿಯ ಗಾಳಿ ಬೀಸುತಿದೆ, ಹಟ್ಟಿ ಮೊಹಲ್ಲಾಗಳ ನಡುವೆ, ಗಡಿಗಳ ಮೀರಿ ಚೇತನವಾ ಮಾಡೋಣ ಬಾ, ಓ ನನ್ನ ಸಂಗಾತಿಯೇ,' ಬಾಂವ್ರಿ ದೇವಿ ಮತ್ತು ಸಂಗಡಿಗರು ಹಾಡಿದ ‘ಚಾರ್ ದಿನ್‌ಕೆ ಸಹೇಲಿ ಸಹೇಲಿ ನಹೀ, ಉಮರ್ ಬರ್‌ಕಾ ಸಾತ್ ದೇನೇ ಕಾ ವಾದಾ ಕರೋ’ ಹಾಡು ಎಲ್ಲರ ಬಾಯಲ್ಲೂ ಪುನರುಚ್ಚರಿಸಲ್ಪಟ್ಟಿತು. ಖ್ಯಾತ ಜಾನಪದ ಹಾಡುಗಾರ್ತಿ ಹಾಲಕ್ಕಿಯವರ ಸುಕ್ರಿ ಬೊಮ್ಮನಗೌಡ ಮತ್ತು ಅವರ ತಂಡದವರ ಕನ್ನಡ ಜನಪದ ಹಾಡುಗಳು ಮಹಿಳೆಯರ ಬದುಕಿನ ಬವಣೆಗಳನ್ನು ನಿರೂಪಿಸಿದವು. ಅಂತೆಯೇ ಹೆಚ್ಚಿನ ಹಾಡುಗಳು ಪ್ರತಿಭಟನೆಯನ್ನು ಸಶಕ್ತವಾಗಿ ನಿರೂಪಿಸಿದವು.

ಹಿಂಸಾರಹಿತ ಸಮಾಜದ ನಿರ್ಮಾಣಕ್ಕೆ ಹಕ್ಕೊತ್ತಾಯ ಜಾಥಾ ಮತ್ತು ಸಮಾವೇಶ:

ಕರಾವಳಿ ಉತ್ಸವ ಮೈದಾನಕ್ಕೆ ಬೆಳಿಗ್ಗೆ ಗಂಟೆ 11.30ಕ್ಕೆ ಜಾಥಾ ತಲಪಿದ್ದೇ ಹಾಡುಗಳು ಆರಂಭವಾದವು. ಬಾಂವ್ರೀದೇವಿಯವರು ಹಾಡೊಂದರ ಮೂಲಕ ಸಮಾವೇಶ ಉದ್ಘಾಟಿಸಿದರು. (ಚಾರ್ ದಿನ್ ಕೆ ಸಹೇಲಿ ನಹೀ) ‘ಮಹಿಳೆ ಪರ ಕಾಳಜಿ ಇಲ್ಲದ, ಸುರಕ್ಷತೆ ನೀಡದ ಪುರುಷರಿಗೆ ಹಾಗೂ ಅತ್ಯಾಚಾರಿಗಳಿಗೆ ಯಾವುದೇ ಕಾರಣಕ್ಕೂ ಮತ ನೀಡದಿರಿ” ಎಂದು ಅವರು ಕರ್ನಾಟಕದ ಜನರಿಗೆ ಕರೆ ಕೊಟ್ಟರು. ಮಹಿಳೆಯರ ಆಶಯಗಳನ್ನು ವ್ಯಕ್ತಪಡಿಸುವ ಕಲಾವಿದ ದೇವದಾಸ್ ಶೆಟ್ಟಿಯವರ ಕಲಾಕೃತಿಯೊಂದನ್ನು ಅನಾವರಣ ಮಾಡುವ ಮೂಲಕ ಅವರು ಸಮಾವೇಶ ಉದ್ಘಾಟಿಸಿದರು.

ಲೇಖಕಿ ಸಾರಾ ಅಬೂಬಕರ್ ಮಾತನಾಡಿ , “ಮಹಿಳಾ ಹಕ್ಕುಗಳ ಚಳುವಳಿ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಬಲಹೀನವಾಗಿರುವುದು ಖೇದಕರ. ಈ ಜಿಲ್ಲೆಯಲ್ಲಿ ನಡೆಯುತ್ತಿರುವ ಮಹಿಳೆಯರ ಮೇಲಿನ ದೌರ್ಜನ್ಯಗಳು ಕೇರಳದಲ್ಲೇನಾದರೂ ನಡೆದಿದ್ದಲ್ಲಿ, ಅಲ್ಲಿನ ಮಹಿಳೆಯರು ಪೋಲೀಸರನ್ನು ತರಾಟೆಗೆ ತೆಗೆದುಕೊಳ್ಳುತ್ತಿದ್ದರು. ಅಕಾರಣವಾಗಿ ಈ ಜಿಲ್ಲೆಯಲ್ಲಿ ಮಹಿಳೆಯರನ್ನು ನೈತಿಕ ಪೋಲೀಸರೆಂದು ಗುರುತಿಸಲಾಗುವ ಕೆಲ ಕೇಡಿಗಳು ಠಾಣೆಗೆ ಕರೆದೊಯ್ಯುತ್ತಿದ್ದಾರೆ; ಪೋಲೀಸರ ನಿಷ್ಕ್ರಿಯತೆಯನ್ನು ಪ್ರತಿಭಟಿಸಲು ಸಾಧ್ಯವಾಗಿಲ್ಲ” ಎಂದು ತಮ್ಮ ವ್ಯಥೆಯನ್ನು ತೋಡಿ ಕೊಂಡರು.

ಖ್ಯಾತ ಸಂಘಟಕಿ ಹಾಗೂ ದಲಿತ ಮಹಿಳೆಯರ ರಾಷ್ಟ್ರೀಯ ಒಕ್ಕೂಟದ ಸಂಘಟಕಿ ರೂತ್ ಮನೋರಮಾ ಮಾತನಾಡಿ “ ಪುರುಷ ಪ್ರಾಧಾನ್ಯದ ವಿರುದ್ಧ ಮಹಿಳೆ ಎದ್ದು ನಿಲ್ಲಬೇಕಿದೆ. ಮೂಲಭೂತವಾದಿ ಶಕ್ತಿಗಳು ಮಹಿಳೆಯರು ಮನೆಯೊಳಗೇ ಇರಬೇಕೆಂದು ಒತ್ತಾಯಿಸುತ್ತಿವೆ. ಮಹಿಳೆ ಒಗ್ಗಟ್ಟಾದರೆ ಎಂತಹ ದೌರ್ಜನ್ಯಗಳನ್ನು ಸಹ ಎದುರಿಸಿ ನಿಲ್ಲುವುದಕ್ಕೆ ಸಾಧ್ಯವಿದೆ “ಎಂದು ಹೇಳಿದರು.

ಹೆಣ್ಮಕ್ಕಳ ಮೈ ಮುಟ್ಟದಿರಿ !! ವೈದೇಹಿ ಎಚ್ಚರಿಕೆ:

“ಹೆಣ್ಮಕ್ಕಳ ಮೈ ಮುಟ್ಟದಿರಿ, ಈ ಸಮಾವೇಶದ ಮೂಲಕ ನಾವು ಸಂಘಟಿತರಾಗಿದ್ದೇವೆ” ಎಂದು ಹೆಣ್ಣು ಮಕ್ಕಳನ್ನು ಕೆಟ್ಟ ದೃಷ್ಟಿಯಿಂದ ನೋಡುವವರಿಗೆ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಲೇಖಕಿ ವೈದೇಹಿ ಎಚ್ಚರಿಕೆ ನೀಡಿದರು.

ಹೆಣ್ಮಕ್ಕಳ ಮೇಲಿನ ದೌರ್ಜನ್ಯದ ವಿರುದ್ಧದ ಹೋರಾಟದಲ್ಲಿ ‘ನಿರ್ಭಯ’ ಒಂದು ಧ್ಯೋತಕ, ಬಾಂವ್ರೀದೇವಿ ಒಂದು ರೂಪಕ ಎಂದು ಬಣ್ಣಿಸಿದ ವೈದೇಹಿ, ಮಹಿಳೆಯರ ಲಜ್ಜೆ, ಸರಳತೆ, ದಾಕ್ಷಿಣ್ಯ ಪರತೆಯಿಂದಾಗಿ ಅವರನ್ನು ಕಡೆಗಣಿಸಿ ಅಪಾರ್ಥ ಮಾಡಿದ್ದರಿಂದಾಗಿ ಮಹಿಳೆಯರಿಂದು ಬೀದಿಗಿಳಿಯಬೇಕಾಗಿದೆ. ನಮ್ಮ ಶಕ್ತಿ ತೋರಿಸಬೇಕಾಗಿದೆ “ ಎಂದು ಅವರು ಹೇಳಿದರು.

ಕಾರ್ಯಕ್ರಮದಲ್ಲಿ ಒಬ್ಬರೇ ಒಬ್ಬರು ಜನಪ್ರತಿನಿಧಿಗಳು ಭಾಗವಹಿಸದಿದ್ದುದರ ಬಗ್ಗೆ ಅಸಮಾಧಾನ ವ್ಯಕ್ತಪಡಿಸಿದ ವೈದೇಹಿ, ಇಂಥವರು ನಮಗೆ ಏನು ರಕ್ಷಣೆ ನೀಡಬಲ್ಲರು ಎಂದು ಖಾರವಾಗಿ ಪ್ರಶ್ನಿಸಿದರು.

ಅಪನಂಬಿಕೆಗಳನ್ನು ಮೀರಿ ಬೆಳೆಯಬೇಕಾಗಿದೆ ಮಹಿಳಾ ಚಳುವಳಿ:

ಲೇಖಕಿ, ಸಂಘಟಕಿ, ಮಹಿಳಾ ಚಳುವಳಿಯ ನಾಯಕಿ ಕೆ.ನೀಲಾ, ಡಾ.ಎಚ್.ಎಸ್.ಅನುಪಮಾ, ಜನವಾದಿ ಮಹಿಳಾ ಸಂಘಟನೆಯ ರಾಜ್ಯ ಪ್ರಧಾನ ಕಾರ್ಯದರ್ಶಿ ಕೆ.ಎಸ್.ಲಕ್ಷ್ಮಿ, ಬಿಜಿವಿಎಸ್‌ನ ಎನ್.ಪ್ರಭಾ ಸಮಾವೇಶದಲ್ಲಿ ಮಾತನಾಡಿದರು. ವಿವಿಧ ಧ್ಯೇಯೋದ್ದೇಶಗಳನ್ನು ಹೊತ್ತ ಸಂಘಟನೆಗಳ ಮಧ್ಯೆ ಭಿನ್ನಾಭಿಪ್ರಾಯ ಇದ್ದೇ ಇರುತ್ತದೆ. ಉದಾಹರಣೆಗೆ ಮೂಲಭೂತವಾದಿಯೂ ಹಾಗೂ ಅಂತರ್ಯದಲ್ಲಿ ಮಹಿಳೆಯ ಸ್ವಾತಂತ್ರ್ಯವನ್ನು ಅಲ್ಲಗಳೆಯುವ ಧೋರಣೆಯುಳ್ಳ ಅಲ್ಪಸಂಖ್ಯಾತರ ಸಂಘಟನೆಯೊಂದರ ಯುವ ವಿಭಾಗ ಹಾಗೂ ಮಹಿಳಾ ವಿಭಾಗ ಸಮಾವೇಶದ ಭಾಗವಾಗಿತ್ತು. ಈ ಸಂಘಟನೆಗಳ ಬಗ್ಗೆ ತೀವ್ರ ಭಿನ್ನಾಭಿಪ್ರಾಯ ಹೊಂದಿದ್ದ ಸಾಹಿತಿ ಸಾರಾ ಅಬುಬಾಕರ್ ಅವರು ಉಳಿದ ಅನೇಕ ಮಹಿಳಾ ಪರ ಸಂಘಟನೆಗಳು ಒಟ್ಟಾಗುವಾಗ ತಾನು ಭಾಗವಹಿಸದೆ ಇರಬಾರದೆಂಬುದಕ್ಕಾಗಿ ತಾನು ಈ ಸಮಾವೇಶದಲ್ಲಿ ಭಾಗವಹಿಸಿದ್ದೇನೆ ಎಂದು ಹೇಳಿದರು. ಇಂಥ ಸಮಾವೇಶಗಳಿಂದ ಅಲ್ಪಸಂಖ್ಯಾತರ ಸಂಘಟನೆಗಳು ಪಾಠಕಲಿತು ತಮ್ಮ ಮಹಿಳಾ ವಿರೋಧಿ (ತೋರಿಕೆಯ ಮಹಿಳಾಪರ) ಧೋರಣೆಗಳನ್ನು ಕೈಬಿಡಬೇಕಾಗಿದೆ.

ಕರಾವಳಿ ಕರ್ನಾಟಕದ ಸಂದರ್ಭದಲ್ಲಿ ಅಲ್ಪಸಂಖ್ಯಾತ ಮೂಲಭೂತವಾದಿಗಳ ಹಾಗೂ ಅಲ್ಪಸಂಖಾತ ಕೋಮುವಾದಿಗಳ ಸಾಮೂಹಿಕ ಸಂಘಟನೆಗಳನ್ನು ಪ್ರಗತಿಪರ ಹೋರಾಟಗಳಲ್ಲಿ ಜತೆಗೂಡಿಸಿಕೊಳ್ಳುವುದರ ಸಾಧಕ ಬಾಧಕಗಳ ಬಗ್ಗೆ ಚರ್ಚೆ, ಚಿಂತನೆ ನಡೆಯಬೇಕಾಗಿದೆ.

‘ವಿಕ್ಟಿಮ್’ ಅಲ್ಲ ‘ಸರ್ವೈವರ್’:

ಅತ್ಯಾಚಾರದಂತಹ ಘೋರವಾದ ಮಹಿಳಾ ದೌರ್ಜನ್ಯಕ್ಕೆ ಒಳಗಾಗಿ ಬದುಕಿ ಉಳಿದವರು ತಮ್ಮನ್ನು ತಾವು ‘ಬಲಿಪಶು’ (ವಿಕ್ಟಿಮ್)ಎಂದು ಎದೆಗುಂದಬಾರದು, ಅವರು ದೌರ್ಜನ್ಯಕ್ಕೊಳಗಾಗಿ ‘ಬದುಕುಳಿದವರು’ (ಸರ್ವೈವರ್) ಎಂದು ಧೈರ್ಯದಿಂದ ಕೋರ್ಟ್ ಕಟ್ಲೆಗಳಲ್ಲಿ ಭಾಗವಹಿಸಬೇಕು ಎಂಬ ಸಾರ್ವತ್ರಿಕ ಅಭಿಪ್ರಾಯ ಸಮಾವೇಶದಲ್ಲಿ ಮಾತನಾಡಿದ ಹಲವರ ಮಾತುಗಳಲ್ಲಿ ವ್ಯಕ್ತವಾಯಿತು. ಸಾಮೂಹಿಕ ಅತ್ಯಾಚಾರದ ಧೀರ ‘ಸರ್ವೈವರ್’ ಆದ ಬಾಂವ್ರದೇವಿಯವರು ಕೂಡಾ ತನ್ನನ್ನು ತಾನು ‘ಬಲಿಪಶು’ ಎಂದು ಒಪ್ಪಲಾರೆ ಎಂದು ದನಿಗೂಡಿಸಿದರು.

ಮನೀ(money) ಮೋಹನ ಗಾನ !

ಬೆಳೆಯದಿದ್ದರೇ ಅನ್ನ, ತಿನ್ನುವುದೇನನ್ನಾ ?
ಹೇಳೋ ಮನ ಮೋಹನಾ_ !
ನೀ ಬೆಳೆಯಲೇ ಬೇಕಿಲ್ಲವೋ__"ಚೆನ್ನಾ"
ಕೊಂಡರೇ ತಿನ್ನಬಹುದು ಬೇಕಾದ್ದನ್ನ..!

ಬಿಡು, ಈಗಿಲ್ಲಾ ಯಾವುದಕೂ ಚಿಂತೀ,
ಬಂದಿದೆ ಹೊಳೆ ಹೊಳೆವ ಜಾಗತಿಕ ಸಂತಿ..!
ನೀನೊಬ್ಬನೇ ಅಲ್ಲಾ, ಹಾಳೂರಿಗೆ ಚೆಲುವಾ
ಕೊಡಲು ಬಂದಿದ್ದಾನೆ ಕಂಪನಿ ಮಾವ ?
ಬೆಳೆಯದಿದ್ದರೇ ನಾನು,
ಬದುಕುವುದು ಹೇಗಣ್ಣಾ ?
ಬೆಳೆಯಲೇ ಬೇಕೆಂದರೇ ನೀನು,
ಅವನೊಡನೇ ಸೆಣಸಣ್ಣ !
ಹುಲಿಯೊಡನೇ ಹುಲ್ಲೆಯೇ
ಅರಣ್ಯ ನ್ಯಾಯ ಇದು ?
ಹುಲ್ಲೆಯೊಡನೇ ಹುಲ್ಲೆ ಬಿಡಲು,
ಪ್ರಾಥಮಿಕ ಶಾಲೆಯೇ ಅದು !

ಇದು ಅನ್ಯಾಯಾ..? ನಿನ್ನಯ ನ್ಯಾಯಾ !
ಉಂಡ ಮನೆಗೆರಡ ಬಗೆಯುವುದೇನಯ್ಯಾ..!?
ಜಾಗತೀಕರಣದ ಮಂತ್ರವಿದು ತಿಳಿಯೋ ಮಂಕೇ..!
ಬಲವಿದ್ದವನದೇ ಬದುಕು ಬಿಡು ಶಂಕೆ !
ಏನಿದ್ದರೂ ಮಾವನ ಜೊತೆಯೇ
ನಾನು ಮನೀ.. ಮೋಹನಾ...!
ನಿನ್ನೊಡನಿದ್ದರೇ, ಆಗುವೇ ನಾನು
ಬರೀ... ಖಾಲೀ.. ಬಣ=ಬಣ ?

– ಬಸು – ಬಳ್ಳಾರಿ

JANASHAKTHI KANNADA VARA PATRIKE MAR 24, 2013 Price : Rs. 10/-
"REGISTERD" Postal Reg. No. RNP/KA/BGS/2078/2013-15 Posted at MBC Bangalore GPO
RNI No. KARKAN /2006/17926 Posted on every Satuar
Licensed to Post without prepayment License No. WPP-283



ಭಾಗ 26

"ಪಶುಗಳಾಗಿದ್ದ ನಾವು ಮನುಷ್ಯರಾಗುತ್ತೇವೆ"

ಸೆಪ್ಟೆಂಬರ್ 14 ರ ಮುಂಜಾವು 2 ಗಂಟೆ–ಮುಷ್ಕರವನ್ನು ಘೋಷಿಸಲಾಯಿತು. ಮೊದಲು ಹೆಚ್ಚು ಪ್ರಜ್ಞಾವಂತರಾಗಿದ್ದ ರೈಲ್ವೆ ಕಾರ್ಮಿಕರು ಮುಷ್ಕರ ಆರಂಭಿಸಿದರು. ಎರಡೇ ಗಂಟೆಗಳಲ್ಲಿ ಗಣಿ ಕಾರ್ಮಿಕರ ಎಲ್ಲಾ ಗುಣಿ (ಪಿಟ್) ಗಳಲ್ಲಿಯೂ ಮುಷ್ಕರ ಆರಂಭವಾಯಿತು.

ಮುಷ್ಕರದ ಮುಖ್ಯ ಬೇಡಿಕೆಗಳು :

ಹಲವು ತಿಂಗಳುಗಳಿಂದ ಬಾಕಿ ಇರುವ ಸಂಬಳ ಕೊಡಬೇಕು, ಸಂಬಳ ಹೆಚ್ಚಿಸಬೇಕು, ಕಾರ್ಮಿಕರನ್ನು ಭೂಮಾಲಕ ಗುತ್ತಿಗೆದಾರರ ಮೂಲಕ ನೇಮಕ ಮಾಡಿಕೊಳ್ಳುವುದನ್ನು ಕೈ ಬಿಡಬೇಕು, ಕಾರ್ಮಿಕ ಸಂಘವನ್ನು ಮಾನ್ಯ ಮಾಡಬೇಕು, ಸಂಘಕ್ಕೆ ಅವರು ಈಗಾಗಲೇ ನಡೆಸುತ್ತಿರುವ ಶಿಕ್ಷಣ ಮೊದಲಾದ ಕಾರ್ಯಕ್ರಮಗಳನ್ನು ನಡೆಸಲು ಕಂಪನಿಯ ಆಡಳಿತ ವರ್ಗ ಹಣ ನೀಡಬೇಕು... ಇತ್ಯಾದಿ 13 ಬೇಡಿಕೆಗಳನ್ನು ಕಾರ್ಮಿಕರ ಸರ್ವ ಸದಸ್ಯರ ಸಭೆ ಕರೆದು ತೀರ್ಮಾನಿಸಿ ಆಡಳಿತ ವರ್ಗಕ್ಕೆ ನೀಡಲಾಗಿತ್ತು.

ಕಾರ್ಮಿಕರ ಜೀವನದ ಬಗ್ಗೆ ವಿವಿಧ ಬೇಡಿಕೆಗಳ ಪಟ್ಟಿಯನ್ನು ಮುಂದಿಡುವಾಗಲೇ ಕಾರ್ಮಿಕರ ಇಡೀ ಜೀವನ ಹಾಗೂ ಭಾವನೆಯನ್ನು ಉದ್ದೇಶಿಸಿ ಅವರನ್ನು ಸೆಟೆದು ನಿಲ್ಲುವಂತೆ ಮಾಡುವ ಒಂದು ಘೋಷಣೆಯನ್ನು ನೀಡಲಾಯಿತು. " ಹೊರೆ ಹೊರುವ ಪಶುಗಳಾಗಿದ್ದ ನಾವು ಮನುಷ್ಯರಾಗುತ್ತೇವೆ. " ಈ ಘೋಷಣೆ ಕಾರ್ಮಿಕರನ್ನು ದೀಪ್ತಗೊಳಿಸಿತು. ಎಲ್ಲ ಕಾರ್ಮಿಕರೂ ಉಕ್ಕಿನಂತಹ ಒಗ್ಗಟ್ಟಿನಿಂದ 'ನಡೆ ಮುಂದೆ ನಡೆ ಮುಂದೆ, ನುಗ್ಗಿ ನಡೆ ಮುಂದೆ. ಜಗ್ಗದೆಯೆ ಕುಗ್ಗದೆಯೆ ನುಗ್ಗು ನಡೆ ಮುಂದೆ ' ಎಂದು ಹೋರಾಟಕ್ಕಿಳಿಯಲು ಹುರಿದುಂಬಿಸಿತು. ಜೊತೆಗೆ ಮುಷ್ಕರಕ್ಕಾಗಿಯೆ ಒಂದು ಪ್ರಣಾಳಿಕೆಯನ್ನು ಬಿಡುಗಡೆ ಮಾಡಿ ಕಾರ್ಮಿಕರ ನಡುವೆ ವ್ಯಾಪಕ ಪ್ರಚಾರ ಮಾಡಿದರು.

ಮುಷ್ಕರ ಆರಂಭವಾದ ಕೂಡಲೆ ಹಳದಿ ಬಾವುಟಗಳ ಮೇಲೆ ಮುಷ್ಕರ ಎಂದು ಬರೆದು ಎಲ್ಲ ಗಣಿ ಪ್ರದೇಶ ಹಾಗೂ ವಸತಿ ಪ್ರದೇಶದಲ್ಲಿ ಹಾರಿಸಲಾಯಿತು. ಕೆಲಸಕ್ಕೆ ಬಂದ ಹಲವು ಕಾರ್ಮಿಕರು ಕಾರ್ಮಿಕ ಸಂಘದ ಸ್ವಯಂ ಸೇವಕರು ನಡೆಸುತ್ತಿದ್ದ ಪಿಕೆಟಿಂಗ್ ನೋಡಿ ವಾಪಸ್ಸು ಹೋದರು. ಈ ಸ್ವಯಂ ಸೇವಕದಳದವರು ಎಷ್ಟು ಶಿಸ್ತಿನಿಂದ ವಿವಿಧ ತಂಡಗಳಾಗಿ ಕೆಲಸ ಮಾಡುತ್ತಿದ್ದರೆಂದರೆ ಗಣಿ ಪ್ರದೇಶದಲ್ಲಿ ಮಾತ್ರವಲ್ಲ ಅವರು ವಾಸ ಮಾಡುವ ಪ್ರದೇಶಗಳಲ್ಲಿಯೂ ಕಾವಲು ಮಾಡಿದರು. ಅವರು ಮನೆಗಳಲ್ಲಿ, ಇತರ ವಸತಿಗಳಲ್ಲಿಯೇ ಉಳಿಯುವಂತೆ ಜೂಜು ಕಟ್ಟೆ, ವೇಶ್ಯಾವಾಟಿಕೆಗಳಿಗೆ ಹೋಗದಂತೆ ಮನವೊಲಿಸಿದರು, ಒತ್ತಾಯ ಹೇರಿದರು.

ಎಲ್ಲರೂ ಬೆರಳು ಕಚ್ಚುವಂತಹ ಶಿಸ್ತು

ಜೂಜು, ಕುಡಿತ, ಅಫೀಮು ಸೇವನೆ ಇವುಗಳಿಂದಾಗಿ ಗದ್ದಲ, ಗಲಾಟೆ, ಅಶಿಸ್ತುಗಳಿಗೆ ಹೆಸರಾಗಿದ್ದ ಅಶಿಕ್ಷಿತ ಗಣಿ ಕಾರ್ಮಿಕರ ಜೊತೆಗೇ ಆ ಪ್ರದೇಶದಲ್ಲಿ ಯಾವಾಗಲೂ ಅಲೆಯುತ್ತಿದ್ದ 5,000ಕ್ಕೂ ಹೆಚ್ಚು ನಿರುದ್ಯೋಗಿಗಳೂ ಸೇರಿ ಅಲ್ಲಿ ಯಾವಾಗಲೂ ಅರಾಜಕತಾ ವಾತಾವರಣ ಇರುತ್ತಿತ್ತು. ಕಾನೂನು ಪಾಲಕರಿಗೂ ತಲೆನೋವಾಗುತ್ತಿತ್ತು. ಮುಷ್ಕರವೆಂದರಂತೂ ಮುಗಿದೇ ಹೋಯಿತು ಘರ್ಷಣೆ, ಜಗಳಗಳ ವಾತಾವರಣ ಮಿತಿ ಮೀರುತ್ತಿತ್ತು. ಆದರೆ ಕಾರ್ಮಿಕ ಸಂಘ ಮೂಡಿಸಿದ ತಿಳುವಳಿಕೆ, ಸ್ವಯಂ ಸೇವಕರ ಅವಿರತ ಶ್ರಮದ ಫಲವಾಗಿ ಎಂತಹ ಶಿಸ್ತಿನ ವಾತಾವರಣ ಮೂಡಿತೆಂದರೆ ಸ್ವತಃ ಕಾನೂನು ಪಾಲಕರಿಗೆ, ಗಣಿ ಕಂಪನಿಯ ಆಡಳಿತ ಮಂಡಳಿಗೆ ಮೂಗಿನ ಮೇಲೆ ಬೆರಳಿಟ್ಟು ಕೊಳ್ಳುವಂತಾಯಿತು. ಅಲ್ಲಿಯ ವರ್ತಕ ಸಂಘಗಳು, ವಾಣಿಜ್ಯ ಮಂಡಳಿ, ಎಲ್ಲ ನಾಗರಿಕರಿಗೂ ಇದು ಅಚ್ಚರಿ ತಂದಿತು.



ಚೀನಾ – 1922ರ ಐತಿಹಾಸಿಕ ರೈಲ್ವೆ ಕಾರ್ಮಿಕರ ಮುಷ್ಕರ

ಮುಷ್ಕರದ ಸಿದ್ಧತೆಗಳ ಬಗ್ಗೆ ತಿಳಿದುಕೊಳ್ಳುತ್ತಿದ್ದ ಗಣಿ ಆಡಳಿತ ಮಂಡಳಿ ಅಲ್ಲಿಯ ಯುದ್ಧಕೋರ ಪಾಳೆಯಗಾರರಿಗೆ, ಸೇನಾಧಿಕಾರಿಗಳಿಗೆ ಯಥೇಚ್ಛವಾಗಿ ಸಂಭಾವನೆ ನೀಡಿ ಇಡೀ ಪ್ರದೇಶದ ಮೇಲೆ ಮಿಲಿಟರಿ ಆಡಳಿತ (ಮಾರ್ಷಲ್ ಕಾನೂನು) ಹೇರುವುದರಲ್ಲಿ ಯಶಸ್ವಿಯಾಯಿತು. ಕಾರ್ಮಿಕರ ಮೇಲೆ ಗುಂಡಿನ ಮಳೆಗರೆದು ಮುಷ್ಕರವನ್ನು ಹತ್ತಿಕ್ಕಬೇಕೆಂದು ಸೇನಾಧಿಕಾರಿಗಳು ಯೋಜಿಸುತ್ತಿರುವಾಗಲೇ ಕಾರ್ಮಿಕ ಸಂಘದ ಕಾರ್ಯಕರ್ತರು ಸೈನಿಕ ಸಮುದಾಯವನ್ನು ಸಂಪರ್ಕಿಸಿದರು. ಅವರಿಗೆ ಮುಷ್ಕರದ ಕಾರಣಗಳನ್ನು ವಿವರಿಸಿ ಅವರ ಮನವೊಲಿಸಿಕೊಂಡರು. ಇದರಿಂದಾಗಿ ಸೈನಿಕರು ಕಾರ್ಮಿಕರ ಮೇಲೆ ದಮನಕಾರಿ ಕ್ರಮಗಳನ್ನು ಕೈಗೊಳ್ಳಲು, ಗುಂಡು ಹಾರಿಸಲು ನಿರಾಕರಿಸಿದರು. ಕಾರ್ಮಿಕರನ್ನ ಗುತ್ತೇದಾರೀ ಪದ್ಧತಿಯ ಮೇಲೆ ನೇಮಕ ಮಾಡುತ್ತಿದ್ದ ಭೂಮಾಲಕ ಗುತ್ತೇದಾರಿಗಳು ಕಾರ್ಮಿಕರ ನೇಮಕಾತಿ ಪದ್ಧತಿಯ ಬದಲಾವಣೆಯ ಬೇಡಿಕೆಯಿಂದ ತಮಗೆ ಆಗಬಹುದಾದ ಅಪಾರ ನಷ್ಟವನ್ನು ತಪ್ಪಿಸಿಕೊಳ್ಳಲು ಕಾರ್ಮಿಕರ ಮೇಲೆ ಒತ್ತಡ ಹಾಕಿ ಅವರು ಹೇಗಾದರೂ ಮಾಡಿ ಕೆಲಸಕ್ಕೆ ಹೋಗುವಂತೆ ಮಾಡಲು ತಮ್ಮ ಕೈಲಾದ ಎಲ್ಲ ಪ್ರಯತ್ನಗಳನ್ನು ನಡೆಸಿದರು. ಆದರೆ ಕಾರ್ಮಿಕರಲ್ಲಿ ಮೊಳೆತ ಎಚ್ಚರ ಹಾಗೂ ಸ್ವಯಂ ಸೇವಕರ ಕಾವಲಿನಿಂದಾಗಿ ಅದು ವಿಫಲವಾಯಿತು.

ಲಿಯು ಶಾವೋಖಿಯುವರ ಕೊಲೆಯ ಪ್ರಯತ್ನ

ಇನ್ನು ಕೊನೆಗೆ ಆಡಳಿತ ವರ್ಗಕ್ಕೆ ಉಳಿದದ್ದು ಅತ್ಯಂತ ಬರ್ಬರವಾದ ಕುತಂತ್ರಗಳು ಮಾತ್ರ. ಕಾರ್ಮಿಕ ವರ್ಗದ ನಾಯಕರನ್ನು ಕೊಲೆ ಮಾಡುವ ಕ್ರೌರ್ಯದ ತಂತ್ರ ಹೆಣೆಯುತ್ತಿದ್ದಾರೆ ಎಂಬ ಗುಪ್ತ ಸಮಾಚಾರ ಪಡೆದ ಪಕ್ಷದ ನೇತೃತ್ವ ಲಿಸಾನ್ ಸೇರಿದಂತೆ ಕೆಲವು ಸಂಗಾತಿಗಳನ್ ಒಂದು ಭೂಗತ ಕೇಂದ್ರಕ್ಕೆ ವರ್ಗಾಯಿಸಲಾ ಬಗ್ಗೆ ನೀವು ಈಗಾಗಲೇ ಓದಿದ್ದೀರಿ. ಮತ್ತೇನ ಮಾಡಬಹುದು ಎಂದು ಗಣಿ ಕಂಪನಿಯ ಆಡಳಿತ ವರ್ಗ ತಲೆ ಕೆರೆದುಕೊಂಡಿತು. ಎಲ್ಲ ನೈತಿಕ ಮಾನದಂಡಗಳನ್ನು ಗಾಳಿಗೆ ತೂ ಸಂಧಾನ ಮಾತುಕತೆಗೆ ಬರುವ ಲಿಯು ಶಾವೋಖಿಯುವರು ಸೇರಿದಂತೆ ಕಾರ್ಮಿ ನಾಯಕರನ್ನು ಕೊಲ್ಲುವ ಕುಯೋಜನ ತಯಾರಿಸಿದರು. ಹೀಗೆ ಮಾತುಕತೆ ನಡೆಯುತ್ತಿರುವಾಗ ಬಂದ ನಾಯಕರನ್ನು ಕೂಡಿ ಹಾಕಿದರು. ಇದರ ಬಗ್ಗೆ ತಿಳಿದ ಕಾರ್ಮಿಕರು ಸಾವಿರಾರು ಸಂಖ್ಯೆಯಲ್ಲಿ ಸಂಧಾನ ನಡೆಯುತ್ತಿದ್ದ ಜಾಗಕ್ಕೆ ಮುತ್ತಿಗೆ ಹಾಕಿದರು. ಆಡಳಿತ ವರ್ಗವನ್ನು ಸೇರಿ ಎಲ್ಲರನ್ನೂ ಕೂಡಿ ಹಾಕಿದರು. ಅಂದಿನ ಚೀನಾದ ಕ್ರೂರ ಪಾಳೆಯಗಾರರ ಆಡಳಿತದಲ್ಲಿ ಅವರಿಗೆ ವಿರೋಧವಾದವರನ್ನು ಹೊಸಕಿ ಹಾಕುವುದು ಸರ್ವೇ ಸಾಮಾನ್ಯವಾಗಿತ್ತು. ಇಂತಹ ಪರಿಸ್ಥಿತಿಯಲ್ಲಿ ತಮ್ಮ ಕಾರ್ಮಿಕ ನಾಯಕರನ್ನು ರಕ್ಷಿಸಿಕೊಳ್ಳಲು ಕಾರ್ಮಿಕ ವರ್ಗದ ನಿರಂತರ ಎಚ್ಚರ ಅತ್ಯಂತ ನಿರ್ಣಾಯಕವಾಗಿತ್ತು.

ಹೀಗೆ ಮುಷ್ಕರ ಸಂಪೂರ್ಣ ಯಶಸ್ವಿಯಾಗಿದ್ದು ಮತ್ತು ಎಂದೂ ಕಾಣದ ಶಿಸ್ತಿನಿಂದ ಸಾಗಿದ್ದಾಗ ಅನಿಯುವಾನ್ ಪ್ರದೇಶದ ವಿವಿಧ ಜನ ಸಮುದಾಯದ

ಪುಟ 10 ಕ್ಕೆ

JANASHAKTHI KANNADA VARA PATRIKE: Printed by G.V.SRIRAMA REDDY, EMS Bhavana, No.37/A, 8th Cross, Mahalakshmi Layout, BANGALORE-560086Published by: G.V.SRIRAMA REDDY EMS Bhavana, No.37/A, 8th Cross, Mahalakshmi Layout, BANGALORE-560086, Karnataka on behalf of / owned by COMMUNIST PARTY OF INDIA (MARXIST) and Printed at : Kriya Prakashana, No. 12, 18th Cross, Sampangirama Nagar, Bangalore 560027 Karnataka(State). and Published at BANGALORE. EMS Bhavana, No.37/A, 8th Cross, Mahalakshmi Layout, BANGALORE-560086 . Editor NITHYANANDASWAMI EMS Bhavana, No.37/A, 8th Cross, Mahalakshmi Layout, BANGALORE-560086 Editor : NITHYANANDASWAMI